# ଅନ୍ତରଙ୍ଗ

Office copy



# ANTARANGA

— ೧೦೦೦ ರೂ. ಬಕ್ಷೀಸು —

**ಈ ಕೆಳಗಿನ ಔಷಧಗಳಲ್ಲಿ ಗುಣವಿಲ್ಲವೆಂದು ಸಿದ್ಧಮಾಡಿಕೊಟ್ಟಲ್ಲಿ ೧೦೦೦ರೂ. ಇನಾಮು**

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ

# ನಪುಂಸಕತ್ವಾರಿ ಗುಳಿಗೆ

**(ಷಂಡತ್ವನಾಶಕ ಗುಳಿಗೆಗಳು, ಕಿ. ೪ ರೂ. ಅಂ. ವೆ. ಬೇರೆ)**

ಮಿತಿಮೀರಿದ ಕಾಮುಕಜೀವನ, ಸ್ವಪ್ನಾವಸ್ಥೆ, ಮುಷ್ಟಿಮೈಥುನದ ಪರಿಣಾಮ ಹಾಗೂ ಅನೈಸರ್ಗಿಕ ಅಭ್ಯಾ ಮತ್ತು ಧಾತುಕ್ಷೀಣತೆ ಮುಂತಾದ ಯಾವದೇ ಕಾರಣದಿಂದ ಬಂದ ನಪುಂಸಕತ್ವ, ಇಂದ್ರಿಯ ಸಿಥಿಲತೆ ನಾಶಮಾ ನವಜೀವನ ಮತ್ತು ಹೊಸಪುರುಷತ್ವ ಪ್ರಾಪ್ತಮಾಡಿಕೊಡುವುದಕ್ಕಾಗಿ ಉತ್ತಮವಿದ್ದ ಬಗ್ಗೆ ೧೫ ವರ್ಷದಿಂದ ಎಲ್ಲ ಯಲ್ಲೂ ಪ್ರಖ್ಯಾತಿಹೊಂದಿವೆ.

ಅತಿಮೈಥುನ, ಸ್ವಪ್ನಾವಸ್ಥೆ, ಮುಷ್ಟಿ ಮೈಥುನ ಮತ್ತು ಅನೈಸರ್ಗಿಕ ಅಭ್ಯಾಸ ಮುಂತಾದ ಅಯೋಗ್ಯ ರೀತಿ ಯಿಂದ ಧಾತುಪಾತವಾದಲ್ಲಿ ಧಾತುಸ್ಥಾನದಲ್ಲಿ ಕಡಕಿ ಉತ್ಪನ್ನವಾಗಿ ಸಿರಗಳು ನಿರ್ಬಲ ಮತ್ತು ಸಿಥಿಲವಾಗಿ **ನಪುಂಸಕತ್ವ** ಸಹ ಪ್ರಾಪ್ತವಾಗುತ್ತದೆ.

ಈ ಔಷಧ ಸೇವನೆಯಿಂದ ನಿರ್ಬಲ ಮತ್ತು ಸಿಥಿಲವಾದ ಸಿರಗಳನ್ನು ಸಶಕ್ತವನ್ನಾಗಿಮಾಡಿ ಕುಂದಿಹೋದ ಪುರುಷತ್ವ ಪುನಃ **ಬರುವದಲ್ಲದೆ** ಕಡಕಿ ನಾಶವಾಗಿ ವೀರ್ಯವೃದ್ಧಿಯಾಗಿ ಗಟ್ಟಿಯಾಗಹತ್ತುವದು. ಪಚನಶಕ್ತಿ ಸುಧಾರಿಸಿ ಜಠರಾಗ್ನಿ ಉಜ್ವಲಮಾಡುತ್ತದೆ. ಬದ್ಧ**ಕೋಷ್ಠ, ಅಜೀರ್ಣ** ಅಪಚನಾದಿ ವಿಕಾರಗಳನ್ನು ದೂರಮಾಡಿ ನಿಯಮಿತ ಮಲಶುದ್ಧಿ ಮಾಡುತ್ತದೆ. ಶಾರೀರಿಕ ಮತ್ತು ಮಾನಸಿಕ ಅಶಕ್ತತೆಯನ್ನು **ಹೋಗಲಾಡಿಸಿ** ಜ್ಞಾನತಂತು ಸತೇಜವನ್ನಾಗಿ ಮಾಡಿ ನವಜೀವನ ಪ್ರಾಪ್ತ ಮಾಡಿಕೊಡುತ್ತದೆ. ಎಷ್ಟೋ ಔಷಧಗಳನ್ನು ತೆಗೆದುಕೊಂಡು ನಿರಾಶರಾದ ಪುರುಷ ಸನ್ ೧೯೩೫ರಿಂದ ಈ ಔಷಧದಿಂದ ಏಳು ದಿವಸಗಳಲ್ಲಿ ಪೂರ್ಣ ಗುಣಹೊಂದಿರುವರು. ಈ ವಿಷಯವಾಗಿ ಆವ ಎಲ್ಲ ಪತ್ರವ್ಯವಹಾರವನೂ ಗುಪ್ತವಾಗಿರಿಸಲ್ಪಡುವದು. ಅನುಪಾನ ಪತ್ರಿಕೆ ಔಷಧದ ಕೂಡ. ಪಥ್ಯ: ಏನೂ ಇಲ್ಲ.

# ಪ್ರಮೇಹ ಗನೋರಿಯ ನಾಶಕ ಗುಟಿ

ಕಿಮ್ಮತ್ತು ೪ —೮ —೦

ಪ್ರಮೇಹ ವ್ಯಾಧಿಯಲ್ಲಿ ಛೇದಿಸಿದರೆ ತಮ್ಮ ಮತ್ತು ತಮ್ಮ ಭಾವೀ ಪೀಳಿಗೆಯ ನಾಶಮಾಡದೆ ಬಿಡಲಾರದು. ಇಂ ಮಹಾ ಹಾನಿಕಾರಕ ಎಲ್ಲಾ ೨೦ (ಇಪ್ಪತ್ತು) ಪ್ರಕಾರದ ಪ್ರಮೇಹ ಪರಮಾ ಅದರಿಂದ ಉದ್ಭವಿಸಿದ ಜನನೇಂದ್ರಿಯ ಸಂಬಂಧಿ ರೋಗ ಇವುಗಳ ಮೇಲೆ ಈ ಔಷಧವು ತೀವ್ರ ಗುಣಕಾರಿ ಅದೆ.

ಎಂತಹ ಹಳೇ ಪ್ರಮೇಹ ಇದ್ದರೂ ಕೂಡ ಈ ಔಷಧದ ಸೇವನೆಯಿಂದ ತ್ವರಿತ ಗುಣವಾಗುತ್ತದೆ. **ಮೂತ್ರ** ಮಾರ್ಗ ಸ್ವಚ್ಛವಾಗಿ ಮೂತ್ರದ ಕಾಲಕ್ಕೆ ಉಂಟಾಗುವ ವೇದನೆ ಮತ್ತು ಉರುಪು ಇಲ್ಲದಂತಾಗುತ್ತದೆ. **ಕೀವು ಮತ್ತು** ಪ್ರಮೇಹ ಹೋಗುವದು ಬಂದಾಗುತ್ತದೆ. ಮೂತ್ರಾಶಯದ ಎಲ್ಲ ವಿಕಾರಗಳನ್ನು ನಷ್ಟಪಡಿಸಿ ಶರೀರದಲ್ಲಿಯ **ಅಶುದ್ಧ** ತತ್ವಗಳನ್ನು ಮೂತ್ರಮಾರ್ಗದಿಂದ ಹೊರದೂಡಿ ಪ್ರಮೇಹ ಮತ್ತು ಅದರಿಂದ ಉದ್ಭವಿಸಿದ ಎಲ್ಲ ವ್ಯಾಧಿ**ಗಳನ್ನು ಸಮೂ** ನಷ್ಟಮಾಡಿ ಕಾಯಂ ಗುಣಪಡಿಸುತ್ತದೆ, ಅನುಪಾನ ಪತ್ರಿಕೆ ಔಷಧದ ಕೂಡ. ಪಥ್ಯ ಏನೂ ಇಲ್ಲ. **ಕಿಮ್ಮತ್ತಿ** ಹೊರತಾಗಿ ಅಂಚೆವೆಚ್ಚ ಬೇರೆ.

## ಕಿ.] ವನಿತಾ ಕಲ್ಯಾಣ ಪ್ರದರಾಂತಕ [೫—೦—೦

ಸ್ತ್ರೀಯರ ಪ್ರದರ ಶೇಗು ಇಲ್ಲವೆ ಮುಟ್ಟು ದೋಷ ಮತ್ತು ಗರ್ಭಾಶಯ ಸಂಬಂಧಿ ವಿಕಾರ **ಇವುಗಳ ಮೇ** ಅತ್ಯಂತ ಉಪಯುಕ್ತವಿದೆ—

ಶ್ವೇತ—ರಕ್ತ ಪ್ರದರ, ಮುಟ್ಟು ಹೆಚ್ಚು ಕಡಿಮೆ ಅನಿಯಮಿತ ಮುಟ್ಟಾಗುವಿಕೆ ಮುಟ್ಟಾದ ಕಾಲಕ್ಕೆ ರಕ್ತಸ್ರಾವ ಆಗದೆ ಗುಲಾಬಿ, ಹಳ ಕಪ್ಪು ಮುಂತಾದ ಬಣ್ಣದ ದುರ್ಗಂಧಯುಕ್ತ ಮುಟ್ಟು ಸೇರಿನಂತೆ ಹೋಗುವಿಕೆ ಇವೆಲ್ಲವುಗಳನ್ನು **ಖಂಡಿತವಾಗಿ ನಷ್ಟಪಡಿಸುತ್ತ. ಇದರ ಸೇವ** ನೆಯಿಂದ ಪ್ರದರ ಮತ್ತು ಮುಟ್ಟು ದೋಷ ಇವುಗಳಿಂದ ಕೆಟ್ಟಿಟ್ಟ ಗರ್ಭಾಶಯ ಇಲ್ಲವೆ **ಕುಸುಮದಲ್ಲಿ ಆಗುವ ವೇದನೆ, ನಡು, ತಲೆ, ತೊಡೆ, ಮಾಕ** ಸಂದು ಇವುಗಳಲ್ಲಿ ನೋವು ಸಂಭೋಗ ಸಮಯದಲ್ಲಿ ಕಷ್ಟ, ಗರ್ಭಧಾರಣೆ, ಆಗದಿರುವಿಕೆ ಆದರೂ ಗರ್ಭಪಾತ **ಮುಂತಾದ ಎಲ್ಲ** ವಿಕಾರ ಮಾಕ ಅದರಿಂದ ಉತ್ಪನ್ನವಾದ ಎಲ್ಲ ರೋಗಗಳನ್ನೂ ನಾಶಮಾಡಿ ಶರೀರದಲ್ಲಿ ಬಲ ಪುಷ್ಟಿ ಮತ್ತು ಗರ್ಭಾಶಯದಲ್ಲಿ ಗರ್ಭಧಾರಣೆಯ ಶಕ್ತಿ ಉಂಟಾ ತ್ತದೆ. ಈ ಔಷಧ ಸೇವನೆಯಿಂದ ಸಾವಿರಾರು ಸ್ತ್ರೀಯರು ಗುಣಹೊಂದಿದ್ದಾರೆ. ಪಥ್ಯ ಏನೂ ಇಲ್ಲ. ಅ. ವೆ. ಬೇರೆ.

**ಪತ್ತೆ—ವೈದ್ಯರಾಜ ಎ. ಬಿ. ಸಿದನಾಳ,**

**ಮನೆ ನಂಬರ ೧೩೪೯, ಎ. ವಾ. ಬಸವಣಗಲ್ಲಿ, ಬೆಳಗಾವಿ**

ಸಂಪುಟ ೫

# ಅಂತರಂಗ

ಸಂಚಿಕೆ ೧೧೨

ಸಪ್ಟಂಬರ್ ೧೦, ೧೯೪೦

## ANTARANGA-WEEKLY, UDIPI.

ಪ್ರಧಾನ ಸಂಪಾದಕ:
ಮಿಯಾಳ ನರಸಿಂಹಾಚಾರ್.

ಸಂಪಾದಕ:
ಕೆ. ಹೈದರ್.

ಸಹ-ಸಂಪಾದಕರು:
ಪಿ. ವಿ. ಆಚಾರ್ಯ. ಪಿ. ಎಲ್. ಅಡಿಗ.

ಸಲಹೆಗಾರರ ಮಂಡಲಿ:
ಶ್ರೀ ಬಿ. ವಾಸುದೇವರಾವ್, ಬಿ. ಎ., ಬಿ. ಎಲ್.
ಶ್ರೀ ಕೊರಡ್ಕಲ್ ಶ್ರೀನಿವಾಸ ರಾವ್, ಗ್ರಂಥಕರ್ತ
,, ಆರ್. ಆರ್. ಕುಂಜೂರ್.
,, ಪಿ.ವಿ. ಉಪಾಧ್ಯಾಯ, ಬಿ.ಎ., ಎಲ್.ಎಲ್.ಬಿ.
,, ಕೆ. ಎಚ್. ಶೆಟ್ಟಿ, ಮೆನೇಜರ್, ನವಯುಗ
,, ಆರ್. ಎಸ್. ಶೆಣೈ, ಸಂಪಾದಕ, ಧುರೀಣ
ಶ್ರೀ ಬನ್ನಂಜೆ ರಾಮಾಚಾರ್ಯ, ಸಂಪಾದಕ, ಧುರೀಣ

**PROPRIETORS:**
**GENERAL SUPPLIES LTD, UDIPI.**

**Our Advertising Agent & Representative at Bombay:**
**Sri. K. K. HEBBAR, 12, Wallace Street, Fort, Bombay.**

### ADVERTISEMENT RATES
PER INSERTION

| | | | | |
|---|---|---|---|---|
| Full page | Rs. | 15 | 0 | 0 |
| Half page | ,, | 8 | 0 | 0 |
| Quarter page | ,, | 5 | 0 | 0 |
| ⅛ page | ,, | 3 | 0 | 0 |
| Cover back | ,, | 30 | 0 | 0 |
| Cover inside | ,, | 22 | 8 | 0 |
| Sq. inch | As. | 0 | 8 | 0 |

A commission 6¼% will be allowed on contracts for above 3 months and below 6 months & 12½% for above 6 months & within a year.

All previous rates are cancelled.
14-4-1940

### ADVERTISERS PLEASE NOTE:

- Advertisement Charges are payable in advance.
- Any change in the advertisement should be intimated a fortnight in advance.
- Blocks, if any will be returned at the cost of the advertiser.
- The management reserves the right to reject advertisements, which may be deemed objectionable.

Advertisement Manager,
ANTARANGA, UDIPI.

Bangalore Chief Agency Office: 45 A. S. Street, Bangalore City.

# Thus observes the Indian Insurance Journal

## in June, 1940 issue:-

"A splendid example of a mutual life assurance company that has conducted its first five years' affairs on an exceptionally economic basis and has in a short time come to be recognised as a really sound company is the Canara Mutual Assurance Company of Udipi in South India."

. . . . . . .

"We have beencarefully watching the progress of the Canara Mutual since it was established in 1935 and we feel confident that the Company is staffed with men who exercise caution in the selection of lives as well as in the manner of investing its life assurance funds. Not only that. They know also how to secure good business at low cost. A combination of such excellent qualities are not very common among managements of insurance Companies in this country,

. . . . . . .

Recenty the constitution of the Company has been amended by which even policy-holders holding small policies are entitled to vote at meetings.

*ALL PROFITS TO POLICY-HOLDERS ALONE*

**THE CANARA MUTUAL ASSURANCE COMPANY, LIMITED.**

**UDIPI. S. INDIA.**

*NO SHARE-HOLDERS TO SHARE IN THE PROFITS.*

# ಅಂತರಂಗೀಯ



## ಶ್ರೀ. ಎಮ್. ಎನ್. ರ್‍ಯೊಗಳ ಅಂತರ್ಲಾಗ

ಶ್ರೀ ರ್‍ಯೊಗಳು ಅಂತರ್ಲಾಗ ಹೊಡಿಯುವುದರಲ್ಲಿ ತಜ್ಞರಿರುವಂತಿದೆ. ಸಾಮ್ರಾಜ್ಯಶಾಹಿಯ ಕಡು ದ್ವೇಷಿಯಾದ ಅವರು ಇಂದು ಅಪ್ರತ್ಯಕ್ಷವಾಗಿ ಅದನ್ನು ಸಮರ್ಥಿಸುವ ಧೋರಣೆ ವಹಿಸಿದ್ದಾರೆ. ಫೆಸಿಸ್ಟರನ್ನು ನಿಷೇಧಿಸಲು ಹಿಂದುದೇಶದಲ್ಲೆಲ್ಲ ಸಭೆ ನಡಿಸುವ ಪ್ರಯತ್ನ ಮಾಡಿದ್ದಾರೆ. ಈ ಸಂದಿಗ್ಧ ಕಾಲದಲ್ಲಿ ಕಾಂಗ್ರೆಸಿನವರು ಅಧಿಕಾರ ಸ್ವೀಕರಿಸಬೇಕೆಂದು ಕೂಗೆಬ್ಬಿಸಿದ್ದಾರೆ. ಸಾಮುದಾಯಕ ಕ್ರಾಂತಿಯ ಇವರ ವಾದಕ್ಕೂ ಈ ಅಂತರ್ಲಾಗಕ್ಕೂ ಸಂಬದ್ಧತೆಯಾದರೂ ಏನೆಂದು ತಿಳಿಯುವುದಿಲ್ಲ. ಸಂಬದ್ಧತೆಯು ಮೂರ್ಖರ ಲಕ್ಷಣವೆಂಬ ಮಾತನ್ನು ಶ್ರೀ ರ್‍ಯೊಗಳು ಪ್ರತೀಕಾರ ಬುದ್ಧಿಯಿಂದ ಆಚರಿಸುತ್ತಿರುವಂತಿದೆ.

○ ● ○

## ಗೊಬೆಲ್ಸರ ಹೆಜ್ಜೆಯ ಮೇಲೆ ಹೆಜ್ಜೆಯೇ?

ಜರ್ಮನ್ ಪ್ರಚಾರ ಮಂತ್ರಿ ಡಾಕ್ಟರ್ ಗೊಬೆಲ್ಸರು ಸುಳ್ಳು ಪ್ರಚಾರದಲ್ಲಿ ನಿಪುಣ. ಅದನ್ನೊಂದು ಕಲೆಯನ್ನಾಗಿ ಮಾಡಿದನಾತ. ಈಗೀಗ ಬ್ರಿಟಿಷರೂ ಆತನ ಮಾದರಿಯನ್ನನುಸರಿಸುತ್ತಿರುವಂತಿದೆ. ಹೋರಾಟದ ದೃಷ್ಟಿಯಿಂದ ಬ್ರಿಟಿಷ್ ಸೋಮಾಲೇಂಡ್ ಇಟೆಲಿಯಾನರ ಕುತ್ತಿಗೆಗೊಂದು ಕೊರಡು. ಅದು ಹೋದುದರಿಂದ ತಮಗೇನೂ ಹಾನಿಯಾಗಲಿಲ್ಲೆಂದು ಬ್ರಿಟಿಷರ ಪ್ರಚಾರ. 'ಇಂಗ್ಲೆಂಡೇ ಕೈತಪ್ಪಿ ಹೋದರೂ ಅದೇನೂ ಪ್ರಾಮುಖ್ಯವಲ್ಲ, ತಾವು ಕೆನಡದಿಂದ ಹೊರಾಡುವೆವೆ'ಂದು ಬ್ರಿಟಿಷರನ್ನಬಹುದೆಂದು ನಾಝಿಗಳು ತಮಾಷೆಮಾಡುತ್ತಿದ್ದಾರೆ ಇದಕ್ಕೆ. ಬ್ರಿಟಿಷ್ ಸೋಮಾಲಿಲೇಂಡು ಅಪ್ರಯೋಜಕವಾದುದಾದರೆ ಮೊದಲು ಇಟೆಲಿಯಾನರನ್ನು ಅಲ್ಲಿ ಪ್ರಬಲವಾಗಿ ವಿರೋಧಿಸುವ ಪ್ರಯತ್ನ ಮಾಡಿದುದೇಕೆ? ಆಮೇಲೆ ಹಿಂದೆ ಸರಿದುದೇಕೆ? ಅಗೋಸ್ತು ತಾ. 24ರಲ್ಲಿ ರಾಮ್ಸ್‌ಗೇಟ್ ಎಂಬ ಸ್ಥಳದ ಮೇಲೆ ಜರ್ಮನ್ ವಿಮಾನಗಳು 500 ಬೋಂಬೆಸೆದು 1000 ಮನೆ ಮತ್ತು ಅಂಗಡಿಗಳು ಬಿದ್ದು ಹೋದ ಸುದ್ದಿಯೇ ಪ್ರಕಟವಾಗಿರಲಿಲ್ಲ. ಅದನ್ನು ಮಿ. ಚರ್ಚಿಲ್ಲರು ಸೆಪ್ಟೆಂಬರ ತಾ. 1ರಲ್ಲಿ ವ್ಯಕ್ತಗೊಳಿಸಿದುದು. ಆದುದರಿಂದ ಬ್ರಿಟಿಷರು ಕೂಡಾ ಸ್ಥಿತಿಗತಿಯನ್ನು ಇದ್ದಕ್ಕಿದ್ದಂತೆ ಕೊಡುವ ಹಾಗೆ ತೋರುವುದಿಲ್ಲ.

○ ○ ○

## ದುರ್ದೈವಿ ಕೆರೋಲರು!

ರುಮೇನಿಯದ ಅರಸ ಕೆರೋಲರು ಬಹಳ ದುರ್ದೈವಿಯೆನ್ನಬಹುದು. ತರುಣ ವಯಸ್ಸಿನಲ್ಲಿ ಪ್ರೇಮೋಪಾಸಕರಾಗಿ ಹಲವು ವರ್ಷ ರಾಜ್ಯವನ್ನೇ ತ್ಯಜಿಸಿಬಿಟ್ಟರು. ಮೆಡಮ್ ಉಪೆಸ್ಕೂ ಎಂಬ ಲೋಕಸುಂದರಿಯೊಂದಿಗೆ ರಮಿಸಿ ಕಾಲಕಳೆದರು. ವಯಸ್ಸು ಮಾಗಿ ಪರಿಪಕ್ವ ಅನುಭವ ಪಡೆದು ರಾಜ್ಯಭಾರ ಮಾಡತೊಡಗಿದ ಕೆಲವೇ ವರ್ಷಗಳಲ್ಲಿ ಬಂತೇ ಬಂತು ಇನ್ನೊಂದು ವಿಪತ್ತು. ರಮೇನಿಯಾದ ಗಲಾಟೆಯಿಂದಾಗಿ ಅವರೀಗ ತನ್ನ ರಾಜ್ಯಭಾರದ ಅಧಿಕಾರವನ್ನೆಲ್ಲಾ ಯುದ್ಧಮಂತ್ರಿ ಅಂಟೊ ನೆಸ್ಕೂರವರಿಗೆ ಕೊಟ್ಟು, ರುಮೇನಿಯದ ಪಾರ್ಲಿಮೆಂಟನ್ನೇ ರದ್ದು ಪಡಿಸಬೇಕಾಗಿದೆ. ಮಾತ್ರವಲ್ಲದೆ ರಾಜ್ಯವನ್ನೇ ತನ್ನ ಮಗನಿಗೆ ಬಿಟ್ಟುಕೊಟ್ಟು ರುಮೇನಿಯ ಬಿಟ್ಟು ಹೋಗಬೇಕಾಗಿದೆ. ರುಮೇನಿಯವು ಈಗ ಸಂಪೂರ್ಣವಾಗಿ ಡಿಕ್ಟೇಟರ್ ಶಾಹಿ ಮಾರ್ಗ ಹಿಡಿದಿದೆ. ಕೆರೋಲರು, ಯೆಹೂದ್ಯ ಸ್ತ್ರೀಯಾದ ಉಪೆಸ್ಕೂವನ್ನು ಹಿಡಿದುಕೊಂಡು ಎಲ್ಲಿ ಹೋಗುವರೋ?

# ಅಂತರಂಗ

ಸೆಪ್ಟೆಂಬರ ೧೦, ೧೯೪೦.


## ಅಂತರಂಗದ ಹಿಂದಿನ ಮತ್ತು ಮುಂದಿನ ವ್ಯವಸ್ಥೆ

ಅಂತರಂಗವನ್ನು ಎರಡು ವರ್ಷಗಳ ವರೆಗೆ ಜಯಶೀಲವಾಗಿ ನಡಿಸಿ, ಅದಕ್ಕೆ ಅಖಿಲ ಕರ್ನಾಟಕದಲ್ಲೊಂದು ಸ್ಥಾನವನ್ನು ಗಳಿಸಿದ ಪ್ರಶಂಸೆಯು ಅದರ ಸಂಚಾಲಕರಾದ ಶ್ರೀ. ಎಸ್. ಯು. ಪಣಿಯಾಡಿಯವರಿಗೆ ಸಲ್ಲತಕ್ಕದ್ದು. ಎರಡೇ ವರ್ಷಗಳಲ್ಲಿ ಅಂತರಂಗವು ಶಕ್ತಿಮೀರಿ ಕನ್ನಡಿಗರ ಸೇವೆಮಾಡಿ ಸರ್ವರ ಆದರಕ್ಕೆ ಪಾತ್ರವಾಗಿದೆ. ಇದಕ್ಕಾಗಿ ಶ್ರೀ. ಎಸ್. ಯು. ಪಣಿಯಾಡಿಯವರೂ ಅಂತರಂಗದ ಸಂಪಾದಕ ವರ್ಗದವರೂ ಅಭಿನಂದನೀಯರಿದ್ದಾರೆ. ವಿಧಿವಿಲಾಸಕ್ಕೆ ಎಲ್ಲರೂ ಒಳಗಾಗಲೇ ಬೇಕು. ಎಂತಹ ಪೌರುಷವಂತ ವ್ಯಕ್ತಿಯಾದರೂ, ವಿಧಿಗೆ ಮಣಿಯಲೇ ಬೇಕು. ಅದೊಂದು ದುರ್ವಿಧಿಗೊಳಗಾಗಿ ಶ್ರೀ. ಪಣಿಯಾಡಿಯವರು, ತನ್ನ ಸರ್ವಸ್ವವನ್ನರ್ಪಿಸಿ ಅವಿಶ್ರಾಂತವಾಗಿ ದುಡಿದು ಸ್ಥಾಪಿಸಿ ಬೆಳೆಸಿದ ಸಂಸ್ಥೆಗಳನ್ನೀಗ ಬಿಟ್ಟು ಹೋಗಬೇಕಾಗಿ ಬಂದುದು ಅತ್ಯಂತ ವಿಷಾದಕರ. ಅವರು ಬಿಟ್ಟುಹೋದ ಮೇಲೂ ಅವರ ಸಹವ್ಯವಸಾಯಿಗಳಾದ ನಾವು ಕೆಲವರು, ಅವರು ಸ್ಥಾಪಿಸಿದ್ದ ಸಂಸ್ಥೆಗಳನ್ನೆಲ್ಲಾ ನಡಿಸಲೆತ್ನಿಸಿದೆವು. ಆದರೆ ನಮ್ಮಲ್ಲಿ ಶ್ರೀ. ಪಣಿಯಾಡಿಯವರಂತಹ ಶಕ್ತಿಯಾದರೂ ಎಲ್ಲಿಂದ ಬರಬೇಕು? ಅವರ ಎಲ್ಲಾ ಸಂಸ್ಥೆಗಳನ್ನೂ ನಡಿಸಲು ನಮಗೆ ಸಾಧ್ಯವಾಗಲಿಲ್ಲ. ಆದುದರಿಂದ ಸಾಧ್ಯವಾದುದನ್ನು ಮಾತ್ರ ನಡಿಸಿ ಉಳಿದುವನ್ನು ನಾವು ಬಿಟ್ಟುಬಿಡಬೇಕಾಗಿದೆ. ಆ ಪ್ರಕಾರ ಅತ್ಯಂತ ವಿಷಾದಪೂರ್ವಕವಾಗಿ ಅಂತರಂಗವನ್ನು ನಿಲ್ಲಿಸುವ ನಿರ್ಧಾರಮಾಡಿರುತ್ತೇವೆ. ಈ ವರೆಗೆ ನಮಗೆ ಎಲ್ಲಾ ರೀತಿಯಿಂದ ಸಹಾಯಮಾಡಿ ಅಂತರಂಗವನ್ನು ಯಶಸ್ವಿಪತ್ರಿಕೆಯನ್ನಾಗಿ ಮಾಡುವುದರಲ್ಲಿ ನೆರವಾದವರೆಲ್ಲರಿಗೂ ನಾವು ತುಂಬಾ ಆಭಾರಿಗಳಿದ್ದೇವೆ. ನಾವು ನಿಲ್ಲಿಸಬೇಕಾಗಿ ಬಂದಾಗ ಅಂತರಂಗವನ್ನು ಯಥಾಪ್ರಕಾರ ನಡೆಸಲು ನವಯುಗದ ಶ್ರೀ. ಕೆ. ಎಚ್. ಶೆಟ್ಟಿ ಮತ್ತು ಶ್ರೀ. ಕೆ. ಕೆ. ಶೆಟ್ರು ಮುಂದೆ ಬಂದಿರುವುದು ಸಂತೋಷಕರವಿದೆ. ಅಂತೂ ಅಂತರಂಗವು ಯಥಾಪ್ರಕಾರ ಕನ್ನಡಿಗರ ಸೇವೆಮಾಡುವುದೆಂಬುದು ಶುಭವಾರ್ತೆ. ಇಂದಿನ ಪರಿಸ್ಥಿತಿಯಲ್ಲಿ ಅದನ್ನು ನಡಿಸುವುದು ಹಿರಿದಾದೊಂದು ಜವಾಬ್ದಾರಿ. ಅದನ್ನು ಹೊತ್ತಿರುವ ಹೊಸ ಸಂಚಾಲಕರಿಗೆ ಕನ್ನಡಿಗರೆಲ್ಲರೂ ಇತೋಪ್ಯತಿಶಯವಾಗಿ ನೆರವಾಗಬೇಕೆಂದು ಪ್ರಾರ್ಥಿಸುತ್ತೇವೆ.

**ಮಿಜಾರು ನರಸಿಂಹಾಚಾರ್,**

ಪ್ರಧಾನ ಸಂಪಾದಕ.

ಶ್ರೀ. ಪಣಿಯಾಡಿಯವರು ಹಿರಿಯ ಉದ್ದೇಶದಿಂದ ಸ್ಥಾಪಿಸಿ, ಬಹಳವಾಗಿ ಶ್ರಮಿಸಿ ಬೆಳೆಸಿ ಕನ್ನಡಿಗರ ಹೆಚ್ಚಿನ ಆದರ ಮತ್ತು ಪ್ರೋತ್ಸಾಹಕ್ಕೆ ಪಾತ್ರವಾಗಿರುವ ಅಂತರಂಗವನ್ನು ಸಾಯಗೊಡುವುದು ಕರ್ನಾಟಕ ಪತ್ರಿಕಾ ಪ್ರಪಂಚಕ್ಕೇನೇ ದೊಡ್ಡ ಹಾನಿ. ಆದುದರಿಂದ ಪತ್ರಿಕಾವ್ಯವಸಾಯದಲ್ಲಿ ಕೆಲಮಟ್ಟಿಗೆ ದುಡಿಯುತ್ತಿರುವ ನಾವು ನವಯುಗವನ್ನು ನಡೆಸುವ ಜವಾಬ್ದಾರಿಯೊಂದಿಗೆ ಅಂತರಂಗದ ಜವಾಬ್ದಾರಿಯನ್ನೂ ಹೊರುವ ಎದೆಗಾರಿಕೆಯುಳ್ಳವರಾಗಿರುವೆವು. ಈ ಕಷ್ಟಕಾಲದಲ್ಲಿ ಇದ್ದ ಜವಾಬ್ದಾರಿಯನ್ನು ಇಮ್ಮಡಿಮಾಡುವುದರಿಂದ ಅದೆಷ್ಟು ಕಷ್ಟಕ್ಕೊಳಗಾಗಬೇಕೆಂಬುದು ಬಹುಮಟ್ಟಿಗೆ ಎಲ್ಲರಿಗೂ ತಿಳಿದ ವಿಷಯ. ನಮಗಂತೂ ಅನುನಿತ್ಯದ ಅನುಭವ. ಆದರೂ ಅದೊಂದು ಅಂತಃಸ್ಫುರಣೆಯು ಈ ಜವಾಬ್ದಾರಿಗೆ ಹೆಗಲೊಡ್ಡಲು ನಮ್ಮನ್ನು ಮುಂದೂಡಿದೆ. ಕನ್ನಡಿಗರೆಲ್ಲರೂ ಹಿಂದಿನಂತಹ ಪ್ರೋತ್ಸಾಹವನ್ನೇ ಮುಂದೆಯೂ ಕೊಟ್ಟಲ್ಲಿ ಅದನ್ನು ಜಯಶೀಲ ಪತ್ರಿಕೆಯನ್ನಾಗಿ ಮಾಡಬಹುದೆಂಬ ವಿಶ್ವಾಸವು ನಮ್ಮಲ್ಲಿದೆ. ಆ ವಿಶ್ವಾಸದಿಂದಲೇ ನಾವೀಗ ಕಾರ್ಯಕ್ಕೆ ಕೈಹಾಕಿರುವೆವು. ನಮ್ಮ ವಿಶ್ವಾಸವು ನಿರರ್ಥಕವಾಗಲಾರದೆಂದು ನಂಬುವೆವು.

**ಕೆ. ಕೆ. ಶೆಟ್ಟಿ,** **ಕೆ. ಎಚ್. ಶೆಟ್ಟಿ.**

# ವಾಕ್ಚಿತ್ರ ಪ್ರಪಂಚ

**ಶಾಂತಾಆಪ್ಟೆ ತಮಿಳು ಚಿತ್ರದಲ್ಲಿ:-** ಪ್ರಖ್ಯಾತ ಪ್ರಭಾತ ಕಂಪೆನಿಯೊಡನೆ ಕೆಲಸಮಾಡಿ ಹೊರಬಂದಂದಿನಿಂದ ಶಾಂತಾಆಪ್ಟೆಯು ಈ ವರೆಗೆ ಯಾವ ಚಿತ್ರದಲ್ಲಿಯೂ ನಟಿಸಿರುವಂತೆ ತೋರುವುದಿಲ್ಲ. ಪ್ರಭಾತದ ಶಾಂತಾರಾಮರು ಬೇರೆ ನಟಿಗಳನ್ನೇ ಸಿದ್ಧಪಡಿಸಿಕೊಂಡು ಮುಂದೊತ್ತುತ್ತಿದ್ದಾರೆ. ಶಾಂತಾ ಈಗ ಮದ್ರಾಸಿನ ರೋಯಲ್ ಟೋಕಿ ಕಂಪೆನಿಯಲ್ಲಿ ಸಾವಿತ್ರಿ ಚಿತ್ರದಲ್ಲಿ ಸಾವಿತ್ರಿ ಪಾತ್ರವಹಿಸಲಿರುವಳಂತೆ. ಬರುವ ನವಂಬರದಲ್ಲಿ ಈ ಚಲಚಿತ್ರ ತಯಾರಾಗುವದಂತೆ. ಪ್ರಾಯಶಃ ಈಗ ಶಾಂತಾ ತಮಿಳು ಕಲಿಯುತ್ತಿರಬೇಕು.

**ಯುದ್ಧ ಮತ್ತು ಚಲಚಿತ್ರ ಕೈಗಾರಿಕೆ:-** ಯುದ್ಧದಿಂದಾಗಿ ಹಿಂದೀ ಸಿನೆಮ ಕೈಗಾರಿಕೆಗೆ ದೊಡ್ಡ ಪೆಟ್ಟಾಗಿದೆ. ಕೆಲವು ದಿವಸಗಳ ಮೊದಲು ಇಂಗ್ಲೆಂಡಿನಿಂದ ಒಂದು ಸ್ಟೀಮರಿನಲ್ಲಿ ರೂ. 45,000ದಷ್ಟರ ಫಿಲ್ಮ ಮತ್ತು ಫೋಟೋಗ್ರಾಫಿಯರ್ ಸಾಮಾನುಗಳು ಬಾರದಿದ್ದರೆ ಬೊಂಬಾಯಿಯ ಸಿನೆಮ ಕಂಪೆನಿಗಳು ಬಹಳ ನಷ್ಟಕ್ಕೀಡಾಗುತ್ತಿದ್ದುವೆಂದು ತಿಳಿದುಬರುತ್ತದೆ. ಇತರ ಕಡೆಯವರ ಹಾಡೂ ಇದೇ. ಸರಕಾರವು ಹಿಂದೀ ಸಿನೆಮ ಕೈಗಾರಿಕೆಗೆ ಒಂದಿಷ್ಟು ಪ್ರೋತ್ಸಾಹಕೊಟ್ಟಿಲ್ಲ. ಫಿಲ್ಮ ಮತ್ತು ಇತರ ಚಲಚಿತ್ರ ತಯಾರಿ ಸಾಮಾನುಗಳನ್ನು ಹಿಂದುದೇಶದಲ್ಲಿ ತಯಾರಿಸುವ ಗೊಡವೆಗೇನೇ ಹೋಗಲಿಲ್ಲ. ಯುದ್ಧದ ಪರಿಸ್ಥಿತಿಯಲ್ಲಿಯೂ ಅಮೇರಿಕದ ಹಾಲಿವುಡ್ಡಿನಲ್ಲಿ ಯಥಾಪ್ರಕಾರ ಚಿತ್ರತಯಾರಿ ನಡೆಯುತ್ತಿರುವುದು. ಹಿಂದುದೇಶದ ಫಿಲ್ಮ ಕಂಪೆನಿಗಳು ಅಭಿವೃದ್ಧಿ ಹೊಂದುತ್ತಿರುವಾಗಲೆ ದೊಡ್ಡ ಹಾನಿಗೊಳಗಾಗಿವೆ. ಅವು ಇಂಗ್ಲೆಂಡಿನ ಕಡೆಗೆ ಸದಾ ಕತ್ತು ನೀಡಿಕೊಂಡಿರುವಂತಾಗಿದೆ. ಅಲ್ಲಿಂದ ಸಾಮಾನು ಬಂದರಾಯಿತು. ಇಲ್ಲವಾದರೆ ಕೈಕಟ್ಟಿ ಸುಮ್ಮನಿರಬೇಕು. ಚಲಚಿತ್ರ ತಯಾರಿಯಲ್ಲಿ ಆದಷ್ಟು ಮಿತವ್ಯಯಮಾಡಬೇಕೆಂದು



ಸೂಚನೆಗಳು ಕೊಡಲ್ಪಡುತ್ತಿವೆ. 14,000, 18,000 ಅಡಿ ಉದ್ದದ ದೀರ್ಘ ಚಿತ್ರಗಳ ಬದಲಿಗೆ ಒಂದು ಘಂಟೆಗಳೊಳಗೆ ತೋರಿಸಿ ಮುಗಿಯುವ ಚಿತ್ರಗಳನ್ನು ತಯಾರಿಸುವುದರಿಂದ ಚಿತ್ರಪಟದ ವೆಚ್ಚ ಕಡಿಮೆಯಾಗುವುದು. ಮನೋಹರವಾದ ಕೆಲವೇ ಹಾಡುಗಳು, ಸ್ವಾಭಾವಿಕ ಸರಳ ಹಾಗೂ ಮನಮುಗ್ಧಕರ ಮಾನವೀಯ ಕತೆಗಳು ಮತ್ತು ಉಲ್ಲಾಸ ಪರಿಹಾಸ್ಯವಿರುವ ಚಿಕ್ಕಚಿತ್ರಗಳನ್ನು ತಯಾರಿಸುವುದೇ ಪ್ರಕೃತದ ಪರಿಸ್ಥಿತಿಯಲ್ಲಿ ಉಚಿತವಾಗಿದೆ.

**ಪೂನದಲ್ಲಿ ತರುಣತರುಣಿಯರೊಳಗೆ ಕಲಹ:-** ಪೂನದಲ್ಲಿ ತರುಣ ಮಹಾರಾಷ್ಟ್ರೀಯ ಹುಡುಗಿಯರು ಸೈಕಲಿನಲ್ಲಿ ಕೂತುಕೊಂಡು ಓಡಾಡುವುದನ್ನು ನೋಡಿದರೆ ಒಂದೊಮ್ಮೆ ಎಂತಹ ಆಧುನಿಕನಾದರೂ ಆಶ್ಚರ್ಯಪಡಲೇ ಬೇಕು. 16 ವರ್ಷದ ನವತರುಣಿಯರು ನವತರುಣರ ಹೆಗಲು ಹಿಡಿದು ಜತೆಗೂಡಿ ಸೈಕಲಿನ ಸವಾರಿ ಮಾಡುವುದು ಉಂಟು. ತರುಣತರುಣಿಯರೊಟ್ಟಿಗೆ ಈಜಾಡುವುದೂ ಇದೆ. ಇಷ್ಟೊಂದು ಮುಂದುವರಿದ ಪೂನದಲ್ಲಿಯೂ ಆಧುನಿಕ ರೀತಿನೀತಿಗಳೆಂದರೆ ಮೂಗುಮುರಿಯುವ ರೂಢಿವಾದಿಗಳು ಕೂಡಾ ಕಡಿಮೆಯಿಲ್ಲ. ಪರಮಾವಧಿಗಳು ಒಟ್ಟೊಟ್ಟಾಗಿರುವ ಪಟ್ಟಣ ಪೂನ.

ಪೂನದ ನವಯುಗ ಫಿಲ್ಮ ಕಂಪೆನಿಯವರು ಲಪಂಡನ್ ಎಂಬೊಂದು ಚಲಚಿತ್ರ ತಯಾರಿಸಿದ್ದರು. ಅದರ ಆಧಾರದ ಮೇಲೊಂದು ಕಾದಂಬರಿ ಬರೆಯಲ್ಪಟ್ಟಿತು. ಈ ಕಾದಂಬರಿಯಲ್ಲಿ ಹಲವು ಅಶ್ಲೀಲ ವಾಕ್ಯಗಳಿರುವದೆಂದು ಪೂನದ ಶ್ರದ್ಧಾಳುಗಳು ಕೂಗೆಬ್ಬಿಸಿದರು. ಮರಾಠಿ ಪತ್ರಿಕೆಗಳಲ್ಲಿ ಈ ಕುರಿತು ಚಳವಳ ನಡೆಯಿತು. ಕಾದಂಬರಿಯು ಬಹಳವಾಗಿ ಮಾರಾಟವಾಯಿತು. ಕಾದಂಬರಿಯ ಕುರಿತು ಚರ್ಚಿಸಲು ಸಾರ್ವಜನಿಕ ಸಭೆಯೊಂದು ನಡೆಯಿತು. ಅಶ್ಲೀಲತೆಯ ಬದ್ಧ ವೈರಿ ಶ್ರೀಕೃಷ್ಣರಾವ ಮರಾಠೆಯವರು ಕಾದಂಬರಿ

ಯಿಂದ ಅತ್ಯಂತ ಅಶ್ಲೀಲವಾದೊಂದು ವಾಕ್ಯವನ್ನೆತ್ತಿ ಪದ ಹೇಳಿದರು. ಸಭಿಕರಲ್ಲಿ ಹೆಚ್ಚಿನವರು ಕೋಲೇಜುಗಳ ತರುಣರಾದುದರಿಂದ ಅವರೆಲ್ಲಾ ಗಹಗಹಿಸಿ ನಕ್ಕು ಕೈಚಪ್ಪಾಳೆ ಹೊಡೆದರು. ಸಭೆಯಲ್ಲಿದ್ದ ತರುಣ ವಿವಾಹಿತ ಸ್ತ್ರೀಯೊಬ್ಬಳು ಇದರಿಂದ ಉದ್ವೇಗಗೊಂಡಳು. ಇಂತಹ ಅಶ್ಲೀಲತೆಯಿಂದ ವಿನೋದ ಪಡೆಯುವ ಜನರಿಗೆ ಮೆಟ್ಟಿನಿಂದ ಕೊಡಬೇಕೆಂದು ಸಿಡುಕಿದಳವಳು. ಕೋಲೇಜ್ ತರುಣರೆಲ್ಲಾ ಕ್ರೋಧಾವಿಷ್ಟರಾದರು. ಆ ಶಬ್ದವನ್ನಿವಳು ಹಿಂತೆಗೆಯಬೇಕೆಂದರು. ಇದರಿಂದ ಗಲಾಟೆಯಾಗಿ ಸಭೆಯು ಕೊನೆಗೊಳಿಸಲ್ಪಟ್ಟಿತು. ಆಗ ತರುಣರು ಈ ತರುಣಿಯನ್ನು ಮುತ್ತಿ ಅವಳು ಹೇಳಿದ ಶಬ್ದಗಳನ್ನು ಹಿಂತೆಗೆಯಬೇಕೆಂದರು. ಅಷ್ಟರಲ್ಲಿ ಪುನಹ ತರುಣಿಯರೊಟ್ಟಾದರು. ಒಬ್ಬಳು ತನ್ನ ಮೆಟ್ಟು ತೆಗೆದು ತರುಣರ ಗುಂಪಿಗೆಸೆದಳು. ದೊಡ್ಡ ಗಲಾಟೆಯಾಯಿತು ತರುಣ ತರುಣಿಯರೊಳಗೆ. ಇಷ್ಟು ಹೊತ್ತಿಗೆ ಪೋಲೀಸಿನವರು ಬಂದು ಶಾಂತಿ ಸ್ಥಾಪಿಸಿದರು.

---

# ಚುಟುಕು-ಚೂರು

## ಕಾಯಿದೆ ಭಂಗ ಆರಂಭವಾಗುವುದೆ?


ಪಂಡಿತ ಜವಾಹರಲಾಲರೀಗ ಬ್ರಿಟಿಷ್ ಸರಕಾರದೊಂದಿಗೆ ಸಂಧಿಯ ಆಶೆಯನ್ನೇ ಬಿಟ್ಟು ಪುನಃ ಕಾಯಿದೆ ಭಂಗ ಹೂಡುವ ನಿರ್ಧಾರ ಮಾಡಿ ಅದಕ್ಕಾಗಿ ದೇಶವನ್ನು ತಯಾರಿಸುತ್ತಿದ್ದಾರೆ. ಆದರೆ ರಾಜಾಜಿ ಮೊದಲಾದವರು ಇನ್ನೂ ಬ್ರಿಟಿಷ್ ಸರಕಾರಕ್ಕೆ ಎಡೆಬಿಡದೆ ವಿನಂತಿ ಮಾಡಿಕೊಳ್ಳುತ್ತಿದ್ದಾರೆ. ಇನ್ನಾದರೂ ರಾಜಿಯಾಗಬಹುದೆಂಬ ಆಶೆಯಿದೆ ಅವರಿಗೆ. ಆದರೆ ಬ್ರಿಟಿಷ್ ಮಂತ್ರಿಮಂಡಲವು ಹಿಂದೀ ಪ್ರಶ್ನೆಯನ್ನು ಕುರಿತು ಕೊನೆಯ ನಿರ್ಧಾರ ಮಾಡಿಬಿಟ್ಟಂತೆ ತೋರುತ್ತದೆ. ಬ್ರಿಟಿಷ್ ಲೇಬರ್ ಪಕ್ಷೀಯರಿಂದಲೂ ಏನು ಮಾಡುವುದಕ್ಕೂ ಸಾಧ್ಯವಾಗುವ ಹಾಗಿಲ್ಲ- ಕಾಂಗ್ರೆಸು ಹಿಂದುದೇಶದ ಅದೊಂದು ರಾಜಕೀಯ ಪಕ್ಷ. ದೇಶದಲ್ಲಿ ಅದಕ್ಕೆ ಹೆಚ್ಚಿನ ಬೆಂಬಲವೇನೂ ಇರಲಾರದೆಂದು ಭ್ರಾಂತಿಯಿಂದ ಸರಕಾರವು ಇನ್ನೂ ವಿಮುಕ್ತವಾಗಿರುವಂತಿಲ್ಲ. ದುರ್ದೈವವಶಾತ್ ಮುಸ್ಲಿಂ ಲೀಗ್, ಹಿಂದುಮಹಾಸಭೆಯವರೇ ಮೊದಲಾದವರು ಸರಕಾರದ ಈ ಭ್ರಾಂತಿಯನ್ನು ಬಲಪಡಿಸುತ್ತಿದ್ದಾರೆ. ಇನ್ನೊಂದು ಹೋರಾಟವಾಗದೆ ಸರಕಾರದ ಮನೋವೃತ್ತಿಯು ಬದಲಾಗುವ ಹಾಗೆ ತೋರುವುದಿಲ್ಲ.





## ಸಾವಧಾನ! ಸಾವಧಾನ!!

ಹರ್. ಹಿಟ್ಲರರು ಸೆಪ್ಟಂಬರ ತಾ. 4ರಲ್ಲು ಕೊಟ್ಟ ಭಾಷಣವು ಮೊಧಲಿನಷ್ಟು ಆಶೋತ್ಸಾಹದಿಂದ ತುಂಬಿಲ್ಲ. ಇಂಗ್ಲೆಂಡನ್ನು ಶೀಘ್ರವಾಗಿ ವಶಪಡಿಸಿಕೊಳ್ಳುವುದರಲ್ಲವರು ಹತಭಗ್ನರಾಗಿ ಉರಿಕಾರಹತ್ತಿದ್ದಾರೆ. "ಯಾಕೆ ನೀವು ಬರುವುದಿಲ್ಲ?" ಎಂಬ ಬ್ರಿಟಿಷರ ಪ್ರಶ್ನೆಗೆ "ಸಾವಧಾನ! ಸಾವಧಾನ!! ಎನ್ನುತ್ತಿದ್ದಾರೆ ಹಿಟ್ಲರರು. ಹಾಗಾದರೆ ಅಗೋಸ್ತು ತಾ. 15ರೊಳಗೆ ಲಂಡನಿಗೆ ಪ್ರವೇಶಿಸುವೆನೆಂದು ಜಂಭಹೊಡೆದುದೇಕೆ? ಅಗ ಅವಸರವಷ್ಟು ಈಗ ಸಾವಧಾನವೆಂದು ಸಮಾಧಾನ ಹೇಳುವುದೇಕೆ?



# ನಿಮಗೆ ಬೇಸರವಾದಾಗ ನನಗೆ ಬರೆಯಿರಿ.

## ಮುಸ್ಲಿಮ್ ಲೀಗನ್ನು ತಲೆಯ ಮೇಲೆ ಹೊತ್ತು ಕೊಳ್ಳುವುದೆಷ್ಟು?

ಕೇಂದ್ರದಲ್ಲಿ ಮುಸ್ಲಿಮ್ ಲೀಗಿನ ಮುಖಂಡರೊಬ್ಬರು ಪ್ರಧಾನ ಮಂತ್ರಿಗಳಾಗಿ ಅವರೇ ಇತರ ಮಂತ್ರಿಗಳನ್ನು ಆರಿಸುವ ಸೂಚನೆ ಮಾಡಿರುತ್ತಾರೆ. ಸಿ. ಆರರು ಮುಸಲ್ಮಾನರನ್ನೊಲಿಸಿಕೊಳ್ಳುವುದಕ್ಕಾಗಿ. ಇದು ರಾಷ್ಟ್ರೀಯ ಸರಕಾರವಾಗುವುದಾದರೂ ಹೇಗೆ? ಇದರಿಂದ ಬಹು ಸಂಖ್ಯಾಕ ಹಿಂದುಗಳ ಹಿತವನ್ನು ಮೂಲೆಗೊತ್ತಿ ಮುಸ್ಲಿಮ್ ಲೀಗಿನವರನ್ನು ಮತ್ತೂ ಮತ್ತೂ ತಲೆಯ ಮೇಲೆ ಹೊತ್ತುಕೊಳ್ಳುವಂತಾಗುವುದಿಲ್ಲವೆ? ಗಾಂಧಿಜಿಯವರು ಮುಸಲ್ಮಾನರಿಗೆ 'ಬ್ಲೇಂಕ್ ಚೆಕ್ಕ್' ಕೊಟ್ಟ ಪರಿಣಾಮದಿಂದಲಾದರೂ ರಾಜಾಜಿಯವರು ಪಾಠ ಕಲಿತುಕೊಳ್ಳಬಾರದಿತ್ತೇ? ಇನ್ನೂ ಮುಸ್ಲಿಂ ಲೀಗಿನ ಮನೋವೃತ್ತಿ ನಮ್ಮ ಮುಖಂಡರಿಗೆ ತಿಳಿಯದುದು ಆಶ್ಚರ್ಯಕರವೆಂದು, ಉದ್ಗರಿಸುತ್ತಾರೆ ಬೆಂಗಳೂರಿನ ಬಿ. ಎಮ್. ಅರರು.

ಸಿ. ಆರರು 'ಸ್ಪೋರ್ಟಿಂಗ್ ಆಫರ್' ಮಾಡಿದುದು ಬ್ರಿಟಿಷ್ ಸರಕಾರಕ್ಕಲ್ಲದೆ ಮುಸ್ಲಿಂ ಲೀಗಿಗಲ್ಲ. ಅವರ ಉದ್ದೇಶವನ್ನೇ ನೀವು ತಪ್ಪಾಗಿ ತಿಳಿದುಕೊಂಡಿರುವಿರಿ. ಕಾಂಗ್ರೆಸ್ ಮತ್ತೂ ಮುಸ್ಲಿಮ್ ಲೀಗುಗಳೊಳಗಣ ಭೇದದ ಬೆಂಕಿಯಲ್ಲಿ ತಮ್ಮ ಬೇಳೆ ಬೇಯಿಸ ನೋಡುವ ಬ್ರಿಟಿಷ್ ಸರಕಾರವನ್ನು ಪರೀಕ್ಷಿಸುವುದಕ್ಕಾಗಿ ಸಿ. ಆರರು ಈ ಸೂಚನೆ ಮಾಡಿದುದು. ಕಾಂಗ್ರೆಸಿಗೆ ಬೇಕಾದುದು ಅಧಿಕಾರವಲ್ಲ; ಸ್ವಾತಂತ್ರ್ಯ. ಹಿಂದೀಯರು ಯಾರು ಆಡಳಿತ ನಡಿಸಿದರೂ ಕಾಂಗ್ರೆಸಿಗೆ ತೃಪ್ತಿಯೆಂಬುದು ರಾಜಾಜಿಯವರ ಸೂಚನೆಯಿಂದು ಸಿದ್ಧವಾಗುತ್ತದೆ. ಭಾರತಕ್ಕೆ ಸ್ವಾತಂತ್ರ್ಯವನ್ನೀಯಲು ಮನಸ್ಸಿಲ್ಲದೆ ಬ್ರಿಟಿಷ್ ಸರಕಾರವು ಕಾಂಗ್ರೆಸಿನ ಮೇಲೆ ತಪ್ಪು ಸ್ಥಾಪಿಸುವ ನಟನೆ ಹೂಡಿ ಲೋಕಕ್ಕೆ ತನ್ನ ಸಂಭಾವಿತತನ ತೋರಿಸಹೊರಟಿದೆ. ಆ ನಟನೆಯ ಮುಸುಕನ್ನು ಸಿ. ಆರರು ಯುಕ್ತಿಯಿಂದ ಭೇದಿಸಿಬಿಟ್ಟಿದ್ದಾರೆ.

## ಕಾಫಿಗೆ ಯಾವಾಗ ಬೆಲೆಯಾದೀತು

ಕಾಫಿಗೆ ಕೆಲವು ತಿಂಗಳ ಮೊದಲೊಮ್ಮೆ ಫಕ್ಕನೆ ಬೆಲೆಯೇರಿತು. ಇನ್ನೂ ಬೆಲೆಯೇರಬಹುದೆಂದು ನಾನು ನನ್ನ ಸ್ಟೋಕನ್ನು ಹಾಗೆಯೇ ಇರಿಸಿದೆ. ಅನಂತರ ಬೆಲೆ ಬೀಳುತ್ತಾ ಹೋಗಿ ಈಗ ಗಿರಾಕಿಯೇ ಇಲ್ಲದಂತಾಗಿದೆ. ಕಾಫಿ ಹೊರಗೆ ಹೋಗುವುದೇ ಬಂದಾಗಿದೆ. ಕಳೆದ ವರ್ಷದ ಸ್ಟೋಕನ್ನೇ ಕೇಳುವವರಿಲ್ಲ. ಈ ವರ್ಷ ಬೆಳೆಯು ಬಹಳ ಕಡಿಮೆ ಆಗಿದೆ. ಬೆಳೆದುದಕ್ಕೂ ಬೆಲೆಯಿಲ್ಲ. ಕೇಳುವವರೇ ಇಲ್ಲ. ಪರಿಸ್ಥಿತಿ ಇದೇ ರೀತಿ ನಡೆದರೆ ಕಾಫಿ ಕೈಗಾರಿಕೆಯ ಪತನ ನಿಶ್ಚಯವೆಂಬಂತೆ ತೋರುತ್ತದೆ. ಮುಂದೆ ಯಾವಾಗ ಕಾಫಿಗೆ ಬೆಲೆ ಬಂದೀತೆಂದು ಹೇಳಬಲ್ಲಿರಾ? ಎಂದು ಕೇಳುತ್ತಾರೆ ಕೊಡಗಿನ ಪ್ಲೇಂಟರ್ ಪಿ. ಟಿ. ಪಿ.ಯವರು.

ಯುದ್ಧ ಮುಗಿಯುವನಕ ನಿಮ್ಮ ಸ್ಟೋಕನ್ನು ಹಾಗೆಯೇ ಇಡಲು ಸಾಧ್ಯವಾದರೆ ಇಟ್ಟುಕೊಳ್ಳಿ. ಅದರಲ್ಲೂ ಇಂಗ್ಲೆಂಡು ಗೆಲ್ಲಬೇಕು. ಫ್ರಾನ್ಸು ಪುನಹ ಹಿಟ್ಲರರ ನೊಗವನ್ನು ಕಳಚಿಹಾಕಿ ಸ್ವತಂತ್ರವಾಗಬೇಕು. ಆಗ ಪ್ರತಿ ಫ್ರೆಂಚ್ ಕುಟುಂಬಕ್ಕೆ ಒಂದೊಂದು ರಾತ್ಲು ಕಾಫಿ ಧರ್ಮಾರ್ಥ ಹಂಚುವೆನೆಂದು ಬ್ರಿಟಿಷ್ ಸಾಂಪತ್ತಿಕ ಯುದ್ಧ ಖಾತೆಯ ಮಂತ್ರಿ ಡಾಕ್ಟರ್ ಡಾಲ್ಟನರ ಮಾತಿದೆ.. ಆಗ ಕಾಫಿಗೆ ಬೆಲೆ ಏರೀತು.

## ಉತ್ತರ ಆಫ್ರಿಕೆದ ಪರಿಸ್ಥಿತಿಯೇನು?

ಬ್ರಿಟಿಷ್ ಸೋಮಾಲಿಲೇಂಡ್ ಹೋಯಿತು. ಬ್ರಿಟಿಷ್ ಮೋಯಲೆಯನ್ನು ಇಟಲಿಯಾನರಿಗೆ ಬಿಟ್ಟುಕೊಡಲಾಯಿತು. ಈಗ ಬೂನವು ಇಟಲಿಯಾನರ ವಶವಾಗಿದೆ. ದಕ್ಷಿಣ ಆಫ್ರಿಕದ ಕೇಪ್ ಟೌನಿನಿಂದ ಹೊರಟ ಚೆಮುಂಡ್ಯಾಸ್ ಹಡಗ ಮುಳುಗಿಸಲ್ಪಟ್ಟಿದೆ. ಬೊಲಿ

ದರ್ ಹಡಗವ ಪತ್ತೆಯಿಲ್ಲ. ಚೆಮುಂಡ್ಯಾಸಿನಲ್ಲಿ 30ಮಂದಿ ಸಿಂಧಿಗಳಿದ್ದರಂತೆ. ಯುದ್ಧ ಹಿಂದೂದೇಶದ ಬಾಗಿಲಿಗೆ ಬಂದಿದೆಯೇ? ನಿಜವಾಗಿಯೂ ಉತ್ತರ ಆಫ್ರಿಕದ ಪರಿಸ್ಥಿತಿಯೇನು? ಎಂದು ಪ್ರಶ್ನಿಸುತ್ತಾರೆ. ಮಂಗಳೂರಿನ ಎಮ್. ಎನ್. ಎಸ್ಸರು.

ವಿಷಮವಾಗಿದೆಯಾದರೂ ಸಂದಿಗ್ಧವಾಗಿಲ್ಲ. (Serious, but not critical.)

## ಸ್ಟ್ರಾಯಿಕ್ ಎಕ್ಸ್ಪರ್ಟ್

ಮಂಗಳೂರಲ್ಲಿ ನಡೆದ ಹಲವು ಮುಷ್ಕರಗಳನ್ನು ಕಟ್ಟಕಡೆಗೆ ಮಧ್ಯಸ್ತಿಕೆ ಮಾಡಿ ರಾಜಿಯಿಂದ ತೀರ್ಮಾನಿಸುವವರು ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಡಾಕ್ಟರ್ ವಿಠಲ ಶೆಟ್ರು. ಅವರೊಮ್ಮೆ ಕೈಹಾಕಿದರೆಂದರೆ ಎಂತಹ ತಿಕ್ಕಿನ ಪ್ರಶ್ನೆಯನ್ನೂ ಚಾತುರ್ಯದಿಂದ ಬಿಡಿಸಿಬಿಡುತ್ತಾರೆ. ಡಾಕ್ಟರ್ ಶೆಟ್ರನ್ನು 'ಸ್ಟ್ರಾಯಿಕ್ ಎಕ್ಸ್ಪರ್ಟ್'ನ್ನಬಹುದಲ್ಲವೇ?

ಡಾಕ್ಟರ್ ಶೆಟ್ರು ಸ್ಟ್ರಾಯಿಕ್ ಎಕ್ಸ್ಪರ್ಟ್ ಮಾತ್ರವಲ್ಲ. ಡ್ಯಾಮಂಡ್ ಎಕ್ಸ್ಪರ್ಟ್, ಎಡ್ಮಿನಿಸ್ಟ್ರೇಶನ್ ಎಕ್ಸ್ಪರ್ಟ್, ಇಲೆಕ್ಶನ್ ಎಕ್ಸ್ಪರ್ಟ್; ಒಂದೇ ಮಾತಿನಲ್ಲಿ ಹೇಳುವುದಾದರೆ ಅವರು ಕೈಹಾಕುವದನ್ನೆಲ್ಲಾ ಎಕ್ಸ್ಪರ್ಟ್.

## ಎಮ್ ಎಲ್. ಎ.ಗಳೇನು ಮಾಡುತ್ತಿದ್ದಾರೆ?

ನಮ್ಮ ಎಮ್. ಎಲ್. ಎ.ಗಳಿಗೆ ಅವರ ಕನ್ಸ್ಟಿಟ್ಯುವೆನ್ಸಿಗೆ ಹೋಗುವ ಗೊಡವೆಯೇ ಇಲ್ಲವೇ? ಅಥವಾ ಅದನ್ನೆಲ್ಲಾ ಅವರು ತಮ್ಮ ನಾಯಕ ರಾಜಾಜಿಯವರಿಗೇನೇ ಬಿಟ್ಟುಕೊಟ್ಟು ತಾವು ಕೈಕಟ್ಟಿ ಸುಮ್ಮನಿರುವರೇ? ಈ ಸಂದರ್ಭದಲ್ಲಾದರೂ ಅವರು ತಮ್ಮ ಕನ್ಸ್ಟಿಟ್ಯುವೆನ್ಸಿಗಳಲ್ಲಿ ತಿರುಗಾಡಿ ಜನಜಾಗ್ರತಿಯನ್ನುಂಟುಮಾಡಲಾರರೇ? ಎಂದು ಪ್ರಶ್ನೆ ಕುಂದಾಪುರದ ಎಸ್. ಎಸ್. ಕೆ.ಯವರದು.

ಇನ್ನೊಂದು ಇಲೆಕ್ಶನು ಯಾವಾಗಲೋ ಏನೋ! ಆ ಮೊದಲು ಓಟರರ ಬಳಿಗೆ ಹೋಗುವ ಅಗತ್ಯವಾದರೂ ಏನು?

## ಕಾಂಗ್ರೆಸಿನ ಹಳೆಯ ಹುಲಿಗಳೆಲ್ಲಾ ಎಲ್ಲಿ ಹೋಗಿವೆ!

ಶ್ರೀಗಳಾದ ಎಚ್. ಆರ್. ಮಲ್ಯ, ಎನ್. ಎಸ್.ಕಿಲ್ಲೆ, ಬೋಳಾರ ಭೋಜರಾವ್,ಅನಂತ ರೈ,ತಿಮ್ಮಪ್ಪಶೆಟ್ರೇ ಮೊದಲಾದ,ಕಾಂಗ್ರೆಸಿನಲ್ಲಿ ದುಡಿದು ಹಳೆಯ ಹುಲಿಗಳೆಂದು ಹೆಸರುಪಡೆದವರೆಲ್ಲಾ ಈಗ ಎಲ್ಲಿದ್ದಾರೆ? ಈ ಸಂದಿಗ್ಧಕಾಲದಲ್ಲಾದರೂ ಅವರು ಮುಂದೆ ಬರಲಾರರೇ? ಎಂದು ಕೇಳುತ್ತಾರೆ ಪರ್ಕಳದ ಎಚ್. ಎಸ್. ಬಿ.ಯವರು.

ಹೊಸ ಹೊಸ ಹುಲಿವೇಷಗಳು ರಂಗಸ್ಥಳಕ್ಕಿಳಿದು ಕುಣಿದಾಡುವುದನ್ನು ಕಂಡು ಹೇಸಿ ಹಳೆ ಹುಲಿಗಳೆಲ್ಲಾ ಗುಹೆ ಸೇರಿವೆ. ಹೊಸ ಹುಲಿವೇಷಗಳ ಆಟ ಮುಗಿದ ಮೇಲೆ ಹಳೆ ಹುಲಿಗಳು ಗುಹೆ ಬಿಟ್ಟು ರಂಗಸ್ಥಳಕ್ಕೆ ಬರಬಹುದು.


## ಇದರಲ್ಲಿ ಯಾವುದು ನಿಜ?

ಪೂನದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ನಿರ್ಣಯವು ನಿರ್ನಾಮವಾಯಿತು. ಈಗ ರಾಮಗಡ ಕಾಂಗ್ರೆಸ್ ನಿರ್ಣಯವೇ ಪ್ರಾಮುಖ್ಯ. ಇನ್ನೊಂದು ಪ್ರಚಂಡ ಹೋರಾಟಕ್ಕೆ ದೇಶವು ಸಿದ್ಧವಾಗಬೇಕೆಂದು ಸಾರುತ್ತಾರೆ ಪಂಡಿತ ಜವ್ಹಾರಲಾಲರು. ಪೂನ ನಿರ್ಣಯವೇ ಪ್ರಾಮುಖ್ಯವಾದುದು. ಕಾಂಗ್ರೆಸಿನವರು ಪುನಃ ಮಂತ್ರಿಪದವಿ ಸ್ವೀಕರಿಸಬೇಕು. ಸರಕಾರದ ಮೇಲೆ ಅತಿ ಹೆಚ್ಚಿನ ಒತ್ತಾಟವನ್ನುಪಯೋಗಿಸಬೇಕೆಂದು ಕೂಗುತ್ತಾರೆ ಶ್ರೀ ಸತ್ಯಮೂರ್ತಿಗಳು. ಇದರಲ್ಲಿ ಯಾವುದು ನಿಜ? ಎಂದು ಪ್ರಶ್ನೆ ಹುಬ್ಬಳ್ಳಿಯ ಸಿ. ಬಿ. ಕೆ. ಯವರದು.

ಕಾಂಗ್ರೆಸು ಕೂಡಲೆ ಹೋರಾಟ ಹೂಡಬೇಕೆಂದು ಹಾತೊರೆಯುತ್ತಿದ್ದಾರೆ ಭಾರತ ರಾಷ್ಟ್ರವೀರ ಜವ್ಹಾರಲಾಲರು. ಕಾಂಗ್ರೆಸು ಬಿಟ್ಟ ಅಧಿಕಾರವನ್ನು ಪುನಹ ಸ್ವೀಕರಿಸಬೇಕೆಂಬ ಅಪೇಕ್ಷೆಪಡುತ್ತಾರೆ ಅಧಿಕಾರ ಲಾಲಸಿ ಸತ್ಯಮೂರ್ತಿಗಳು. ಕಾಂಗ್ರೆಸಿನೊಳಗಣ ಎರಡು ಮನೋವೃತ್ತಿಗಳಿವು. ಇನ್ನು ವಾರ್ಧದ ಮುದುಕನ ಇಚ್ಛೆಯೇನೆಂದು ನೋಡಬೇಕು.


ಕೊಕ್ಕೋಕ ಕಳಾಶಾಸ್ತ್ರ

64 ರಹಸ್ಯ ಚಿತ್ರಪಠಗಳು ಸಹ ರೂ. 1.



ಇದರಲ್ಲಿ ಸ್ತ್ರೀಪುರುಷರನ್ನು ಪ್ರೀತಿಸುವ ರಹಸ್ಯಗಳು, ಮುದ್ದಿಡುವ ವಿಧಗಳು, ಆಲಿಂಗನಮಾಡುವ ರೀತಿಗಳು, ಕನ್ನೆಗಳ ಪ್ರೇಮ, ಮತ್ತು ಸಂಯೋಗಕಾಲದ ಮರ್ಮಗಳು, ಶೃಂಗಾರ ರಹಸ್ಯಗಳು, ವಶ್ಯಗಳು ಸಹ ಹೇಳಿವೆ. ಇದು ವರೆಗೆ ಇಂಥಾ ಬಹಿರಂಗವಾದ ಪುಸ್ತಕವು ಯಾರಿಂದಲೂ ಪ್ರಚುರಿಸಲ್ಪಡಲಿಲ್ಲ.

264 ಪುಟಗಳುಳ್ಳ ದೊಡ್ಡ ರಹಸ್ಯ ಪುಸ್ತಕ. ಕ್ರಯ ರೂ. 1 ಪೋಸ್ಟುಚಾರ್ಜು 5 ಅಣೆ.

ಸರಸ್ವತಿ ಬುಕ್ ಡಿಪೋ, ಅರುಣಾಚಲ ಮೊದಲಿ ಬೀದಿ, (A)G. T. ಮದರಾಸ್

# "ದೂರದ ಬೆಟ್ಟ...."

ಕತೆಗಾರರು:- ಶ್ರೀ| ಎಂ. ಎಸ್. ಶ್ರೀಕಂಠಯ್ಯ,
ತುಮಕೂರು.

ಮೊನ್ನೆ ಶನಿವಾರ ನಮ್ಮ ಶಾನುಭೋಗರು ಬಂದಿದ್ರು. ರಾತ್ರಿ ಊಟ ಮಾಡಿ ಕುಳಿತೆವು. 'ಸ್ವಾಮಿ' ಅಂದೆ. ಅವ್ರೂನು ತಮಾಷೆ ಮನುಷ್ಯರು, "ಹೋಗಯ್ಯ ನಿನಗೆ ಕಥೆ ಹೇಳಿ ನನ್ನ ಗಂಟ್ಲೆಲ್ಲ ಒಣಗಿ ಹೋಯ್ತು" ಅಂದ್ರು ನಾನು ತಮಾಷೆಗೆ ಜವಾಬು ಹೇಳಬೇಕಾಯ್ತು. "ನೀವು ಬಂದಾಗ್ಲೆಲ್ಲ ಊಟ ಹಾಕಿ ಹಾಕಿ ನಮ್ಮನೇನೆ ಹಾಳಾಯ್ತು" ಅಂದೆ. "ಸದ್ಯ ಹಾಗಂತ ಮುಂದಲ ಸಾರಿಯಿಂದ ಊಟ ನಿಲ್ಲಿಸಿ ಬಿಟ್ರೇಯಪ್ಪ, ಕಥೆಹೇಳ್ತೀನಿ" ಅಂದ್ರು.

ಆ ಕಥೇನೆ ಸ್ವಲ್ಪ ಸರಿಪಡಿಸಿ ನಾ ಬರ್ದಿರೋದು.

ನಮ್ಮೂರ ಜೋಡೀದಾರ್ ಶೇಷಪ್ಪನವರೆಂದರೆ ಅಪಾರ ಆಸ್ತಿವಂತರು. ಆಗರ್ಭ ಶ್ರೀಮಂತರು; ಆದರೂ ಮಗನಿಗೆ ಮೆಟ್ರಿಕ್ ಮಾತ್ರ ಓದಿಸಿದ್ರು. B. A, ಮಾಡಿದ್ರೆ ಎಲ್ಲಾಗು ದುಡ್ಡು ಕಳ್ದ್ರೆ ಅನ್ನೊವ ಹೆದರಿಕೆ. ಕೇಳಿದರೆ ಮಾತ್ರ "ವ್ಯವಹಾರ ಜ್ಞಾನ ಮಾತ್ರ ಸಾಕು, ಅವನೇನು ದಿವಾನ್‌ಗಿರಿ ಮಾಡ್ಬೇಡ" ಅಂತಿದ್ರು. ಶೀನೂನು ಮೆದು ಸ್ವಭಾವದವ, ಧರ್ಮರಾಯ, ತಂದೆಯ ಮಾತನ್ನು ಮೀರಲಿಲ್ಲ.

ದಿನ ಕಳೆದಂತೆ, ಶೇಷಪ್ಪನವರು ಹಣ್ಣಾದರು; ಜೀವನ ವೃಕ್ಷದಿಂದ ಕಳಚಿಬಿದ್ದರು. ಆಡಳಿತವೆಲ್ಲ ಶೀನು ಕೈ ಸೇರಿತು, ಮನೆಯಲ್ಲಿ ಅವನು, ಅವನ ಪ್ರೇಯಸಿ ಮಾತ್ರ ಇದ್ರು. ಹೊಲಗದ್ದೆ ನೋಡಲು ಹೋದಾಗಲೆಲ್ಲ ರೈತರು ಪಡುತ್ತಿದ್ದ ಕಷ್ಟಗಳು ಶೀನು ಕಣ್ಣಿಗೆ ಬಿತ್ತು. ಹಳ್ಳಿಯಲ್ಲಿ ಚಿಂದಿಯುಟ್ಟು ಹಣಗಾರರಿಗಾಗಿ, ತಮ್ಮ ರಕ್ತವನ್ನೇ ಬಸಿದು, ಜೀವಶ್ರವಗಳಾದ ಈ ಯೋಗಿವರ್ಯರನ್ನು ನೋಡಿದ. ಹಣದ ರಾಶಿಯ ಮೇಲೆ ನಲಿದಾಡುವ ನಾನು, ಇವರಿಗೆ ಎರವಾಗಬಹುದಲ್ಲ ಎನ್ನಿಸಿತು. ಅಂದಿನಿಂದ ಕೇಳಿದವರಿಗೆಲ್ಲಾ ಉದಾರವಾಗಿ ದಾನಮಾಡಲು ಮೊದಲು ಮಾಡಿದ. ಮನುಷ್ಯನೆಂಬ ಯಾವ ಪ್ರಾಣಿಯನ್ನೂ ತುಚ್ಛೀಕರಿಸಿದವನಲ್ಲ. ಇದ್ದ ಧನವನ್ನೆಲ್ಲಾ ದೀನರ ದಾರಿದ್ರ್ಯವನ್ನು ನೀಗಲು ವ್ಯಯ ಮಾಡಿದ. ದೇಹಿ ಎಂದು ಬಂದವನು ಒರಿಗೈಲಿ !ಹೋದ ದಿನವಿಲ್ಲ. ಹಸಿದ ದಾರಿಕಾರನು ಇವರ ಮನೆಯಲ್ಲಿ ತಂಗದೆ ಮುಂದೆ ಹೋಗುತ್ತಿರಲಿಲ್ಲ.

ಶೀನು 'ಕರ್ಣನ' ಪಾತ್ರ ವಹಿಸಿದುದು ನಾಡಲ್ಲೆಲ್ಲ ಹಬ್ಬಿತು. ಪಾತ್ರರು ಅಪಾತ್ರರು ಎಲ್ಲಾ ದಾನ ಸ್ವೀಕಾರಕ್ಕೆ ಜೋಡಿದಾರರ ಮನೆಯನ್ನು ತುಂಬಿದರು. ಬೆಲ್ಲಕ್ಕೆ ನೊಣ ಮುತ್ತುವಂತೆ ಇಲ್ಲದ ಸಲ್ಲದ ನೆಂಟರೂ ಬಂದರು. ವಿವೇಚನೆ ಇಲ್ಲದೆ ಮಾಡಿದ ಕೆಲಸದಿಂದ ಶೀನು ಸ್ಥಿತಿ 'ದೀನರಿಗಿಂತ ದಾನಿ ಬಡವ' ಎಂಬಂತೆ ಆಯಿತು. ಸಂಸಾರ ನಡೆಯುವುದೇ ಕಷ್ಟವಾಯಿತು. ಜನಸೇವೆಯನ್ನು ಮಾಡಿರುವ ನನ್ನಲ್ಲಿ, ಜನಾರ್ದನನ ಸಹಾನುಭೂತಿ ಇದೆ. ಯಾರಾದರೂ, ದೇವರ ದಯದಿಂದ ನನಗೆ ನೆರವಾಗುತ್ತಾರೆ, ಎಂದು ತಿಳಿದಿದ್ದ ಶೀನು. ಆದರೆ, ಎಡವಿದ ಇವನನ್ನು ಮೇಲೆತ್ತಲು ಯಾರೂ ಬರಲಿಲ್ಲ. ಮೊದಮೊದಲು 'ಅಯ್ಯೋ, ಪಾಪ' ಎನ್ನುತ್ತಿದ್ದ ಕೆಲವರಿಗೂ, ಇವನಲ್ಲಿ ಬೇಸರ ಹುಟ್ಟಿತು. 'ಕನಿಕರ ಕ್ಷಣಿಕವಾದ ಆವೇಶ' ಮಾತ್ರವಂತೆ.

ಮೆಟ್ರಿಕ್ ಆಗಿದೆಯಲ್ಲ, ಎಲ್ಲಿಯಾದರೂ ಕೆಲಸ ದೊರೆಯಬಹುದು, ಎಂದುಕೊಂಡ. ಆದರೆ ಬ್ರಾಹ್ಮಣರಿಗೆ ಕೆಲಸ ಕೊಡೋರ್‍ಯಾರು. ಎತ್ತ ಮುಖ ತಿರುಗಿಸಿದರೂ ಜನರೆಲ್ಲ, ಕೃತಘ್ನತೆ, ಅತೃಪ್ತಿ ಮತ್ತು ಕಠೋರತೆಯ ಕಣಿಗಳಾದ ಗೋಮುಖ ವ್ಯಾಘ್ರದಂತೆ ಕಂಡರು. ಸಜ್ಜನರಿಗೆ ಈ ದೇಶ ತಕ್ಕುದಲ್ಲ; ಬೇರೆ ಪ್ರಾಂತಗಳವರು ಕನಿಕರಿಗಳಾಗಿರಬಹುದು. ಅಲ್ಲೆಲ್ಲಿಗಾದರೂ ಹೋಗಿ ಕೆಲಸ ಸಂಪಾದಿಸಿ, ಬಾಳಬೇಕೆಂದು ನಿರ್ಧರಿಸಿದ. ವಿಟ್ಟಿಂಗ್ ಟನ್ನನು ಲಂಡನ್ನಿನಲ್ಲಿ ಬೀದಿಗೆಲ್ಲಾ ಚಿನ್ನದ ತಗಡು ಹಾಸಿದ್ದಾರೆ ಎಂದುಕೊಂಡಿರಲಿಲ್ಲವೇ?

ಶೀನು ಉಳಿದುದನ್ನೆಲ್ಲ- ಅಡಿಗೆ ಪಾತ್ರೆ ಮೊದಲ್ಗೊಂಡು—ಮಾರಿ, ಕೈಲಿ ಸ್ವಲ್ಪ ದುಡ್ಡುಮಾಡಿಕೊಂಡ. ಒಂದು ದಿನ ಹೆಂಡತಿಯೊಡನೆ ಊರನ್ನು ತ್ಯಜಿಸಿ ಹೊರಟ. ನಮ್ಮೂರಿಗೂ ಬಸ್ ಬರೋ ರಸ್ತೆಗೂ ಸುಮಾರು ಎರಡು ಮೈಲಿ ಆಗುತ್ತೆ. ಭಾರ್ಯೆಯನ್ನು ಕಟ್ಟಿಕೊಂಡು ನಡದೇ ಹೊರಟ.

ಬಸ್ಸು ನಿಲ್ಲುವ ಜಾಗದಲ್ಲಿ ಸರಿಯಾಗಿ ಯಾವನೋ ಮಹಾತ್ಮ ಒಂದು ಕಲ್ಯಾಣಿ ಕಟ್ಟಿಸಿದ್ದಾನೆ. ಅದೇ ಅನೇಕ ದಾರಿಕಾರರ ಆಯಾಸವನ್ನು ನೀಗಿ

ಹೊಸ ಶಕ್ತಿಯನ್ನು ತುಂಬುವ ಅಮೃತ ಭಾಂಡವಾಗಿದೆ. ಸೀನು, ಅವನ ಅರ್ಧಾಂಗಿ ಅಲ್ಲಿ ಕುಳಿತರು. ಪಕ್ಕದಲ್ಲೇ ಐದಾರು ಜನ ದಾರಿಹೋಕರು ಕುಳಿತಿದ್ದರು. ಮುದಿ ಆಲವಮರ ಒಂದು, ತನ್ನ ಕೊಂಬೆಗಳನ್ನು ದೂರದ ವರೆಗೂ ಪಸರಿಸಿ, ಇವರಿಗೆ ತಂಪಾದ ನೆರಳನ್ನು ಕಲ್ಪಿಸಿಕೊಟ್ಟಿತ್ತು. ಅಲ್ಲಿದ್ದೆಲ್ಲರೂ, ಜೀವನದ ಕಹಿಯನ್ನು ಮಾತ್ರ ಭೋಗಿಸಿದ, ನಿರುತ್ಸಾಹವಾದಿಗಳಾಗಿದ್ದರು. ಅವರ ಪರಿಚಯವೆಲ್ಲ ಶೀನೂಗು ಆಯ್ತು. ತನ್ನ ಊರಿನಲ್ಲಿ ಸುಖಕಾಣದೆ ಬೇರೊಂದೆಡೆಗೆ ವಲಸೆ ಹೊರಟಿರುವ ಇವನನ್ನು ಕಂಡು ಎಲ್ಲರಿಗೂ ಸೋಜಿಗವಾಯಿತು. ಒಬ್ಬೊಬ್ಬರೂ, ಅವರ ಜೀವನವನ್ನು ಇವನಿಗೆ ಒಪ್ಪಿಸಿದರು. ಅಲ್ಪಾವಧಿಯಲ್ಲಿಯೇ ಎಷ್ಟು ಮಧುರ ಬಾಂಧವ್ಯ! “ಮುಂಡೆಗೆ ಮುಂಡೆಯನ್ನು ಕಂಡರೆ ಉಂಡಷ್ಟು ಪ್ರೇಮ.”


ಆ ಗುಂಪಿನಲ್ಲಿದ್ದ ಕವಿಯೊಬ್ಬ ಮೇಲಿದ್ದ. “ನಾನೊಬ್ಬ ಕಬ್ಬಿಗ. ಜಗತ್ತನ್ನೆಲ್ಲಾ ಮೈಮರಸಿ, ಶೃಂಗಾರ ರಸದಲ್ಲಿ ತೇಲುವಂತೆ ಮಾಡಬಲ್ಲ ಕವಿತಾ ಶಕ್ತಿ ನನ್ನಲ್ಲುಂಟು. ದಾಸ್ಯದಲ್ಲಿ ಈಸುತ್ತಿರುವ ಜನರನ್ನು ಬಡಿದೆಬ್ಬಿಸಿ ಭೋರ್ಗರೆಯುವಂತೆ ಮಾಡಬಲ್ಲೆ. ನನ್ನ ಒಂದು ನುಡಿ, ಇಲಿಗಳನ್ನು ಹುಲಿಗಳಾಗಿ ಮಾಡುತ್ತದೆ. ‘ರವಿ ಕಾಣದ್ದು ಕವಿ ಕಂಡ’ ಎಂದು, ಇನ್ನೂ ಹೇಳಲಾರದುದನ್ನೆಲ್ಲಾ ಮಾಡಬಲ್ಲ ಕವಿತಾ ಪ್ರತಿಭೆ ನನ್ನಲ್ಲಿದೆ. ಆದರೆ ಹಾಳು ಜನ ಯಾರೂ ನನ್ನ ಮಾತಿಗೆ ಕಿವಿಗೊಡುವುದಿಲ್ಲ. ನಮ್ಮೂರಿನಲ್ಲಿ ‘ಕವಿತಾ ಸಾರ್ವಭೌಮ’ನೆಂದು ಬಿರುದಾಂಕಿತನಾಗಬೇಕಾಗಿದ್ದ ನಾನು, ಇಂದು ಬೀದಿಯ ಭಿಕಾರಿ. ಬೇರೊಂದು ದೇಶದಲ್ಲಿ ಪ್ರೋತ್ಸಾಹ ದೊರೆಯಬಹುದೆಂದು ಇಲ್ಲಿಗೆ ಬಂದೆ. ಆದರೆ ನನ್ನ ಗತಿ ಅಧೋಗತಿಯಾಯಿತು.” “ದೂರದ ಬೆಟ್ಟ ನುಣ್ಣಗೆ” ಎಂದು ನೀರು ಕುಡಿಯಲು ಎದ್ದು ಹೋದ.

ಶೀನು ಯೋಚನೆಮಾಡಿದ. “ದೂರದ ಬೆಟ್ಟ ನುಣ್ಣಗೆ” ಎಂಬುದು ನಿಜ. “ಆದರೆ ನಾನೇನು ಕವಿಯಲ್ಲವಲ್ಲ. ಒಬ್ಬರ ಸಹಾಯವನ್ನು ಅಪೇಕ್ಷಿಸಲು ರಟ್ಟೆಯಲ್ಲಿ ದೇವರಿತ್ತ ಬಲವಿದೆ. ತಲೆಯಲ್ಲಿ ಮೆದುಳಿದೆ. ಎರಡು ಹೊಟ್ಟೆ ತುಂಬ ಅನ್ನ ತರಲಾರೆನೇ? ನನ್ನ ನಿರ್ಧಾರವನ್ನು ಮುರಿಯುವುದಿಲ್ಲ” ಅಂದುಕೊಂಡ.

WHEN IN BOMBAY STAY AT

# SHARADA BHAVAN

[HIGH CLASS VEGETARIAN BOARDING & LODGING]



Opp. G. I. P. Ry. STATION.

MATUNGA

BOMBAY 19.

OFFERS ALL CONVENIENCES
AMIDST A HOMELY ATMOSPHERE
AT MODERATE TERMS

ಬೊಂಬೈಯಲ್ಲಿ ಶ್ರೇಷ್ಠ ವರ್ಗದ
ವಸತಿ ಗೃಹ

ಶಾರದಾ ಭವನ

ಊಟ ವಸತಿಗಳ ಸರ್ವ ಆಧುನಿಕ ಸೌಕರ್ಯಗಳಿಂದ ಕೂಡಿದ ಹೋಟೆಲ್

B. RAGHAVENDRA RAO,
*PROPRIETOR.*

ಇದನ್ನೆಲ್ಲ ಕೇಳುತ್ತಿದ್ದ ಮತ್ತೊಬ್ಬ ಮುಂದೆ ಬಂದ. ತನ್ನ ಕಥೆ ಹೇಳಿದ. "ನಾನೊಬ್ಬ ಲಕ್ಷಾಧಿಕಾರಿಯಾಗಿದ್ದೆ. ನನ್ನದೆಲ್ಲ ಜಹಜಗಟ್ಟಲೆ ವ್ಯಾಪಾರ. ಅಲ್ಲಿ ಕಾಣುವ ಊರಿನವರ ವರ್ಷದ ಆದಾಯ, ನನ್ನ ಒಂದು ವಾರದ ವ್ಯಾಪಾರ. ಆದರೆ ದುರ್ದೈವದಿಂದ ಎಲ್ಲ ಕಳೆದುಕೊಂಡೆ. ನನ್ನ ಜಹಜು ಮುಳುಗಿ ಈ ಸ್ಥಿತಿಯಾಯಿತು. ನಮ್ಮೂರು ಮುಂಬಯಿ. ದಕ್ಷಿಣ ದೇಶಗಳಿಗೆಲ್ಲಾದರೂ ಹೋಗಿ, ಹೊಟ್ಟೆಹೊರೆಯೋಣವೆಂದು ಬಂದ ನನ್ನ ಪಾಡು, ನಾಯಿಪಾಡು. ಊರುಗಳಲೆದು ಬಳಲಿ ಬಸವಳಿದೆ. ನಮ್ಮೂರಿನಲ್ಲೇ ಇದ್ದರೆ ಹೇಗಾದರೂ ಬಾಳುತ್ತಿದ್ದೆ. ಈಗ ನನ್ನ ಬಾಳು ಬಿಸಲ್ಗುದರೆಯನ್ನು ನೀರೆಂದು ಹಿಂಬಾಲಿಸಿದವನ ಬಾಳು" ಎಂದ. ಅಲ್ಲಿಗೆ ಅವನ ಗಂಟಲು ಒಣಗಿತು. ನೀರು ಕುಡಿಯಲು ಅವನೂ ಎದ್ದು ಹೋದ.

ಶೀನು ಇವನ ಮಾತನ್ನು ತೂಕ ಹಾಕಿದ. "ಹಾಗಾದರೆ ನಾನು ಹಿಂಬಾಲಿಸುತ್ತಿರುವುದು ಬಿಸಲ್ಗುದುರೆಯನ್ನೆ? ನನ್ನ ಪಾಡು ನಾಯಿ ನರಿಗಳಿಗಿಂತ ಕೀಳಾಗುವುದೆ? ಲಕ್ಷ್ಮೀ ಪುತ್ರನೆಂದು, ಸುಖದ ಆಶೆಯಿಂದ ನನ್ನ ಕೈ ಹಿಡಿದವಳ ಗತಿ ಏನು? ನಮ್ಮೂರಿಗೇನೇ ಹಿಂತಿರುಗಲೆ?" ಎಂದುಕೊಂಡ. ಆದರೆ ಆ ಕಥೆ ಹೇಳಿದ ವ್ಯಕ್ತಿಯ ಮತ್ತೊಂದು ರೂಪ ಮನಸಿನಲ್ಲಿ ಕಂಡೂ ಕಾಣದಂತೆ ಮರೆಯಾಯಿತು.

"ಸತ್ಪುರುಷರನ್ನು ವಂಚಿಸಲು ಬರುವ ಕಳ್ಳರಲ್ಲಿ ನಾನಾವಿಧ. ತನ್ನ ಕರುಣಾಜನಕವಾದ ಕಟ್ಟುಕಥೆಯಿಂದ, ನಮ್ಮೆಲ್ಲರಲ್ಲಿ ಕನಿಕರವನ್ನು ಸೃಷ್ಟಿಸಿ, ನಮ್ಮ ಬುತ್ತಿಯಲ್ಲಿ ಪಾಲುಹೊಡೆಯಲು ಈ ಸೋಗು ಹಾಕಿರುವನೆ?" ಎಂದುಕೊಂಡ. ಜೇರೊಂದೂರಿಗೆ ಹೋಗಬೇಕೆನ್ನುವ ಮನಸ್ಸಿಗೆ ಲಗಾಮು ಹಾಕಿದಂತಾಯಿತು.

ಪಕ್ಕದಲ್ಲಿದ್ದ, ಮತ್ತೊಬ್ಬ ಚಿಂದಿ ಬಟ್ಟೆಯವ ಮುಂದೆ ಬಂದ. "ಇಬ್ಬರ ಕಥೆ ಕೇಳಿದೆ. ನನ್ನದನ್ನೂ ಕೇಳು. ಮೂರನೆಯದಕ್ಕೆ ಮುಕ್ತಾಯವಾಗಲಿ" ಎಂದು ತನ್ನ ಕಥೆ ಹೇಳಿದ.

"ನಾನು ಉತ್ತರದೇಶದವನು. ಅಗರ್ಭ ಶ್ರೀಮಂತ ಒಂದು ದಿನ. ಆದರೆ

ಜಾಗ್ರತೆ! ಜಾಗ್ರತೆ!

ದೇಶವಿದೇಶಗಳಲ್ಲಿ ಪ್ರಖ್ಯಾತವಾದ ನಮ್ಮ ಮಾಲುಗಳು ವಿಶ್ವಪ್ರಶಂಸನೀಯವಾಗಿ ದಿನೇ ದಿನೇ ಗಿರಾಕಿಗಳು ಹೆಚ್ಚುತ್ತಿರುವುದನ್ನು ಕಂಡು, ಈ ಹೆಸರಿನಲ್ಲಿ ಬೇರೆ ನಕಲಿ ಮಾಲುಗಳುಂಟಾಗತೊಡಗಿರುವದರಿಂದ ನಮ್ಮ ಗಿರಾಕಿಗಳು ಕೆಳಗಿನ ಅಡ್ರಸನ್ನು ನೋಡಿ ತೆಗೆದುಕೊಳ್ಳಿರಿ.

**ನಕಲಿ ಮಾಲಿಗೆ ಮೋಸಹೋಗಬೇಡಿರಿ!**

# ದ್ರಾಕ್ಷಾಮೃತ

**ಪಂಡಿತ್ ಜವಾಹಿರಲಾಲ ನೆಹರೂ ಬಂದಾಗ ಹುಬ್ಬಳ್ಳಿ ವಸ್ತು ಪ್ರದರ್ಶನದಲ್ಲಿ ಸುವರ್ಣ ಪದಕ ದೊರೆತ, ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಭಂಗಾರದ ಮೆಡಲ್ ಮತ್ತು ಅನೇಕ ಸರ್ಟಿಫಿಕೇಟುಗಳು ದೊರೆತಂಥ**

**ಒಂದೇ ಸವನೆ ೫೦ ವರ್ಷದ ಅನುಭವದಿಂದ, ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ದೇಶೀ ಯಂತ್ರಗಳ ಮೂಲಕ ತಯಾರಾಗುವ,**

**ಶಕ್ತಿಯ ಮೇಲೆ ಮೊದಲನೇ ತರದ ಟಾನಿಕ್**

ಇದರ ಸೇವನೆಯಿಂದ ರಕ್ತಶುದ್ಧಿಯಾಗುವದು. ಶೌಚ ಸಾಫವಾಗಿ ಪಚನಕ್ರಿಯೆ ಬೆಳೆಯುವುದು, ಕಣ್ಣು ಕೈ ಕಾಲು ಉರಿಯೋಣ ಮೊದಲಾದ ಉಷ್ಣ ಮತ್ತು ಪಿತ್ಥವಿಕಾರಗಳು ನಾಶವಾಗುವವು. ಸ್ತ್ರೀಯರಿಗೆ ಮುಟ್ಟುದೋಷದಿಂದಾದ ಸರ್ವ ರೋಗ ನಿವಾರಣೆಯಾಗಿ ಸಂತತಿ ಧಾರಕವಾಗುವುದು. ಅಂತೂ ಇದು ಬಾಲ-ವೃದ್ಧ-ಸ್ತ್ರೀ ಪುರುಷರಿಗೆ ಅತಿ ಉಪಯುಕ್ತವಾಗಿದೆ.

**ಕ್ರಯ ೧ ಬಾಟ್ಲಿ ರೂ. ೧-೪-೦**

**ಮಾನೇಜರ್:— ದ್ರಾಕ್ಷಾಮೃತ ಡಿಪೋ, ಪೋಸ್ಟ್-ನಿಪ್ಪಾಣಿ, ಜಿಲ್ಲಾ ಬೆಳಗಾಂವ.**

ಮಂಗಳೂರು ಸ್ಟೋಕಿಸ್ಟರು:— ಕೆನರಾ ಮೆಡಿಕಲ್ ಸಪ್ಲೈಸ್ ಲಿಮಿಟೆಡ್

ಉಡುಪಿ ಸ್ಟೋಕಿಸ್ಟರು:- ಪೈ ಫಾರ್ಮಸಿ, ಉಡುಪಿ. ಬೆಂಗಳೂರು:-ಸೀತಾರಾಮ ಪೈ ಬ್ರದರ್.

ಮೈಸೂರು:- ಟಿ. ಸಿ. ನಟರಾಜ, ಮತ್ತು ಮೋಡರ್ನ್ ಫಾರ್ಮಸಿ.

ನನ್ನ ಸೋದರರ ಎದೆಯ ಕೆನ್ನೀರು, ಕಣ್ಣೀರಾಗಿ ಹರಿಯುತ್ತಿದ್ದುದನ್ನು ಕಂಡೆ. ಅವರಿಗಾಗಿ ನನ್ನ ಹಣವನ್ನೆಲ್ಲಾ ಮಿತಿಯಿಲ್ಲದೆ ವ್ಯಯಮಾಡಿದೆ. ಅವರಲ್ಲಿ ವಂಚಕರೇ ಹೆಚ್ಚಾಗಿದ್ದುದು, ಉತ್ಸಾಹದಿಂದ ಮೊಬ್ಬಾದ ನನ್ನ ಕಣ್ಣಿಗೆ ಕಾಣಲಿಲ್ಲ. ಕಡೆಗೆ ಇದ್ದ ಬಿದ್ದುದನ್ನೆಲ್ಲ ಮಾರಿ ದಕ್ಷಿಣದೇಶಕ್ಕೆ ಹೋಗೋಣವೆಂದು ಬಂದೆ. ಜೊತೆಯಲ್ಲಿ ಕೈಹಿಡಿದವಳು, ಇಬ್ಬರು ಮಕ್ಕಳು. ಈ ದೇಶಕ್ಕೆ ಬಂದದ್ದೂ ಆಯಿತು. ಕೆಲಸಕ್ಕಾಗಿ ಅಲೆದಲೆದು ಸಾಕಾಯಿತು. ಇದ್ದ ದುಡ್ಡೂ ಮುಗಿದು ಬರಿಗೈಯ್ಯಾಯಿತು. ನನ್ನ ಹೆಂಡಿರೇನೊ ನನ್ನನ್ನು ಪ್ರಿತಿಸುತ್ತಿದ್ದಳು. ಒಂದು ದಿನ ಹೊಟ್ಟೆಗೇನೂ ಇರಲಿಲ್ಲ. ಮಕ್ಕಳ ಗೋಳು ಹೆಚ್ಚಾಯಿತು. ಇದನ್ನು ನೋಡಲಾರದ ನನ್ನ ಹೆಂಡತಿಗೆ ಸಿಟ್ಟು ಬಂತು. ನಮ್ಮಿಬ್ಬರಿಗೂ ಜಗಳವಾಯಿತು. ಅವಳನ್ನು ಚೆನ್ನಾಗಿ ಹೊಡೆದು ನಾನೆಲ್ಲಿಗೋ ಹೋದೆ. ಅಂದಿನಿಂದ ಅವಳೆಲ್ಲೋ, ನನ್ನ ಮಕ್ಕಳೆಲ್ಲೋ ಗೊತ್ತಿಲ್ಲ. ನಾನು ಮಾತ್ರ ಇಂದು ಇಲ್ಲಿದ್ದೇನೆ", ಎಂದ.

ಆ ಹೊತ್ತಿಗೆ ದೂರದಲ್ಲಿ ಬಂವ್ಯೈಲಿರುವ ಇಬ್ಬರು ಮಕ್ಕಳೊಂದಿಗೆ, ಕೋರಿಯುಟ್ಟು, ಒಬ್ಬ ಹೆಂಗಸು ಬರುತ್ತಿದ್ದಳು. ಕಥೆ ಹೇಳುತ್ತಿದ್ದವ, ತಟ್ಟನೆ ಎದ್ದು ಓಡಿಹೋಗಿ, ಅವಳನ್ನು ಅಪ್ಪಿಕೊಂಡ. ವಿರಹಿಗಳ ಮಿಲನವನ್ನು ಕಂಡ ಶೀನುವಿಗೆ 'ಅಯ್ಯೋ' ಎನ್ನಿಸಿತು.

**ಗೆಳೆಯರ ತಂಡಕ್ಕೆ**

**ಸದಸ್ಯರಾಗಿ**

**ಪ್ರೋತ್ಸಾಹಿಸಿರಿ.**

ಮುಂದಿನ ತನ್ನ ಸ್ಥಿತಿಯನ್ನು ವಿಧಿ, ಇಂದೇ ತನಗೆ ಪ್ರದರ್ಶಿಸಿದಂತೆ, ಶೀನುವಿಗೆ ಭಾಸವಾಯಿತು. ಕಂಡ ಊರಿನಲ್ಲೇ ಹೊಟ್ಟೆಗೆ ಸಂಪಾದಿಸಿಕೊಳ್ಳಲಾರದ ನನಗೆ, ಕಾಣದ ಊರಿನಲ್ಲಿ ಜೀವನ ಸಾಗಿಸಲು ಸಾಧ್ಯವೇ? ಎಂಬ ಪ್ರಶ್ನೆ ಬಂತು. ಅದರಲ್ಲಿಯೂ, ಕೋರಿಯುಟ್ಟು ಮಕ್ಕಳನ್ನು ಎದೆಗವಚಿಕೊಂಡು, ನಿಂತಿದ್ದ ಆ ಹೆಣ್ಣನ್ನು ನೋಡಿ ಎದೆನಡುಗಿತು.

"ಪಕ್ಕದಲ್ಲಿ ಮಾತೆತ್ತದೆ ಕುಳಿತಿದ್ದ ತನ್ನ ಭಾರ್ಯೆಯ ಭವಿಷ್ಯದ ಅವತಾರವಲ್ಲವೆ ಅದು" ಎನ್ನಿಸಿತು. ಬೊಂಬಾಯಿನ ಸಾಹುಕಾರ ಬಿಸಿಲ್ಗುದುರೆಯನ್ನು ಹಿಂಬಾಲಿಸಿ ಮಣ್ಣು ಮುಕ್ಕಿದವನಂತೆ ಕಂಡ; ಇನ್ನು ಉಳಿದ ಆ ಕವಿ; ಅವನ ಅಂಗ ಪ್ರತ್ಯಂಗದಲ್ಲೂ 'ದೂರದ ಬೆಟ್ಟ ನುಣ್ಣಗೆ' ಎಂಬ ಮಾತು ಮಿಂಚುತ್ತಿತ್ತು. ಆ ಹೊತ್ತಿಗೆ ಬಸ್ಸು ಹೋಗಿ ಎಷ್ಟು ಹೊತ್ತಾಗಿತ್ತೊ ಶೀನುವಿಗೆ ಗೊತ್ತೇ ಇಲ್ಲ.

ಶೀನು ತನ್ನ ದುಡ್ಡಿನಲ್ಲಿ ಸ್ವಲ್ಪವನ್ನು ಇವರಿಗೂ ಕೊಟ್ಟು: ಉಳಿದ ದುಡ್ಡಿನೊಂದಿಗೆ ಊರಿಗೆ ಮರಳಿದ. ಅಲ್ಲಿ ಒಂದು ಚಿಕ್ಕ ಮನೆ ಬಾಡಿಗೆಗೆ ತೆಗೆದು ಚಿಲ್ಲರೆ ಅಂಗಡಿ ಪ್ರಾರಂಭಿಸಿದ; ಹನಿ ಕೂಡಿದರೆ ಹಳ್ಳ'ವೆಂಬಂತೆ, ಈಗ ಶೀನು ನಮ್ಮೂರಿನಲ್ಲಿ ಐದಾರು ಸಾವಿರದ ಕುಳ. ಆದರೆ ಮಕ್ಕಳಾದಿಯಾಗಿ ಎಲ್ಲರೂ ಅವನನ್ನು 'ಶೀನು' ಅಂತಾಲೆ ಕರೀತಾರೆ. ಯಾರಾದರೂ ಬಂದು "ಈ ಊರು ಸುಖಾ ಇಲ್ಲವೊ ಶೀನು" ಅಂದ್ರೆ, 'ದೂರದ ಬೆಟ್ಟ ನುಣ್ಗೆ' ಕಣಪ್ಪಾ, ಅಂತಾನೆ. ಮೊನ್ನೆ ಮೊನ್ನೆ, ಆ ದಾರಿಹೋಕರ ಜ್ಞಾಪಕಾರ್ಥವಾಗಿ, ಆ ಕಲ್ಯಾಣಿ ಪಕ್ಕದಲ್ಲೇ ಒಂದು ಬರ್ಜರಿ ಮಂಟಪ ಕಟ್ಟಿಸಿದ.

Swastik
'ಕಾಂತಿ'
ಚೆಲುವಿನ
ಸಾಬೂನು'



ಭಾರತದ ಅತ್ಯುತ್ತಮ ಮತ್ತು ಅತಿ ಶುದ್ಧ ಸೌಂದರ್ಯ ವರ್ಧಕ ತೈಲಗಳನ್ನು ಘನೀಕರಿಸಿ, ತಯಾರಿಸಿದ "ಕ್ಷಾಂತಿ" ಟ್ಯಾಲೆಟ್ ಸಾಬೂನು ಮೈದೊಗಲಿನ ಸರ್ವವಿಧ ಕಶ್ಮಲ ಬೆವರುಗಳನ್ನು ರೋಮಕೂಪದಿಂದೆತ್ತಿ ನಿವಾರಿಸಿ, ಮೃದುತರ, ಹಾಗು ಪ್ರಕಾಶಮಾನವನ್ನಾಗಿ ಮಾಡುವುದು.

ಪ್ರಾಣಿಗಳ ಕೊಬ್ಬಿರುವ, ರಸಾಯನ ದ್ರವ್ಯಗಳಿಂದ ಸಿದ್ಧವಾದ ಒರಟು ಸಾಬೂನುಗಳನ್ನು ಪಯೋಗಿಸಿ ನಿಮ್ಮ ಚರ್ಮವನ್ನೇಕೆ ಒರಟಾಗಿಸಿ ಅಂದಗೆಡಿಸಿಕೊಳ್ಳುವಿರಿ? ಹಿಮಮಯ ರಾಜ್ಯಗಳಲ್ಲವು ಪ್ರಯೋಜನಕಾರಿಗಳಾಗಬಹುದು. ಆದರೆ ಉಷ್ಣವಲಯದ ಮೈದೊಗಲಿಗೆ "ಕಾಂತಿ" ಯೊಂದೇ ಕಾಂತಿದಾಯಕ ಸಾಬೂನು.

ಮೂರು ತುಂಡುಗಳುಳ್ಳ ಪೆಟ್ಟಿಗೆಯೊಂದನ್ನು ಇಂದೇ ಕೊಂಡು ಉಪಯೋಗಿಸಿರಿ.

ಸ್ವಸ್ತಿಕ
ಕಾಂತಿ
ಸಾಬೂನು




KANTI SOAP FOR COMPLEXION
SWASTIK OIL MILLS, LTD. BOMBAY 15

## — ಸಾ ಹಿ ತಿ —

(೨೨ನೇ ಪುಟದಿಂದ)

ಲಿಲ್ಲ. "ಎಂತೆಂತಹ ಕಥೆ ಬರೆದಿರುವನಲ್ಲ!" ಅನ್ನುವ ಅಚ್ಚರಿ ಹುಡುಗರಿಂದ ಹಿಡಿದು ಹುದ್ದೇದಾರರಿಗೂ ಹುಚ್ಚನ ಹಾಡುಗಳು ಹಾಡಲು ಬೇಸರಕಳೆಯುವ ಸಾಧನವಾಯಿತು. ಯಾರನ್ನು ನೋಡಿದರೂ ಅವನ ಹಾಡಿನಿಂದ ಬಾಯಾಡಿಸುತ್ತ ಹೋಗುವವರೇ ಆಯಿತು ಆ ಊರಿನಲ್ಲಿ...ತಿರುನೆಯವರು ಕೆಲವರು-ಅವನ ಹಾಡುಗಳನ್ನು ಕಲಿತು-ರಾಗವೆಳೆದು ಹಾಡಲು ಅವರಿಗೆ ಹಣ ದೊರಕಹತ್ತಿದವು......ಹಾಗಿತ್ತು ಹುಚ್ಚನ ಹಾಡುಗಳು! -

ಒಮ್ಮೆ ಬೀದಿ ಅಂಚಿನಲ್ಲಿ ಕುಳಿತಿದ್ದ ಕುರುಡನೊಬ್ಬ ಹಾಡುತ್ತ ಕುಳಿತಿದ್ದನು...ಕಾರಾಡುವವರೆಲ್ಲ ಅವನು ಹಾಸಿದ್ದ ಬಟ್ಟೆಯ ಮೇಲೆ ಕಾಸೆಸೆದು ಹೋಗುತ್ತಿದ್ದರು...... ಕುರುಡನನ್ನು ನೋಡುತ್ತ ದೂರದಲ್ಲಿ ಒಬ್ಬಳು ಕುಳಿತಿದ್ದಳು. ಅವಳು ಅವನೇಳುವುದನ್ನೇ ಕಾದಿದ್ದಳು. ಅವನೆದ್ದುದನ್ನು ಕಂಡು ಅವನ ಬಳಿ ಬಂದು "ನಿನಗಾರು ಕಲಿಸಿದ ಹಾಡದು" ಅಂದಳು......"ಕೇಳಿ ಕಲಿತೆ..." ಯಾರು "ಹಾಡಿದುದು?" ನಾನರಿಯೆ......ಆ ಬೀದಿ ಗೊತ್ತು... ..."ನನ್ನ ಹಿಂದೆ ಬಂದರೆ ತಿಳಿದೀತು ಮನೆ" ಅಂದು ಮುಂದೆ ಸಾಗುತ್ತಿದ್ದ ಹುಡುಗನ ಭುಜಹಿಡಿದು ಮಾತನಾಡಿಸುತ್ತಿದ್ದವರು ಬಳಿ ಬರುತ್ತಿರುವರೆಂದು ಹೋಗುತ್ತಿದ್ದನು. ತುಸು ಹೊತ್ತಾದ ನಂತರ ಒಂದು ತಿರುವಿಗೆ ಬಂದಾಗ ಕುರುಡ "ಇಗೋ......ಎಡಭಾಗದ ಮನೆಯಲ್ಲಿ ಸದಾ ಆ ಹಾಡೇ ಹೇಳುವುದು......ನಿಜವೇನೋ........." ಅಂದು ಹುಡುಗನನ್ನು ಕೇಳಿದನು. ಹುಡುಗ "ನಿಜ" ಅಂದನು.

ಬರುತ್ತಿದ್ದವಳು-ಅವರನ್ನು ಮುಂದೆ ಬಿಟ್ಟು ಮನೆಯ ಬಳಿಗೆ "ನೀವಾರು" ಸರಸ್ವತಿ ಕೇಳಿದಳು. ಭಾವಚಿತ್ರ ಜೀವ ತುಂಬಿ ಬಂದು ಎದುರಿಗೆ ನಿಂತಂತಾಯಿತು. ಮರುಮಾತನಾಡದೆ—"ರಮಾ ಅಲ್ಲವೇ"

"ನಿಜ ನಿಜ...ಅವನೆಲ್ಲಿ" ಅಂದಳು.

"ಯಾರು"?

"ನಮ್ಮ ಸಾಹಿತಿ"

"ಸಾಹಿತಿ ಇಲ್ಲ......ಸಾಹಿತ್ಯವಿದೆ.

"ಆ!"

"ಊ" ಅವನು ಹುಚ್ಚನೆಂದು ತಿಳಿದಿದ್ದರು. ಅಯ್ಯೋ! ಒಳಗೆ ನಡೆಯಿರಿ ಎಲ್ಲ ತಿಳಿಯುವುದು............

ಇಬ್ಬರೂ ಕುಳಿತರು......ಸರಸ್ವತಿ ಎಲ್ಲ ಹೇಳಿದಳು;......ರಮೆ ಕಣ್ಣೀರಿಟ್ಟಳು.......ನನ್ನ ಮಾತನ್ನು ಕೇಳದೆ ವಾಣಿ, ವಾಣಿ ಒಲಿಯಬೇಕೆಂದು ಹಂಬಲಿಸಿದ;......ಬರಿ ನನ್ನ ಗೆಳೆತನ ಅವನಿಗೆ ಹಿತವಿಲ್ಲವಂತೆ...ವಾಣಿ ಒಲಿಯಬೇಕಂತೆ" ಅಂದಳು...ಸರಸ್ವತಿಗೆ ಅರ್ಥವಾಗಲಿಲ್ಲ; ಕಡೆಗೆ ಕೇಳಿದಳು. ರಮೆ...ಹುಚ್ಚ ಸಾಹಿತಿಗೆ... ದುಡ್ಡು ಬೇಡ; ಮುದ್ದು ಸಾಹಿತ್ಯ ಬೇಕು. ಮೈಮರೆತು ಬಿಡುವಂತಹ ಮಾತಿನ ಮಧುರತೆ ಇರಬೇಕು, ಅಲ್ಲಿಗೆ ಸಾಹಿತ್ಯವಾಯಿತು; ಅದಕ್ಕಾಗಿ ದೇವಿ ಸರಸ್ವತಿಯು ಸಂಪೂರ್ಣ ಒಲಿದರೆ ಮಾತ್ರ ಅದು ಸಾಧ್ಯ, ಅದರಿಂದ ಅವನು ಸದಾ "ವಾಣಿ ನೀನೆಂದಿಗೆ ಒಲಿಯುವುದು" ಎಂದು ಯಾರಿದ್ದರೂ ಗಟ್ಟಿಯಾಗಿ ಆಡುತ್ತಿದ್ದನು. ಅವನಿಗೆ ಸಾಹಿತ್ಯ ಸವಿಯಾಗುತ್ತಾ ಬಂದು ಸಿರಿಸೇರಬೇಕೆಂಬ ಹಂಬಲ; ಅದರಿಂದ ನನ್ನ ಬಿಟ್ಟು ಇಲ್ಲಿಗೆ ಬಂದಿದ್ದನು. ಇಲ್ಲಿ ವಾಣಿ ಒಲಿದಿದ್ದರೂ ಸಿರಿ ಸೇರಲಿಲ್ಲ" ಅಂದಳು ರಮೆ- ಸರಸ್ವತಿಗೆ ಆಗ ಎಲ್ಲ ತಿಳಿಯಿತು.

---

## ತುಸು ವಿನೋದ

'ನನ್ನ ಕೂದಲುಗಳು ಒಂದೊಂದೇ ಉದುರಿ ಹೋಗುತ್ತಿವೆ; ಇದಕ್ಕೇನಾ ಉಪಾಯ ತಿಳಿಸುವಿರಾ?

'ನನ್ನ ಹತ್ತಿರ ಒಂದು ಖಾಲಿ ಪೆಟ್ಟಿಗೆ ಇದೆ; ಅದನ್ನು ಉಪಯೋಗಿಸಿರಿ.

---

(೩೪ನೇ ಪುಟದಿಂದ)

ಅವರಿಗೆ ಪ್ರಯೋಜನ ಒದಗಿಸಿಕೊಡಲು ಸಾಧ್ಯವಿಲ್ಲ. ಮುಸ್ಲಿಮರು ಹಿಂದೂಸ್ಥಾನವು ತಮ್ಮ ಮಾತೃಭೂಮಿಯೆಂದು ತಿಳಿದು ಅದರ ಅಭಿವೃದ್ಧಿಗೂ ತಮ್ಮ ಅಭಿವೃದ್ಧಿಗೂ ಪ್ರಯತ್ನಿಸುವುದು ನ್ಯಾಯವಾದುದು. ಅವರು ಹಾಗೆ ಪ್ರಯತ್ನಿಸಬೇಕಾಗಿ ಲೇಖಕನ ವಿನಂತಿ.

---

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ಪಿ. ಪಂಡಿತರ

**ಅಶ್ವಗಂಧಾಪಾಕ** (ಕಾಫಿ, ಟೀಗಳಿಗೆ ಬದಲಾಗಿ ಉಪಯೋಗಿಸಬಹುದು.)

ಪ್ರಾತಃಕಾಲದಲ್ಲಿ ಹಾಲಿನಲ್ಲಿ ಸೇವಿಸುತ್ತಾ ಬಂದರೆ ನಂಗಳಿಗೆ ವಿಶೇಷ ಶಕ್ತಿಯೂ, ಧಾತುವೃದ್ಧಿಯೂ ಆಗುತ್ತದೆ. ಕ್ಷೀಣವಾಗಿರುವ ಮಕ್ಕಳಿಗೆ ಹಾಲಿನಲ್ಲಿ ಕೊಡುತ್ತಾ ಬಂದಲ್ಲಿ ಶರೀರ ಪುಷ್ಟಿಯನ್ನುಂಟುಮಾಡುತ್ತದೆ.

ಕೆಟಲಾಗು ಕೇಳಿರಿ. ಬೆಲೆ. ೬ ಔನ್ಸು ೦—೧೨—೦

**ಸದ್ವೈದ್ಯಶಾಲಾ—ನಂಜನಗೂಡು**

ಬ್ರಾಂಚು—ರಥಬೀದಿ, ಮಂಗಳೂರು.

# ಭಗವಾನನ ಆವಾಹನೆ

## "ಹೇ ಪ್ರಭೇ, ಪುನರವತಾರಮಾಡು"

> **ಮಾನವ ಸಮಾಜದ ಕಲ್ಯಾಣಕ್ಕಾಗಿ ಪರಮಾತ್ಮನು ರಾಮನಾಗಿಯೊ, ಕೃಷ್ಣನಾಗಿಯೊ ಅಥವಾ ಇನ್ನೇನಾದರೂ ರೂಪತಾಳಿಯೊ ಅವತರಿಸಲೇ ಬೇಕು.**

ಪರಮಾತ್ಮನೇ ವಿಶ್ವದ ಆತ್ಮ, ಅವನೇ ಜೀವನದ ಶಕ್ತಿ ಈಶ್ವರನ ಅಸ್ತಿತ್ವವನ್ನೂ ಒಂದುವೇಳೆ ನಾವು ನಿರಾಕರಿಸಿದರೂ ಸಹ, ಅವನ ಅಸ್ತಿತ್ವವು ಇಲ್ಲದೇ ಹೋಗುವುದಿಲ್ಲ. ಅವನು ಸರ್ವವ್ಯಾಪಿಯೆಂಬುದನ್ನೂ ನಾವು ಒಪ್ಪಿಕೊಳ್ಳದಿದ್ದರೂ ಸಹ ಅವನ ಸರ್ವವ್ಯಾಪಕತ್ವದ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ. ಅವನನ್ನು ಮನಃಪೂರ್ತಿಯಾಗಿ ನಿಂದಿಸಿದರೂ, ಅವನು ಸ್ವಲ್ಪವೂ ಅಪಮಾನಗೊಳ್ಳುವುದಿಲ್ಲ ಅವನನ್ನೂ ಯಾರಾದರೂ ಪ್ರೀತಿಸಿದರೆ. ಅವನು ಸಂಪೂರ್ಣವಾಗಿ ಪ್ರೇಮಮಯನಾಗುತ್ತಾನೆ; ದಯಾಳುವಾಗುತ್ತಾನೆ. ಈ ಸಮಸ್ತ ವಿಶ್ವವೂ, ಪರಮಾತ್ಮನಿಂದಲೇ ರಚಿಸಲ್ಪಟ್ಟು, ಅವನಿಂದಲೇ ಪೋಷಿಸಲ್ಪಡುತ್ತಿದೆ. ಅದರ ನಾಶದ ಕಾಲವು ಸಮೀಪಿಸಿದರೆ ಅವನೇ ಅದನ್ನು ನಾಶಪಡಿಸುತ್ತಾನೆ. ವಿಶ್ವದ ರಚನೆ, ಪಾಲನೆ ಮತ್ತು ನಾಶಗಳ ವಿಚಾರವಾಗಿ ಸರ್ವಶಕ್ತನಾದ ಪರಮಾತ್ಮನ ಅಪ್ಪಣೆಯಂತೆ, ಪ್ರತಿ ನಿಮಿಷದಲ್ಲಿಯೂ ಕೆಲಸ ನಡೆಯುತ್ತಿರುತ್ತದೆ. ಜನನ, ಮರಣಗಳು ಪ್ರಕೃತಿಯ ಅಮರನಿಯಮಗಳು. ಪರಮಾತ್ಮನ, ನಂತರ, ವಿಭಾಗಮಾಡಲು ಸಾಧ್ಯವಿಲ್ಲದೆ ಇರುವ ವಸ್ತುವೆಂದರೆ 'ಪ್ರಕೃತಿ.' ವಿಶ್ವದಲ್ಲಿರುವುದೆಲ್ಲವೂ ಪ್ರಕೃತಿಯ ಸಂಸರ್ಗದಿಂದಲೇ ಉಂಟಾಗಿರುವುದು. ಸಮಸ್ತ ಸಾಮ್ರಾಜ್ಯಗಳ ಉತ್ಪತ್ತಿ, ಲಯಗಳೂ ಸಹ ಈ ಪ್ರಕೃತಿಯ ನಿಯಮಕ್ಕನುಸಾರವಾಗಿಯೇ ನಡೆಯುವುವು. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು "ಧರ್ಮವು ನಾಶವಾದಂತೆಲ್ಲ, ಅದರ ಪುನರುತ್ಥಾನಕ್ಕೆ ನಾನು ಅವತಾರಮಾಡುವೆನು ದುಷ್ಟರನ್ನು ಶಿಕ್ಷಿಸುವುದಕ್ಕೂ ಶಿಷ್ಟರನ್ನು ರಕ್ಷಿಸುವುದಕ್ಕೂ ಧರ್ಮವನ್ನು ಕಾಪಾಡುವುದಕ್ಕೂ ನಾನು ಪ್ರತಿಯುಗದಲ್ಲಿಯೂ ಅವತಾರಮಾಡುತ್ತಿರುವೆನು." ಎಂದು ಅಪ್ಪಣೆಕೊಡಿಸಿರುವನು.

### ಧರ್ಮ

ಧರ್ಮವೆಂದರೇನು? ಮನುಷ್ಯನಿಗೂ ಪರಮಾತ್ಮನಿಗೂ ನಡುವೆ ಇರುವ ಸಂಬಂಧವೇ ಧರ್ಮ. ಮನುಷ್ಯಜಾತಿಯು ಇತರ ಜೀವಿಗಳಿಗೆ ಮಾಡಬಹುದಾದ ಕರ್ತವ್ಯವೇ ಕರ್ಮ. ಧರ್ಮ ಪ್ರಕಾಶವಾದರೆ, ಅಂದರೆ ಮನುಷ್ಯಜಾತಿಯ ಒಂದು ಗುಂಪು, ಇತರರನ್ನೂ ಹಿಂಸೆಗೆ ಗುರಿಮಾಡಿ, ಅನ್ಯಾಯವಾದ ಲಾಭ ಹೊಂದಲು ಯತ್ನಿಸಿದರೆ ಆಗ ಧರ್ಮವು ಸಂಕಟದಲ್ಲಿದೆ ಎಂದರ್ಥವಾಗುವುದು. ರಾವಣನು ಪರಮಾತ್ಮನಲ್ಲಿ, ತನಗೆ ಎಲ್ಲ ಶಕ್ತಿಗಳನ್ನೂ ಅನುಗ್ರಹಿಸಬೇಕೆಂದು ಪ್ರಾರ್ಥಿಸಿದನು. ದೇವರು ಎಲ್ಲವನ್ನೂ ಕರುಣಿಸಿದನು ಆದರೆ ರಾವಣನು ಅದರಿಂದ ಅನ್ಯಾಯವಾದ ಲಾಭಹೊಂದಲು ಯತ್ನಿಸಲು ಪರಮಾತ್ಮನು ರಾಮನಾಗಿ ಬಂದು, ರಾವಣನನ್ನೂ ತೀರಿಸಿದನು. ಹಿರಣ್ಯಕಶ್ಯಪನ ವಿಚಾರವೂ ಹೀಗೆ. ಶ್ರೀ ಕೃಷ್ಣ ಪರಮಾತ್ಮನ ಜನ್ಮವು ತನ್ನ ಮಾವನಾದ ಕಂಸನ ಕಾರಾಗೃಹದಲ್ಲಾಯಿತು. ಮನುಷ್ಯರಿಗೆ ತೊಂದರೆಯನ್ನುಂಟುಮಾಡುತ್ತಿದ್ದ. ಅನೇಕ ದುಷ್ಟ ರಾಕ್ಷಸರನ್ನೂ ಶ್ರೀ ಕೃಷ್ಣನು ಬಾಲ್ಯದಲ್ಲಿಯೇ ನಾಶಮಾಡಿದನು. ನಂತರ ಎಲ್ಲರಿಗಿಂತ ಹೆಚ್ಚಾಗಿ ಮನುಷ್ಯರನ್ನೂ ಪೀಡಿಸುತ್ತಿದ್ದ, ಕಂಸನನ್ನೂ ಸಹ ತೀರಿಸಿದನು.

ಈಗಲೂ ವಿಶ್ವವು ಅಸುರರಿಂದ ತುಂಬಿಹೋಗಿದೆ. ನಿಜವಾದ ಧಾರ್ಮಿಕರ (ಸುರ) ಸಂಖ್ಯೆಯು ತೀರ ಕಡಿಮೆಯಾಗಿ ಹೋಗಿದೆ. ಮನುಷ್ಯ ಸಮಾಜಕ್ಕೆ ತೊಂದರೆಯನ್ನೂ ಕೊಡುತ್ತಿರುವ ಅನೇಕ ಮಹಾ ಯೋಧರನ್ನೂ, ಶ್ರೀ ಕೃಷ್ಣನು ಕುರುಕ್ಷೇತ್ರದ ಮೈದಾನದಲ್ಲಿ, ಅರ್ಜುನನಿಂದ ಕೊಲ್ಲಿಸಿದನು. ಆದರೆ ಯುದ್ಧದಲ್ಲಿಯಾಗಲಿ, ರಾವಣನೊಡನೆ ನಡೆದ ಯುದ್ಧದಲ್ಲಾಗಲಿ, ಶಾಂತಿಪ್ರಿಯರಾದ ಪ್ರಜೆಗಳಿಗೆ ರೈತರು, ಕೂಲಿಯವರಿಗೆ ಯಾವ ವಿಧವಾದ ತೊಂದರೆಯನ್ನೂ ಕೊಡಲಿಲ್ಲ. ಈ ಧರ್ಮಾತ್ಮರ ರಕ್ಷಣೆಗಾಗಿಯೇ ಪರಮಾತ್ಮನು ಹಳ್ಳಿಗಳಿದ್ದುದು. ಅವನೇ ಧರ್ಮದ ಸ್ವರೂಪ. ಸೂರ್ಯನಿಂದ ಪರಮಾತ್ಮನ ಆದರ್ಶವನ್ನು ನಾವು ಅರಿಯಬಹುದು. ವಿಶ್ರಾಂತಿಯಿಲ್ಲದೆ, ಸೃಷ್ಟಿಯ ಪ್ರಯೋಜನಕ್ಕಾಗಿಯೇ

ಬೆಳಕನ್ನೂ ಕೊಡುತ್ತಿರುವರು. ಸೂರ್ಯನಿಗೆ ಜೀವವಿಲ್ಲವೆಂದು ಹೇಳುವುದು ಸರಿಯಲ್ಲ ಏಕೆಂದರೆ ಈ ಭೂಮಿಯು ವಿಶ್ವದ ಒಂದು ಸಣ್ಣ ಭಾಗ ಮತ್ತೂ ಸೂರ್ಯಮಂಡಲವು ಒಂದು ಸಣ್ಣ ನಕ್ಷತ್ರದಂತಿದೆ. ಅವೂ ಸಹ ಪರಮಾತ್ಮನಿಂದ ರಚಿತವಾದ ನಿಯಮಗಳನ್ನು ಪಾಲಿಸುತ್ತಿವೆ

ಇಂದು ಅಸುರರ ಅತ್ಯಾಚಾರದಿಂದ ಭೂಮಿಯು ತುಂಬಿಹೋಗಿದೆ. ಎಲ್ಲೆಲ್ಲಿಯೂ ಧರ್ಮಕ್ಕೆ ಸಂಕಟವುಂಟಾಗಿದೆ ಅಂದಮೇಲೆ, ಈಶ್ವರನ ನಿಯಮವನ್ನು ಉಲ್ಲಂಘಿಸಿದ ತಪ್ಪಿಗಾಗಿ ನಾವು ಶಿಕ್ಷೆಯನ್ನನುಭವಿಸಲೇ ಬೇಕು. ಯುದ್ಧಪ್ರಿಯರಾದ ಜನರು, ಕೂಲಿಯವರು ಮತ್ತು ರೈತರನ್ನು ತಮ್ಮ ಲಾಭಕ್ಕಾ ಬೇಟೆಯಾಡುತ್ತಿದ್ದಾರೆ. ಈ ಬಗ್ಗೆ ಅವರಿಗೆ ಶಿಕ್ಷೆಯಾಗಲೇ ಬೇಕಾಗಿದೆ. ಪೃಥ್ವಿಯು ಆಯುಧಗಳಿಂದ ತುಂಬಿಹೋಗಿದೆ. ಈಗಿರುವ ಪ್ರಶ್ನೆ ಏನೆಂದರೆ, ಈ ಆಯುಧಗಳನ್ನೇ ನಾಶಮಾಡಿರಬೇಕೆ ಅಥವಾ ಸಮಸ್ತ ಮನುಷ್ಯರನ್ನೇ ನಾಶಮಾಡಬೇಕೇ ಎಂಬುದೇ. ಆದರೆ ಮನುಷ್ಯ ಸಮಾಜದ ನಾಶವನ್ನು ಈಶ್ವರನ ನಿಯಮವು ಸಹಿಸುವುದಿಲ್ಲ ಇತಿಹಾಸಕ್ಕನುಸಾರವಾಗಿ, ಪರಮಾತ್ಮನು, ಧರ್ಮವನ್ನು ಪುನಃ ಸ್ಥಾಪಿಸುವುದಕ್ಕಾಗಿ, ಬಡವರನ್ನು ರಕ್ಷಿಸುವುದಕ್ಕಾಗಿ ಯಾವುದಾದರೊಂದು ಅವತಾರವನ್ನು ಧರಿಸಲೇ ಬೇಕು.

ಭಗವಂತನು ಇದುವರೆಗೆ ಜನ್ಮಧಾರಣೆಮಾಡದಿದ್ದಲ್ಲಿ, ಅವನು ನಿಜವಾಗಿಯೂ ಈಗಾಗಲೇ ಯಾವ ತಾಯಿಯ ಗರ್ಭದಲ್ಲೇ ಇರಲೇ ಬೇಕು. ಆದರೆ ದೇವಕಿ ಯಾರು? ಕಂಸ ಯಾರೆಂಬುದು ಇದುವರೆಗೆ ತಿಳಿದಿಲ್ಲ. ಮನುಷ್ಯ ಸಮಾಜದ ಕಲ್ಯಾಣಕ್ಕಾಗಿ, ನಿಜವಾಗಿಯೂ ಪರಮಾತ್ಮನು, ರಾಮನೋ, ಕೃಷ್ಣನೋ ಅಥವಾ ಮತ್ತಾವುದಾದರೂ ರೂಪಿನಿಂದ ಬರಲೇ ಬೇಕು. ಇದೇ ಈಶ್ವರನ ಅಚಲವಾದ ನಿಯಮ.

**ಗೆಳೆಯರ ತಂಡಕ್ಕೆ**

**ಸದಸ್ಯರಾಗಿ**

**ಪ್ರೋತ್ಸಾಹಿಸಿರಿ.**

**SRI DURGA BOOK STALL & CIRCULATING LIBRARY**

**STEPHENS SQUARE**
**BANGALORE CANTT.**

**9. AVENUE ROAD**
**BANGALORE CITY.**

*We always Stock:*—New and secondhand Books for School & Colleges. General books, Vernacular books, etc.

**We Buy Books** favourably & **Sel Books** at competitive prices.

*The cheapest Book House for one and all.*

We deal exclusively in secondhand English Novels and periodicals. Our library is fully equipped with latest novels & other publications.

TERMS PLEASE ENQUIRE PERSONALLY.

**ಶ್ರೀ ದುರ್ಗಾ ಪುಸ್ತಕ ಭಂಡಾರ**

**ಅವೆನ್ಯೂ ರೋಡ್.** **ಬೆಂಗಳೂರು ಸಿಟಿ.**

ನಮ್ಮ ಹೊಸ ಮತ್ತು ಹಳೇ ಪುಸ್ತಕಗಳು ಸರಸವಾದ ಬೆಲೆಗೆ ಸಿಕ್ಕುತ್ತವೆ.

ಹಳೇ ಪುಸ್ತಕಗಳನ್ನು ಕೊಳ್ಳುತ್ತೇವೆ ಮತ್ತು ಮಾರುತ್ತೇವೆ.

ಸಿರಿವಂತಿಕೆಯನ್ನು ಚಿತ್ರಿಸುವ ಅವನಿಗೆ ಸಿರಿ ಇರಲಿಲ್ಲ. ಅವನ ಯಾವ ಕೆಲಸವೂ ಅವನಿಗೆ ಸಿರಿಯನ್ನು ತರುವಂತಹುದಿರಲಿಲ್ಲ. ಅದರಿಂದ ಅವನಿಗೆ ಕುಳಿತೆಡೆಯಲ್ಲಿ ನಗೆ ಬರುತ್ತಿತ್ತು. ಅವನನ್ನು ಎಲ್ಲವೂ ಹಾಸ್ಯ ಮಾಡುತ್ತಿರುವಂತೆ ಅನುಭವಿಸುವನು. ಅದರಿಂದ ಅವನಿಗೊಂದು ಬಗೆಯ ಉನ್ಮಾದ ಹುಟ್ಟಿತು. ಕುಳಿತೆಡೆಯೇ ಎಲ್ಲವನ್ನೂ ಮರೆತು ಬಿಡುವನು. ಏತಕ್ಕಾಗಿ ಬಂದೆನೆಂಬುದನ್ನು ಮರೆಯುವನು. ಅದನ್ನೇ ಕುರಿತು ಮಾತನಾಡುತ್ತಲೇ ಯೋಚಿಸುವನು. ಆಗ ಅವನನ್ನು ಕಂಡವರು ಹುಚ್ಚ ಅಂದುಕೊಳ್ಳುವರು. ಕಿರಿಯರಿಗೆ ಅವನು ಆಟದ ಸಾಮಾನಾಗುವನು. ಅವನು ಬೆಳಗಾದಾಗ ಮುರುಕು ದೇವಸ್ಥಾನದ ಬಳಿ ಬಂದು ಕುಳಿತರೆ ಸರಿ; ಹುಡುಗರು ಅವನ ಸುತ್ತ ಸೇರಿ ತಿಳಿದು ಬಂದ ರೀತಿಯಲ್ಲಿ ಚೇಷ್ಟೆ ಮಾಡುವರು. ಅದು ಅವನಿಗೆ ಕಂಡರೂ ಅವರ ಮಾತು ಕಥೆಗಳು ಕೇಳಿಬಂದರೂ ಯಾವ ಕೋಪವನ್ನೂ ಹುಟ್ಟಿಸುತ್ತಿರಲಿಲ್ಲ. ಸುಮ್ಮನಿರುತ್ತಿದ್ದನು.

ಕೆಲವು ತುಸು ದೊಡ್ಡ ಹುಡುಗರು ಅವನನ್ನು ನೋಡುವಾಗ ಬಗೆಬಗೆಯಾಗಿ ಮಾತನಾಡಿಕೊಳ್ಳುವರು. ಅವರಲ್ಲಿಯೇ ಚರ್ಚಿಮಾಡಿಕೊಳ್ಳುವರು. ಅವರಿಗೆ ಅವನ ವಿಷಯವಾಗಿ ಏನೂ ತೀರ್ಮಾನವಾಗದು; ಹಾಗೆಯೇ ಹೋಗುವರು.

ಅವನು ಸದಾ ದೇವಾಲಯದಲ್ಲಿಯೇ ಇರುತ್ತಿದ್ದಿಲ್ಲ. ಅಲ್ಲಲ್ಲಿ ಸ್ಥಳಗಳನ್ನೇರ್ಪಡಿಸಿಕೊಂಡಿದ್ದನು. ದೊಡ್ಡ ಕೊಳದ ಬಳಿ ಅವನನ್ನು ಕಂಡಾಗ ಜನರು ಒಂದು ಬಗೆಯಾಗಿ ಅವನನ್ನು ಎಣಿಸುವರು. ನೀರಿಗೆ ಬರುವ ಜನರಿಗೆ ತೊಂದರೆಯಾದೀತೆಂತಲೂ ಅಲ್ಲದೆ ನೀರಿಗೆ ಬಂದವರು ಈಜುವುದರಿಂದ ನೀರು ಕೆಡುವುದೆಂದೂ ಅದನ್ನು ಅಡ್ಡಿಪಡಿಸಲು ಅಲ್ಲಿ ಕಾವಲು ಒಬ್ಬನಿದ್ದುದರಿಂದ ಎಲ್ಲರೂ ನಿರ್ಭಯವಾಗಿ ಬಂದು ಹೋಗುತ್ತಿದ್ದರು. ಅವನು ಅಲ್ಲಿ ಬಂದು ಕುಳಿತಾಗ ಕೆಲವು ಪದಗಳನ್ನು ಕಿರುದನಿಯಲ್ಲಿ ಹೇಳುವನು. ಅದು ಕಾವಲುಗಾರನಿಗೆ ಮಂತ್ರ ಕೇಳಿಸುತ್ತಿತ್ತು. ಆಗ ಅವನಿಗೆ ಹುಚ್ಚನ ಮೇಲೆ ತುಸು ಮಮತೆ. ಕಂಡಾಗ "ಏಯಿ......ಬೀಡಿ ಸೇದುತಿ ಏನು?" ಅನ್ನುವನು. ಆ ಉನ್ಮಾದ- ನಗುತ್ತ ತಲೆ ಅಲ್ಲಾಡಿಸಿ "ನಾ ಒಲ್ಲೆ" ಅನ್ನುವನು. ಹುಚ್ಚನಂತಿದ್ದರೂ ಅವನ ಮಾತುಗಳು ಜಾಣನ ಮಾತುಗಳಂತೆ ತೋರಿ ಬರುತ್ತಿತ್ತು. ಆ ಕಾವಲುಗಾರನಿಗೆ...... ಹಾಗೆಯೇ ದಿನ ಹೋಗುತ್ತಿತ್ತು. ಕಾವಲುಗಾರ



ನಿಗೆ ಹುಚ್ಚನನ್ನು ತನ್ನ ಮನೆಗೆ ಕರೆದೊಯ್ದು ಅವನ ಹುಚ್ಚಿಗೆ ಕಾರಣ ಕೇಳಬೇಕೆನಿಸಿತು. ಕಾರಣ ಹುಚ್ಚನು ಹುಚ್ಚನ್ನು ನಟಿಸುತ್ತಿರುವನೆಂದು ಕಾವಲುಗಾರನಿಗನಿಸಿತು. ಅದನ್ನು ಅವನಿಗೆ ಹೇಳಬೇಕೆಂದುಕೊಂಡು ಆ ದಿನ ಅವನಿಗಾಗಿ ಕಾದು ಕುಳಿತಿದ್ದನು.

ಎಲ್ಲಿಂದಲೋ ಬಂದು ನೀರಿಗಿಳಿದಿದ್ದ ಹುಚ್ಚನನ್ನು ಕಾವಲುಗಾರ ನೋಡಿರಲಿಲ್ಲ. ಹುಚ್ಚ ಮೆಟ್ಟಲಿನ ಮೇಲೆ ಕುಳಿತು ಕಾಲೆರಡನ್ನು ನೀರಿನಲ್ಲಿಟ್ಟು ಕೈಯ್ಯನ್ನು ನೀರಿನಲ್ಲಿ ಆಡಿಸುತ್ತ ತನ್ನ ಗಾಯನ ಆರಂಭಿಸಿದ್ದನು. ಹತ್ತಾರು ಮೆಟ್ಟಲುಗಳ ಮೇಲೆ ಕುಳಿತಿದ್ದ ಕಾವಲುಗಾರನಿಗೆ ಅದು ಕೇಳಿಸಲಿಲ್ಲ. ಅವನು ಸುಮ್ಮನೆ ಊರು ಕಡೆ ಮುಖಮಾಡಿ ಕುಳಿತಿದ್ದನು. ಮಧ್ಯಾಹ್ನ ಮೀರಿತ್ತು; ಸಂಜೆ ತಲೆ ಹಾಕಲು ಹವಣಿಸಿತ್ತು. ತುಸು

ಹೊತ್ತಾದ ನಂ
ಮುಗಿಯಿತೆಂದು
ಣ್ಣಾದ ಮುಳುಗ
ನಲ್ಲಿ ಸೇರಿ ಹು
ದ್ದವು. ಸಣ್ಣ

ಹೆಚ್ಚಾಯಿತು.
ಗಳು ಎದ್ದು
ಗುಂಡನ್ನು ಹ
ಕೇಳಿ ತೋಟ
ನಲ್ಲಿ ಕುಳಿತಿದ್ದ

"ಆದಾ
ಇಲ್ಲ......ಏ
ಹುಚ್ಚನ ಗ
ಕೊಂಡನು.
ಉದ್ದನೆಯ
ಕಣ್ಣು ಕೆನ್ನೆ

ಕೆಲಸ
ಹೊಂಬ
ು ನೀರಿ
ಗಿಸುತ್ತಿ
ಕ್ಕ ದನಿ
; ದೂರ
ಮರಗಳ
ು ತಮ್ಮ
ಹುಚ್ಚನ
ಸೇರಿಸಿ
ಳಿ ತುಸು
ತ್ತಿತು.
ನ್ನು ಹೆ
ಹುಟ್ಟಿಸ
ನಿಯೂ
. ಹು
ಧ್ವನಿ
ಗಿಬಂತು.
ೋಲಾಹಲ

## “…ಹಿತ್ರಿ”

:

“ಶ್ರೀ ಜ್ಯೇಷ್ಠಪುತ್ರ”

ರಿದ್ದವು
ಯಾರೋ
ಾರ ಸದ್ದು
ದಾಗ ನೀರಿ

ನೋಡಲೇ
ು ಕೈ ತಟ್ಟಿ
ಗೆ ಸೆಳೆದು
ದುಗಿಸಿದನು.
ಮ ಭಾಗದ
ನು ನಿಜ

ವಾದ ನಗೆಯೊಂದನ್ನು ನಕ್ಕು ಮುಖ ನೋಡುತ್ತಾ ಕುಳಿತಿದ್ದನು.

“ಏಳು ವೇಳೆ ಆಯಿತು......ನನ್ನ ಮನೆಗೆ ನೀನು ಈಗ ಬರಲೇಬೇಕು......” ಕಾವಲುಗಾರ ಮೆಟ್ಟಿಲಿಳಿದು ಬಂದು ಅವನ ಭುಜವನ್ನು ಹಿಡಿದು ಕುಲುಕಿದನು. ಹುಚ್ಚನಿಗೆ ಮನಸ್ಸಿನ್ಗೇನೋ ಭಾಸವಾಗಿರಬಹುದು. ಇನ್ನೊಂದು ಬಾರಿ ನಕ್ಕನು. ಕಣ್ಣು ಮಿಂಚಿತು. ನೀರೂರಿ ಬಂತು. ಕೂದಲನ್ನು ಹಿಂದಕ್ಕೆ ನೇವರಿಕೊಂಡು ತಲೆತಗ್ಗಿಸಿಕೊಂಡು ಮೆಟ್ಟಲುಗಳನ್ನು ಹತ್ತಿ ಮೇಲೆ ಒಂದನು. ಸೂರ್ಯನು ಮುಳುಗಿಯೇ ಬಿಟ್ಟನು....ಕತ್ತಲೆ ಸುತ್ತಲೂ ಹಬ್ಬುತ್ತ ಬಂತು–ಊರಿನ ದೀಪಗಳು ಕಾಣಿಸಿಕೊಂಡವು...ಆಗ ನೀರಿಗಾಗಿ ಹೆಂಗಸರದೊಂದು ಗುಂಪುಬಂದಿತು. ಅವರನ್ನೆಲ್ಲನೋಡುತ್ತ ಕಾವಲುಗಾರನ ಸಂಗಡವಿದ್ದ ಹುಚ್ಚ ಒಂದೆಡೆ ಕುಳಿತುಕೊಂಡನು. ಅವರು ಬಗೆಬಗೆಯ ಮಾತನಾಡುತ್ತ ನೀರನ್ನು ತುಂಬಿಕೊಂಡರು. ಮತ್ತೆ ಹೊರಟರು. ತುಸು ಹೊತ್ತಾದ ನಂತರ ಹುಚ್ಚನೂ ಕಾವಲಗಾರನೂ ಕೊಳದ ಬಲಗಡೆಗಿದ್ದ ದಾರಿಯಲ್ಲಿ ನಡೆಯುತ್ತ ಹೋದರು.

ಕಾವಲುಗಾರ ಹುಚ್ಚನಿಗೆ ಆಶ್ರಯ ಕೊಟ್ಟುದು ಅವನದೆಷ್ಟು ಕರುಣೆಯೋ ತಿಳಿಯದು. ಹುಚ್ಚನು ನಿತ್ಯವೂ ಅವನನ್ನು ಹೊಗಳುತ್ತ ನಡೆದನು. ಅಲ್ಲಿಗೆ! ಹೋದಂದಿನಿಂದ ಊರನ್ನು ಸುತ್ತಿ ಸುತ್ತಿ ಬರುವುದು ನಿಂತುಬಿಟ್ಟಿತು. ಮನೆಯಲ್ಲಿ ಒಂದೆಡೆ ಕುಳಿತಿರುವುದು ಹುಚ್ಚನ ಕೆಲಸ–ಕಾವಲುಗಾರನ ಅಪ್ಪಣೆ. ಕುಳಿತಲ್ಲಿಯೇ ಅವನಿಗೆ ಬೇಕಾದುದೆಲ್ಲವೂ ಬರುವಂತೆ ಏರ್ಪಾಡು ನಡೆದಿತು. ಅದರಂತೆ ಹುಚ್ಚನ ಹುಚ್ಚು ಕರಗಿ ಹರಿಯುತ್ತ ಹೋಯಿತು. ಗೆಳೆತನ ಹಬ್ಬಿಹೋಗಿ ಹುಚ್ಚ ಬಹು ಮಮತೆಯಿಂದ ಸಲಿಗೆಯಿಂದ ಕಾವಲುಗಾರರನ್ನು ಕರೆದು ಮಾತನಾಡಿಸುವನು. ಅದರಂತೆ ಅವನೂ ಮಾತನಾಡಿಸುವನು. ಯಾರಿಂದಲೂ ಯಾರಿಂಗೂ ಬೇಸರವಾಗದ ರೀತಿಯಿಂದ ಕೆಲಸ ಸಾಗುತ್ತಲಿತ್ತು.

ಕಾವಲುಗಾರ ಹುಚ್ಚನಿಗಿಂತಲೂ ಹಿರಿಯನು. ಅವನಿಗೊಬ್ಬಳು ಮಗಳಿದ್ದಳು. ಅವಳಿಗೆ ಹುಚ್ಚನ ಕೆಲಸದಲ್ಲಿ ಬಹಳ ಗೌರವ. ಅವನ ಮಾತುಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ವಿಶೇಷ ಬುದ್ಧಿವಂತಿಕೆಯನ್ನು ಅವನಿಗೂ ಅಚ್ಚರಿಯಾಗುವ ತರದಲ್ಲಿ ಸೂಚಿಸಿದ್ದಳು. ಅದರಿಂದ ಇಬ್ಬರೂ ಕುಳಿತು ಮಾತನಾಡುತ್ತಿದ್ದುದು ವಾಡಿಕೆಯಾಯಿತು. ಅವಳೇ ಸರಸ್ವತಿ ಕಾವಲುಗಾರ ಪ್ರೀತಿಗೆ “ಸರಸೂ” ಅಂದು ಕರೆದರೆ ಹುಚ್ಚ ಪ್ರೀತಿಯಿಂದ “ವಾಣಿ” ಅನ್ನುವನು. ಕಾವಲುಗಾರನಿಗೆ ಹುಚ್ಚನಲ್ಲಿ ಗೆಳೆತನ ಹೆಚ್ಚೋ ನಂಬಿಕೆ ಹೆಚ್ಚೋ ಅನ್ನುವುದೇ ಒಂದು ದೊಡ್ಡ ಯೋಚನೆಯಾಗಿ ಕಡೆಗೆ ಸರಸ್ವತಿಗೆ “ಅವನಿಗೆ ನಂಬಿಕೆಯೇ ಹೆಚ್ಚು” ಅನ್ನುವಳು. ಅದರಿಂದ ಬಹು ಸಲಿಗೆಯಿಂದ ಹುಚ್ಚನೊಡನೆ ಮಾತಿಗೆ ಕೂಡುವಳು. ಮನೆಕೆಲಸ ಮುಗಿಸಿ ಅವನ ಬಳಿ ಬಂದು ಕುಳಿತುಕೊಳ್ಳುವಳು. ಆಗ ಮಾತುಕತೆ ಬೆಳೆಯುತ್ತ ಹೋಗಿ ಚರ್ಚೆಯಾಗುವುದು. ಇಬ್ಬರೂ ಒಂದು ಬಗೆಯ ತೀರ್ಪಿಗೆ ಬಂದು ನಕ್ಕು ಸುಮ್ಮನಾಗುವರು. ಅದರಂತೆ ಆ ದಿನವೂ ಕುಳಿತಿದ್ದರು.

“ವಾಣಿ” ಅಂದ ಹುಚ್ಚ.

“ಏನು”? ಅಂದಳು ಸರಸ್ವತಿ.

“ಎಂದಿಗೆ ನೀನು ಒಲಿಯುವುದು?” ಹುಚ್ಚ ನುಡಿದ. ಅವಳನ್ನು ದೃಷ್ಟಿಸಿ ನೋಡುತ್ತಲಿದ್ದ. ಮುಖದಲ್ಲಿ ನಗೆಯಿರಲಿಲ್ಲ. ಅವಳಿಗೆ ಮನಸ್ಸು ತುಸು ಯೋಚನೆಗೆ ಸಿಕ್ಕಿತು. “ಅವನರ್ಥವೇನು?” ಅನ್ನುವುದೇ ಪ್ರಶ್ನೆ. ಕೇಳದೆ ತಾನೇ ತಿಳಿದುಕೊಳ್ಳಲು ಆಶೆ–ಸ್ವಭಾವ ಎಂದ ಆತ್ಮಗೌರವ...... ಯೋಚಿಸಿದಳು. ಯೋಚಿಸುತ್ತ ಕುಳಿತಳು...... ಬಹುಕಾಲ ಮೌನವಾಗಿದ್ದಳು, ಅವಳಿಗೆ ತಿಳಿಯಲಿಲ್ಲ. ಆ ದಿನ ಅವಳ ಬುದ್ಧಿ ಕೆಲಸಮಾಡಲಿಲ್ಲ... “ಒಲಿಯುವದೆಂದು?” ಏಕೆ?......ಹೇಗೆ?...... ನನ್ನಿಂದ ಅವನಿಗೇನಾಗಬೇಕು ? ಇದೇತರ ಮಾತು?......ಛೀ ಹುಚ್ಚ......ಗೌರವಸ್ಥನಲ್ಲ ......ವೇಷಧಾರಿ......ಆ ?......ತಂದೆಗೆ ಒಳ್ಳೆಯವ ಗಂಟುಬಿದ್ದ ನನಗಾಗಿ ಹುಚ್ಚನಾಗಿರುವಂತಿದೆ...... ಅಂದುಕೊಂಡು ಮೇಲೆದ್ದಳು...... ಅವಳಿಗೆ ಅಧೈರ್ಯವಾಗಹತ್ತಿತು. ಅವಳ ತಂದೆ

ಮನೆಯಲ್ಲಿರಲಿಲ್ಲ. ಹುಚ್ಚ ಬಲಿಷ್ಠನೂ ನಿಜ......ಹತ್ತಿರ ಯಾರೂ ಇರುತ್ತಿರಲಿಲ್ಲ. ಮುಂದೆ ನಡೆದಳು. ಹುಚ್ಚ ಮತ್ತೆ ಕರೆದ......ನಗೆ ಸಂಗಡವಿದ್ದುದು ಸರಸ್ವತಿಗೆ ಅನುಮಾನ ಪರಿಹಾರವಾಗಿ ಹುಚ್ಚನ ಹುಚ್ಚು ತಾನು ಊಹಿಸಿದುದೇ ನಿಜವೆಂದು ನಿರ್ಧಾರವಾಯಿತು. ಅವನ ಕಡೆಗೊಮ್ಮೆ ಸಿಟ್ಟಿನಿಂದ ನೋಡಿದಳು. ಹುಚ್ಚನಿಗೆ ಅವಳ ತಪ್ಪು ತಿಳಿವಳಿಕೆ ಮನಸ್ಸಿಗೆ ಅನುಭವವಾಯಿತು; 'ಯಾರಿಗಿಂತಲೂ ಮೇಲಲ್ಲ......ನೀನು......ಊಹಿಸಲಾರದಂತಹ ಯೋಚನೆಗೇನು ಕಾರಣ ವಾಣಿ......ಒಲಿಯಲು ಮನಬಾರದೇನು?..." ಅಂದನು...... ಅವಳಿಗೆ ಉಳಿದಿದ್ದ ಧೈರ್ಯವೂ ಕೊಚ್ಚಿಹೋಗಿ ಹೃದಯವನ್ನು ಭೀತಿಯಲ್ಲಿ ಕೆಡಹಿತು. ಹುಚ್ಚ ನಿಜವಾಗಿಯೂ ಜಾಣ. ಹುಚ್ಚನೆಂದುಕೊಂಡು...... ಬೀದಿಯ ಬಾಗಿಲಿಗೆ ಹೋಗಿ ನಿಂತಳು......ತಂದೆ ಬಂದ ಮೇಲೆಯೇ ಒಳಹೋಗುವುದು ಎಂದುಕೊಂಡಿರಬೇಕು......ಹುಚ್ಚನಿಗೆ ತಿಳಿಯಿತು ಮತ್ತೆ ನಕ್ಕನು. "ತಿಳಿದುಕೊಳ್ಳಲಾರದಂತಹ ಮಾತೇ ನನ್ನದು?" ನಾನಾಡಿದುದು? ನಾನಾಡುತ್ತಿರುವುದು-ನಾನಾಡುವುದು?" ಅಂದುಕೊಂಡು... ಅದರಿಂದಲೇ ಇರಬೇಕು ರುಚಿ ಇಲ್ಲ. ರಚನೆಯು ಸುಂದರವಲ್ಲ—ಉಹ್... ವಾಣಿ ಒಲಿಯುವ ವರೆವಿಗೂ ಹಾಗೆಯೇ ಅಂದುಕೊಂಡು ಬೀದಿಗೆ ಬಂದು ನೇರವಾಗಿ ನಡೆದನು......ಸರಸ್ವತಿಗೆ ಒಂದು ಬಗೆಯ ಸಮಾಧಾನ-ಯೋಚನೆ ಎರಡೂ ಒಮ್ಮೆಯಾಗಿ ಬಂದು ಮೊದಲಿನ ಯೋಚನೆ ಅದರಲ್ಲಿ ಮರೆಯಾಯಿತು. ಅವನನ್ನೇ ನೋಡುತ್ತ ನಿಂತುಕೊಂಡಳು......ಆಗಲೂ ಸಂಜೆಯಾಗಿತ್ತು......ಕಾಣುವ ವರೆವಿಗೂ ನೋಡಿದಳು. ತುಸು ಹೊತ್ತಾಗಿರಬಹುದು. ತಂದೆ ಅವಳೆದುರಿಗೆ ನಿಂತಿರುವುದು ಗಮನಕ್ಕೆ ಬಂದು ಅವನ ಮಾತುಗಳು ಕಿವಿಯನ್ನು ಸೇರಿದವು......"ಕಾಣೆ ಎದ್ದು ನೇರವಾಗಿ ನಡೆದುಬಿಟ್ಟರು......ಮಾತನಾಡಲೇ ಇಲ್ಲ" ಅಂದಳು. "ಖಂಡಿತ ನೀನು ಏನೋ ಮಾತನಾಡಿರಬೇಕು. ಹತ್ತಾರು ದಿನದಿಂದ ಊಟವಿಲ್ಲವೆಂಬುದರ ಅರ್ಥದಲ್ಲಿ ಅದೇ ಅವನಿಗೆ ಯಾತನೆಯಾಗಿ ಹೊರಟುಹೋದ" ಅಂದನು ಅವಳ ತಂದೆ. ಅವಳಿಗೆ ಅಚ್ಚರಿ. ಇಲ್ಲದುದನ್ನೇ ತಾನು ಅನ್ನಿಸಿಕೊಂಡದು ಅದರಿಂದ ತುಸು ಮನಸ್ಸಿಗೆ ನೋವಾಯಿತು.

"ಹೋದರೇನೀಗ... ಉಪಯೋಗವಿರದವನು" ಅಂದಳು.

"ನಿನ್ನಿಂದ ಬಹು ಉಪಯೋಗ ಸರಸಿ ಅಲ್ಲವೇ...?" ಅವನ ಯೋಗ್ಯತೆ ನಿನಗೇನು ಗೊತ್ತು?"

"ಬಹು ಯೋಗ್ಯ... ಅದರಿಂದಲೇ "ವಾಣೀ ನೀನೊಲಿಯುವುದಾವಾಗ" ಅಂದು ಕಣ್ಣಿಟ್ಟು ನನ್ನ ನೋಡಿದುದು ...ಅವನ ನಗೆಯಲ್ಲಿ ಅದೆಂತ ಯಾಚನೆ. ಅಪ್ಪ!...ನೆನೆಸಿಕೊಂಡರೆ ಭಯವಾಗುವುದು" ಅಂದಳು ಮಗಳು. ಕಾವಲುಗಾರನಿಗೆ ಮನೆಯಲ್ಲಿ ನಡೆದ ವಿಷಯದ ಚಿತ್ರ ಕಾಣಿಸಿಕೊಂಡಿತು. ಅವನಿಗೊಂದು ಯೋಚನೆಯಾಯಿತು. ಅದನ್ನೇ ಯೋಚಿಸುತ್ತ ಒಳಕ್ಕೆ ಬಂದನು. ಸರಸ್ವತಿ...ನಿಂತಿದ್ದಳು...

"ಸರಸೀ"

"ಆ"

"ಅವನ ಮಾತಿನ ಅರ್ಥ ಬೇರೆ"

"ಯಾವ ಬಗೆಯದು?"

"ಎಲ್ಲರಂತೆ ಅವನಲ್ಲ"

"ನಿಜ...ಹುಚ್ಚ"

"ನೀನು ಹುಚ್ಚಿ"

"ಅವನಿಗೆ ಒಲಿಯದಿದ್ದುದಕ್ಕೆ"

"ಅದೇ ನಮಗೆ ಅರ್ಥವಾಗದ ಅವನ ಮಾತಿನ ಭಾಗ."

"ಯೌವ್ವನದ ಆಶೆ ಯಾರಿಗೆ ಅರ್ಥವಾಗುವುದಿಲ್ಲ."

"ಹಾಗಾದರೆ...ಅವನ ಆಶೆಯ ಗುರಿಯೇ ನೀನೆ?"

"ನಿಜ ... ಅದರಿಂದಲೇ ನಲಿಸಿದ ಉನ್ಮಾದ...ಮನೆಸೇರಿದ...ಆದರೆ ನಿನ್ನ ನೋಡಿ ಅವನಿಗೆ ಭಯವಿರಬೇಕು... ಇಲ್ಲಿಂದ ದೂರ ಸರಿದ...ಬೇಕಾದಡೆ ನೋಡು ಈ ಊರೇ ಬಿಟ್ಟುಹೋಗಿರುವನು."

"ಆ!"

"ಖಂಡಿತ."

ಮಾತನಾಡುತ್ತಿದ್ದಂತೆಯೇ ಕೆಲಸಗಳಾಗುತ್ತಿದ್ದವು...ಮಾತನಾಡುತ್ತಲೇ ಇದ್ದನು. ಕೈಕಾಲು ತೊಳೆದುಕೊಂಡುದುದಾಗಿತ್ತು...ಊಟಕ್ಕೆ ಕುಳಿತುದೂ

"COLD KILL" (REGD.)

The latest unrivalled and unfailing alopathic remedy to cure colds. Daily use prevents colds and other Respiratory diseases.

Annas Twele Only.

THREE POSTAGE FREE.

SAMPLE AS. FOUR

"COLD-KILL" HOUSE'

UDIPI, (India)

ಆಗಿತ್ತು. ಊಟಮಾಡುತ್ತಲೂ ಇದ್ದನು. ಸರಸ್ವತಿ ಬೇಕಾದುದನ್ನು ಕೇಳುತ್ತಲೂ ಇದ್ದಳು–ಬಡಿಸುತ್ತಲೂ ಇದ್ದಳು, ಮಾತನಾಡುತ್ತಲೂ ಇದ್ದಳು, ತಾನೂ ಊಟಮಾಡುತ್ತಿದ್ದಳು.

"ಅಗೊ...ಮತ್ತೆ ಬಂದ ಹುಚ್ಚ" ಅಂದು ಹುಡುಗರು ಸುತ್ತ ಸೇರಿದರು. ಅದೇ ಹಳೆಯ ದೇವಾಲಯದ ಬಳಿ.

"ಎತ್ತ ಹೋಗಿದ್ದೆ ಈ ಹತ್ತಾರು ದಿನ" ಒಬ್ಬನೆಂದ...ಯಾರ ಮಾತಿಗೂ ಅವನು ಮರುಮಾತನಾಡದೇ ಕುಳಿತಿದ್ದು ಮತ್ತೆ ತನ್ನ ತಾವನ್ನು ಬದಲಿಸುತ್ತ ಹೋದನು.

ನಾಲ್ಕಾರು ದಿನ ಕೊಳದ ಬಳಿ ಹೋಗಲಿಲ್ಲ. ಕಾವಲುಗಾರನಿಗೆ ಮಗಳ ಮಾತಿನಲ್ಲಿ ನಂಬಿಕೆ ಬಂದಿತ್ತು. ಅದನ್ನೇ ಯೋಚನೆ ಮಾಡುತ್ತಾ ಹೊಗೆ ಬತ್ತಿ ಸೇದುತ್ತ ಕುಳಿತಿದ್ದನು, ನೀರಿನಲ್ಲಿ ಆಗಲೇ ಕಾಲನ್ನು ಇಳಿಯಬಿಟ್ಟು ಕುಳಿತಿದ್ದನು. ಹುಚ್ಚ ನೀರನ್ನು ಕೈಯಿಂದ ಬಡೆಯುತ್ತಿದ್ದಾಗ ಕಾವಲುಗಾರನಿಗೆ ಕಾಣಿಸಿಕೊಂಡನು. ಅವನಿಗೆ ಅಚ್ಚರಿ "ಏಯ್" ಅಂದು ಅವಸರದಿಂದ ಅವನ ಬಳಿಗೆ ಬಂದು ಅವನನ್ನು ಎಬ್ಬಿಸಿಕೊಂಡು ಮೇಲಕ್ಕೆ ಬಂದು, ಒಂದೆಡೆ ಕುಳಿತುಕೊಂಡನು. ಯಾರೆಂದುಕೊಂಡು "ನನ್ನ ಸರಸಿಯನ್ನು ಮಾತಾಡಿಸಿದೆ"?

"ಗೆಳೆಯನೆಂದು ...... ಅವಳನ್ನು ಗೆಳತಿ ಎಂದೂ"

"ಎಷ್ಟು ದಿನದ ಹಂಚಿಕೆ ಇದು"

"ಹುಟ್ಟಿದಂದಿನಿಂದ ಇರಬಹುದ; ಆದರೂ ನನಗೆ ತಿಳುವಳಿಕೆ ಬಂದಂದು ಮೊದಲಾಯಿತು; ಆಗಿನಿಂದಲೂ ದಾರಿ ಕಾಣದೆ ಇದ್ದೆ".

"ಏಯ್ ಯಾರ ಕೂಡೆ ಮಾತನಾಡುತ್ತಿರುವುದು ಅರಿವಿದೆಯೇ?"

"ಗೆಳೆಯ ಕೊಳದ ಕಾವಲುಗಾರ ಹಾಗೂ ವಾಣಿಗೂ ನನಗೂ ಅಡ್ಡಿಯಿರುವ ಗೋಡೆಯ ಕೂಡ"

ಒಂದೇಟು ಹುಚ್ಚನ ಕೆನ್ನೆಯನ್ನು ಕಂಡಿತು, ಕೊಳದಲ್ಲಿ ಪ್ರತಿಧ್ವನಿಯಾಯಿತು; ಮತ್ತೆರಡು ಹುಚ್ಚನ ಬೆನ್ನನ್ನು ಸೇರಿದವು. ಹುಚ್ಚ ಸುಮ್ಮನಿದ್ದು "ವಾಣೀ ನೀನು ಒಲಿಯುವವರಿವಿಗೂ ಹೀಗೆಂಯೇ......" ಅಂದನು ಮತ್ತೂ ಸಿಟ್ಟೇರಿತು "ಲೇ.........ಯಾರೋ ವಾಣಿ"

"ಸರಸ್ವತಿ"

"ನನ್ನ ಮಗಳೇ"

ಹುಚ್ಚ ನಕ್ಕನು...... ಗಹಗಹಿಸಿ ನಕ್ಕನು......"ನಿನ್ನ ಬುದ್ಧಿಗನುಸರಿಸಿಯೇ ನಿನಗೆ ಚಾಕರಿ ದೊರೆತಿದೆ...... ಎಂತಹ ಮಾತು......" ಕಾವಲುಗಾರನಿಗೆ ಏನೂ ತೋರಲಿಲ್ಲ. ಹುಚ್ಚನು ನಿಜವಾಗಿಯೂ ಹುಚ್ಚನಿರಬೇಕೆನಿಸಿತು ಅಲ್ಲಿಂದ ತುಸು ದೂರ ಸರಿದು ಕುಳಿತುಬಿಟ್ಟನು; ಇಬ್ಬರಿಗೂ ಬೇರೆ ಬೇರೆ ಕುಳಿತಿರಲು ಮನಸಾಯಿತು. ಅದರಂತೆ ಕುಳಿತಿದ್ದರು. ಹುಚ್ಚ ತನ್ನ ಪದ್ಧತಿ ಪ್ರಕಾರ ಸಂಜೆಯ ರಾಗವೆತ್ತಿ ಹಾಡಲು ಮೊದಲಾದನು. ...ಕಾವಲುಗಾರನಿಗೆ ಅದರಲ್ಲಿಯೇ ತನ್ನ ಮನಸ್ಸು ಸೇರಿ ಹೋಗುತ್ತಿರುವುದನ್ನು ಕಂಡು ಅಚ್ಚರಿ ಭಯವಾಯಿತು. ಹುಚ್ಚನು ಬಹುಶಃ ಮಂತ್ರವಾದಿ ಇರಬಹುದೆಂದು ತನ್ನ ಮಗಳನ್ನು ಮರೆಯಿಸಿ ಸಾಗಿಸಿಕೊಂಡು ಹೋಗಲೇ ಬಂದಿರುವನೆಂದು ನಂಬಿಕೆಯಾಯಿತು. ಅವನನ್ನು ಊರಿನಿಂದ ಓಡಿಸಿಯೇ ಬಿಡಬೇಕೆನಿಸಿತು. ಇಲ್ಲವೇ ಅವನಿಗೇನಾದರೂ ಅಪಾಯ ಮಾಡಬೇಕೆನಿಸಿತು. ಅವನು ಕುಳಿತು ಹಾಡುತ್ತಲೇ ಇದ್ದನು. ಕೆಲವು ಕಾಲದ ನಂತರ ಎದ್ದು ಹೋದನು; ಅವನ ಹಿಂದೆಯೇ ಕಾವಲುಗಾರನೂ ಹೋದನು. ನೇರವಾಗಿ ಮುರುಕು ದೇವಾಲಯದಲ್ಲಿ ಸೇರಿದರು! ವಿಗ್ರಹವು ಪೂಜೆಯನ್ನು ನಿತ್ಯವೂ ಕಾಣುತ್ತಿದ್ದರೂ ದೇಗುಲ ಹಳೆಯದು; ಶಿಥಿಲವಾಗಿದ್ದುದು ಸರಿ ಮಾಡಿರಲಿಲ್ಲ. ಸಣ್ಣ ದೀಪ ಒಂದು ಉರಿಯುತ್ತಿತ್ತು. ವಿಗ್ರಹದ ಮುಂದೆ ಮಂಡಿಯೂರಿ ಕುಳಿತು ಹುಚ್ಚನು ಕೈ ಜೋಡಿಸಿ- 'ನನಗೆಂದಿಗೆ ವಾಣಿಯನುಗ್ರಹವಾದೀತು, ದೇವಾ! ವಾಣಿ ಒಲಿಯುವುದೆಂದಿಗೆ' ಅಂದನು. ಇನ್ನೂ ಮಾತನಾಡುತ್ತಿದ್ದಿರಬಹುದು; ಕಾವಲುಗಾರನಿಗೆ ತಡೆಯಲಾಗಲಿಲ್ಲ. ಕೈಲಿದ್ದ ದೊಣ್ಣೆಯನ್ನು ಎತ್ತಿ ಹುಚ್ಚನ ಲಿತ ಬುರುಡೆಯ ಮೇಲೆ ಬಡೆದನು. ಹುಚ್ಚನು ಕೆಳಕ್ಕೆ ಬಿದ್ದನು, ಕಾವಲುಗಾರ ಕತ್ತಲಲ್ಲಿ ಮರೆಯಾದನು.

"ಯಾರದು?"

"ನನಗೆ ತಿಳಿಯದು ಸ್ವಾಮಿ!"

"ಹುಚ್ಚ......ಹುಚ್ಚ......ಊರಲ್ಲೆಲ್ಲ ತಿರುಗುತ್ತಿದ್ದ......ದೇವಸ್ಥಾನದಲ್ಲಿ ಮಲಗುತ್ತಿದ್ದ......ಅವನೆ....."

"ತಲೆ ಒಡೆಯುವಂತೆ ಹೊಡೆದವರು?"

"ತಿಳಿಯದು"

ಅರ್ಚಕರಿಗೆ ಮೈನಡುಗಿತು. ತಮ್ಮ ಮೇಲೆ ಎಲ್ಲ ತಪ್ಪು ಬರುವುದೋ ಎಂದು. ಆದರೆ ಅವರ ಸಂಗಡ ಪೂಜೆಯ ವೇಳೆಯಲ್ಲಿ ಜನರಿದ್ದುದರಿಂದಲೂ ಪೂಜೆ ಮುಗಿಸಿಕೊಂಡು ಹೋಗುವಾಗ ಯಾರೂ ಇರದಿದ್ದುದರಿಂದಲೂ ಬೆಳಗಿನ ದಿನ ಪೂಜೆಗೆ ಹೋಗುವಾಗ ಸಂಗಡ ಜನರಿದ್ದುದರಿಂದಲೂ ಅವರಿಗೆ ಧೈರ್ಯ ಬಂದಿತ್ತು......

ಅರಿಯದೇ ಅಪಮೃತ್ಯುವಿಗೆ ತುತ್ತಾದ ಆ ಉನ್ಮಾದನ ದೇಹವನ್ನು ಸಾಗಿಸಿದರು. ದೇವಾಲಯವೆಲ್ಲವನ್ನೂ ಶೋಧಿ

ಸಿದುವಾಯಿತು. ಅವನ ಸಾಮಾನುಗಳೇನಾದರೂ ಇರುವುದೋ ಎಂದು...... ಒಂದು ಮೂಲೆಯಲ್ಲಿ ಕಲ್ಲುಸಂದಿನಲ್ಲಿ ಒಂದು ಸಣ್ಣ ಗಂಟೊಂದು ಸಿಕ್ಕಿತು... ಊರಿನ ಹುಡುಗರು ಅದನ್ನು ಹುಚ್ಚ ಇಟ್ಟುಕೊಂಡಿದ್ದನೆಂದು ಹೇಳಿದರು... ಅದೆಲ್ಲವನ್ನೂ ಬಿಚ್ಚಿನೋಡಲು ತೆಗೆದುಕೊಂಡು ಹೋದರು...ಹಾವಳಿ ಮಾಡದ ಹುಚ್ಚನಿಗಾಗಿ ಹುಡುಗರೆಲ್ಲರೂ ಮರುಗಿದರು......ಅವನ ಸುದ್ದಿ ಎಲ್ಲರೂ ಒಂದೊಂದು ರೀತಿ ಮಾತನಾಡತೊಡಗಿದರು......ಯಾರಿಗೂ ಅವನು ಹುಚ್ಚನಲ್ಲವೆನ್ನುವಂತೆ ಕಾಣತೊಡಗಿತು.

ಅವನ ಹಾಡುಗಳು ಕೆಲವರನ್ನು ಅಂಟಿಕೊಂಡಿತ್ತು. ಅವನ ಮಾತುಕತೆಗಳು ಕದ್ದುಕೇಳಿದವರನ್ನ ಅಂಟಿಕೊಂಡಿತ್ತು. ಅವನ ಸವಿಮಾತುಗಳು ಕೆಲವರನ್ನು ಮಂಕುಮಾಡಿತ್ತು. ಅವನ ಮಾತಿನ ಅರ್ಥ ತಿಳಿಯದೇ ಅವನನ್ನು ಹುಚ್ಚನೆಂದುಕೊಂಡವರಿಗೆ ತುಸು ಅನುತಾಪವಾಯಿತು. ಅವನನ್ನು ಮಾತನಾಡಿಸಿದ್ದವರಿಗೆ ಅವನಲ್ಲಿ ಮರುಕಬಂದು ಸಾಯಬಾರದಿತ್ತು ಅಂದುಕೊಂಡರು. ......ಅವನು ಇದ್ದ ಹತ್ತಾರು ದಿನಗಳಲ್ಲಿ ಮಾಡಿದ ಕೆಲಸದ ಗುರುತುಗಳಿದ್ದವು. ಅದನ್ನು ಕಂಡವಳು ಕಾವಲುಗಾರನ ಮಗಳು. ಉಗ್ರಾಣದ ಬಳಿ ಬಂದು—ಒಂದು ಗೂಡಿನಲ್ಲಿ ಜೋಡಿಸಿದ್ದ ಕಾಗದದ ಕಟ್ಟನ್ನು ತೆಗೆದುಕೊಂಡು ಬಂದಳು.

ಬಗೆಬಗೆಯ ಕವಿತೆಗಳು, ಕತೆಗಳು ...ಎಲ್ಲವೂ ಅರ್ಥ, ಬರೆದವು. ತುಸು ಬರೆದವು—ಬರೆಯಲು ಹವಣಿಸಿದ್ದವುಗಳು. ಎಲ್ಲವನ್ನೂ ನೋಡಲು ನಡುಮನೆಯಲ್ಲಿ ಕಾಗದಗಳನ್ನು ಹರವಿಕೊಂಡು ಕುಳಿತಳು......ಕವಿತೆಗಳು—ಬಗೆಬಗೆಯವು......ಹಾಳೆ ನೊಗಚಿ ಹಾಕುತ್ತ ಹೋದಳು—ಒಂದು ಅವಳ ಮನಸೆಳೆಯಿತು......ಅದನ್ನು ಹಾಗೆಯೇ ಕಣ್ಮುಂದೆ ಹಿಡಿದುಕೊಂಡಳು... ಓದಲು ಅದೆಷ್ಟೋ ಹರುಷವಾಯಿತು. ತನ್ನನ್ನೂ ಮೆಚ್ಚಲು ಒಬ್ಬ ಬರುವವನಿರುವನೆಂದುಕೊಂಡಳಲ್ಲ ಒಂದು ಕತೆ ......ಒಂದೇ ಹಾಳೆ ಇತ್ತು......ಓದಿ ಮನನೊಂದಳು......ಇದ್ದ ಹಾಳೆಗಳೆಲ್ಲವನ್ನೂ ತಿರುವಿಹಾಕಿ ಕೆದರಿದಳು. ಒಂದು ಲಕ್ಕೋಟೆ. ಅದನ್ನು ತೆಗೆದಳು-ಅದರಲ್ಲಿಯ ಪತ್ರದೊಂದಿಗೆ ಚಿಕ್ಕ ಭಾವಚಿತ್ರ ಒಂದಿತ್ತು ಅದನ್ನು ನೋಡಿದಳು. ಅದಾರದೋ ತಿಳಿಯದಾಯಿತು. ಪತ್ರ ಬಿಚ್ಚಿದಳು. ಯಾರಿಗೆ ಯಾರು ಬರೆದಿದ್ದುದೆಂಬುದು ತಿಳಿಯುವಂತಿರಲಿಲ್ಲ. ಒಟ್ಟಿನಲ್ಲಿ ಅದು ಹೆಂಗುಸೊಬ್ಬಳನ್ನು ಸಂಬೋಧಿಸಿ ಬರೆದುದೆಂದು ಹೇಳಬಹುದಿತ್ತು. ಅದನ್ನು ಹಾಗೆಯೇ ಹಿಡಿದಿದ್ದಳು. ಅವಳಿಗೆ ಹಿಂದೆ ತಂದೆ ಬಂದು ನಿಂತಿರುವುದು ತಿಳಿಯದು. ಅವನೂ ಅವಳ ಕೈಲಿದ್ದ ಕಾಗದವನ್ನು ಓದತೊಡಗಿದನು.

“ಪ್ರಿಯತಮೆ ರಮಾ,

ಬಹು ಬೇಗೆಯಿಂದಲೇ, ನಿನ್ನ ಯೋಜನೆಯಿಂದಲೇ ನಾಲ್ಕಾರು ಊರು ಸುತ್ತಿದುದಾಯಿತು. ಏನಾದರೂ ಬೇಗೆ ಹರಿಯಲಿಲ್ಲ. ನೀನು ಬರುವಿ ಎಂದು ಕಾದು ಕುಳಿತಿದ್ದ ದಿನಗಳೆಷ್ಟೋ ಆಯಿತು. ನಾನು ಕುಳಿತೇ ಮುಗಿಯಬೇಕೆಂದು ನಿನ್ನ ಬಯಕೆಯಾಗಿದೆ. ಇರಲಿ, ವಾಣಿಯು ಸಂಪೂರ್ಣ ಒಲಿದು ನನ್ನ ಮನೋಬಯಕೆ ತೀರಿಸುವ ದಿನ ಬರುವುದಿದೆ...ಸಾವು ಬಂದರೂ ವಾಣಿ ಕೈಬಿಡುವುದಿಲ್ಲ. ಒಲಿದೇ ಒಲಿಯುವಳು. ನಿನ್ನ ಸುದ್ದಿ ತಿಳಿಯದೇ ಇದೆ...ಪತ್ರ ಅಲ್ಲಿಗೆ ಮುಗಿದಿತ್ತು. ಹಾಳೆ ಹರಿದಿದ್ದುದರಿಂದ ಇಬ್ಬರಿಗೂ “ಆ ವಾಣಿ ಒಲಿಯುವುದು'' ಅರ್ಥವಾಗಲಿಲ್ಲ. ಆಗಲೂ ಅವರಿಬ್ಬರಿಗೆ ಹುಚ್ಚನ ಹೃದಯ ಪರಿಚಯವಾಗಲಿಲ್ಲ. ತಂದೆ ಬಂದುದು ತಿಳಿಯಿತು. “ನೋಡಿದೆಯೋ” ಅಂದಳು ಮಗಳು ಅದನ್ನು ಕೇಳಿ ತಂದೆ. “ನಾವು ಹುಚ್ಚರಿರಬೇಕು” ಅಂದನು

“ಕಾರಣ?”

“ಅವನ ಮಾತು ನಮಗೆ ಅರ್ಥವಾಗುತ್ತಿಲ್ಲ.”

ಯಾರಿಗೋ ಕಾಗದ ಬರೆದು ಅದನ್ನು ತಿಳುಹದೇ ಇಲ್ಲದುದು ಅದು ಬಹುಶಃ ಭಾವಚಿತ್ರದಲ್ಲಿದ್ದ ಹೆಂಗುಸಿಗೇ ಇರಬಹುದೆಂದು ಸರಸ್ವತಿಯ ತೀರ್ಮಾನವಾಗಿತ್ತು. ಅವಳು ಹುಚ್ಚನೊಂದಿಗೆ ಬಗಬಗೆಯಾಗಿ ಚರ್ಚೆಮಾಡಿದ್ದರೂ ಅವಳಿಗೆ ಅವನ ಆ ಮಾತು ಬಗೆಹರಿಯದ ಚಿಂತೆ ತಂದಿತ್ತು. ಅವನಾರೆ ಏನಿದ್ದಿರಬಹುದೆಂದು ತಿಳಿಯಲೇಬೇಕೆಂದುಕೊಂಡಳು. ಹುಡುಕುತ್ತ ಕುಳಿತಳು. ಭಾವಚಿತ್ರದ ಹೆಂಗುಸಿನ ವಿಳಾಸವೇನಾದರೂ ಸಿಕ್ಕಬಹುದೆಂದು ತಂದೆಗೆ ತನ್ನ ಕೆಲಸವೆಲ್ಲ ಪತ್ತೆಯಾಗುವುದೋ ಅನ್ನುವ ಭಯವಿದ್ದರೂ ನಂಬಿಕೆ ಇತ್ತು ತಾನು ಸಿಕ್ಕುವುದಿಲ್ಲವೆಂದು......ಮಗಳನ್ನು ಅವಳ ಕೆಲಸದಲ್ಲಿಯೇ ಬಿಟ್ಟು ತನ್ನ ಪಾಡಿಗೆ ತಾನು ಹೊರಟುಹೋದನು.

ಊರಿನವರಿಗೆ ಸಿಕ್ಕಿದ ಗಂಟಿನಲ್ಲಿ ಹುಚ್ಚನು ಬರೆದಿದ್ದುದೆಲ್ಲವೂ ಇತ್ತು. ಕಥೆ ಕವಿತೆಗಳಲ್ಲದೆ ಮತ್ತಾವುದೂ ಇರಲಿಲ್ಲ. ಹುಚ್ಚ ಬರವಣಿಗನೆಂದು ಕಂಡುಕೊಂಡರು. ಕಥೆಗಳನ್ನೇ ಓದದಿದ್ದ ಆ ಊರಿನವರು-ಅಂದಿನಿಂದ ಕಥೆ ಓದುವುದನ್ನು ಪಾಠಮಾಡಿಕೊಂಡರು. ಅವನು ಸತ್ತುಹೋದುದು ಯಾರಿಗೂ ಮರೆಯ

(೧೫ನೇ ಪುಟ ನೋಡಿರಿ)

# ವಾರದ ಭವಿಷ್ಯ

ತಾರೀಕು ೧೦-೯-೧೯೪೦ರಿಂದ — ೧೬-೯-೧೯೪೦ರ ವರೆಗೆ.

ಜ್ಯೋತಿಷ್ಕರು:-
ಬಾಲಭಾಸ್ಕರರು.

## ಮೇಷ:

ಕಷ್ಟಕ್ಕೆ ತಕ್ಕ ಫಲಪ್ರಾಪ್ತಿಯಿದ್ದರೂ ಮನಸ್ಸಿಗೆ ನೆಮ್ಮದಿಯಿಲ್ಲವು, ದೇಹಕ್ಕೆ ಸುಖವಿಲ್ಲವು. ಶತ್ರು ಪೀಡಾನಿವೃತ್ತಿಯ ಸಲುವಾಗಿಯೂ ದೈಹಿಕಾಲಸ್ಯದ ನಿವಾರಣೆಗಾಗಿಯೂ ಆದಾಯದ ಬಹುಭಾಗವು ವೆಚ್ಚವಾಗುವದು. ಗೃಹ ಸಂಪತ್ತಿಯು ಸಾಕಷ್ಟು ಸಮೀಚೀನವಾಗಿರುವುದಾದರೂ ಪುತ್ರವಿಷಯಕವಾದ ಚಿಂತೆಯು ಪ್ರಾಪ್ತವಾಗಲಿದೆ. ರಾಜಕೀಯ ಮತ್ತು ಸಾಮಾಜಿಕ ವ್ಯವಹಾರಗಳಲ್ಲಿ ವಿಘ್ನಗಳೇ ಅಧಿಕವಾಗಲಿವೆ. ಪ್ರಿಯ ಜನರ ವಿಯೋಗದಿಂದ ದುಃಖವೂ ಅವಿವೇಕದಿಂದ ಅಸ್ಥೈರ್ಯವೂ ಅಧಿಕವಾಗುವುದು. ತಾ.12, 13, 14, 15, 16 ಈ 5 ದಿನಗಳಲ್ಲಿ ಇಷ್ಟ ಸಿದ್ಧಿಯಿಂದಾಗಿ ಮನಸ್ಸಿಗೆ ಸುಖವಿದೆ. ಬರುವ ವಾರಕೊಂಚ ಉತ್ತಮವಾಗಬಹುದು.

## ವೃಷಭ:

ಸದಾ ದುಃಖಾಬ್ಧಿಯಲ್ಲಿ ಮುಳುಗಿರತಕ್ಕ ನಿಮಗೆ ವಾರಾದಿಯ ನಾಲ್ಕು ದಿನಗಳು ಬಹಳ ಕಷ್ಟದಾಯಕಗಳಾಗಲಿವೆ. ಕುಟುಂಬದಲ್ಲಿ ಕಲಹವು ದಿನೇ ದಿನೇ ಹೆಚ್ಚುವುದು. ದೇಹದಲ್ಲಿ ಅನಾರೋಗ್ಯವೂ ಕೂಡಾ ಅಧಿಕವಾಗಲಿದೆ. ವಿರೋಧಿಗಳ ಉಪಟಳದಿಂದ ಯಾವೊಂದು ಕಾರ್ಯವೂ ಕಿಂಚಿತ್ತೂ ಮುಂದರಿವ ಸಂಜ್ಞೆಗಳಿಲ್ಲವು. ಸಂಗಾತಿಗಳೇ ನಂಬಿಸಿ ದ್ರೋಹ ಮಾಡುವರು. ಆರ್ಥಿಕ ದುಃಸ್ಥಿತಿಯು ಬಹುವಾಗಿ ಪೀಡಿಸುವುದರಿಂದ ಅನರ್ಥ ಶತಗಳೇ ನಿಮ್ಮನ್ನು ಸುತ್ತಲಿಂದಲೂ ಮುತ್ತುತ್ತಲಿವೆ. ಈ ರೀತಿ ಮನೋರೋಗದಿಂದಾವೃತರಾದ ನಿಮಗೆ ತಾ. 14, 15, 16ರಲ್ಲಿ ಕೊಂಚ ಸಮಾಧಾನ ತೋರೀತು. ಮುಂದಿನ ವಾರದಲ್ಲೂ ಸುಧಾರಣೆ ಕಾಣದು.

## ಮಿಥುನ:

ಸಕಲಗ್ರಹರ ಸಹಾನುಭೂತಿಯಿಂದ ಕೂಡಿರತಕ್ಕ ನಿಮಗೆ ರಾಹು ಕೇತುಗಳ ವಕ್ರದೃಷ್ಟಿಯಿಂದ ಕಲಹವೂ ತನ್ಮೂಲಕ ಮಾನಹಾನಿಯೂ ಪ್ರಾಪ್ತವಾಗುವಂತಿದ್ದರೂ ಸುವಿಚಾರಿಗಳಿಗದು ಬಾಧಿಸಲಾರದು. ಸರ್ವತ್ರ ಸ್ಥಾನಮಾನಗಳ ಯೋಗವೂ ಧನಲಾಭದ ಪ್ರಸಂಗವೂ ಕಂಡುಬರುವುದು. ನೌಕರಿ ಉದ್ಯೋಗ ವ್ಯಾಪಾರಾದಿ ಸಕಲ ವೃತ್ತಿಯಲ್ಲೂ ಇಷ್ಟ ಸಿದ್ಧಿಯು ಅನಾಯಾಸದಿಂದ ಲಭಿಸಲಿದೆ. ವಿಶೇಷತಃ ಲೇಖಕರಿಗೂ ಸೇವಕ ಜನರಿಗೂ ಅತ್ಯಂತ ಹಿತಾವಹವಾದುದೀವಾರವು. ತಾ. 10, 11 ಅತ್ಯುತ್ತಮ. ಮೇಲಿನ ವಾರ ಸ್ವಲ್ಪ ಮಟ್ಟಿನ ಅವನತಿ ಕಂಡು ಬಂದೀತು.


ವಿದ್ಯೆದ ತಾದಿ

ಹಳ್ಳಿಯ ಟೊಳ್ಳು ಜೀವನವನ್ನು ಮನಸ್ಸಿಗೆ ನಾಟುವಂತೆ ಚಿತ್ರಿಸಿದ

ತುಳು ನಾಟಕ

ಬೆಲೆ: ೦-೬-೦

ತುಳುನಾಡ್ ಪ್ರೆಸ್
ಉಡುಪಿ.


## ಕರ್ಕಾಟಕ:

ಮನಸ್ಸಾಕ್ಷಿಗೆ ವಿರೋಧವಾಗಿ ವರ್ತಿಸಿ ಜನರ ಅನಾದರ ಅವಹೇಳನಗಳಿಗೆ ಗುರಿಯಾಗುವಿರಿ. ಮಾತ್ರವಲ್ಲದೆ ರಾಜಕೀಯದಲ್ಲಿ ಅಪರಾಧಿಗಳಾಗಿಯೂ ಪರಿಗಣಿಸಲ್ಪಡಲಿರುವಿರಿ. ಯಾವ ಭಾಗದಲ್ಲೂ ಆಯವು ಕಾಣದಿದ್ದರೂ ಬಹುಮುಖದ ಖರ್ಚುಗಳು ನಿಮ್ಮನ್ನು ನಾನಾ ರೀತಿಯಿಂದ ಪೀಡಿಸುವುದರಿಂದ ಹೆಚ್ಚಿನ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗುವಿರಿ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ವಿದ್ಯೋಪಜೀವಿಗಳಿಗೂ, ವೈದ್ಯ, ಲೇಖಕ, ಕಿಂಕರ ವರ್ಗದವರಿಗೂ ಇಷ್ಟಾಧಿಕ ಪ್ರಾಪ್ತಿಯಿದೆ. ತಾ. 10ರಿಂದ 13ರ ವರೆಗಿನ ದಿನಗಳು ವ್ಯಾಪಾರೀ ವೃತ್ತಿಯವರಿಗೆ ಕಿಂಚಿದಾದಾಯಕರವಿರುವುದು. ಬರುವ ವಾರ ಸ್ವಲ್ಪಮಟ್ಟಿಗೆ ಸುಧಾರಣೆ ಹೊಂದುವಿರಿ.

## ಸಿಂಹ:

ವಿರೋಧಿಗಳೂ ದುರ್ಜನರೂ ಹಲವು ವಿಧಾನಗಳಿಂದ ನಿಮಗೆ ಹಾನಿಯನ್ನುಂಟುಮಾಡಲು ಹವಣಿಸಿದರೂ ಸುಹೃದ್ವರ್ಗದ ಬಲದಿಂದಲೂ ಸಜ್ಜನರ ಸಹಕಾರದಿಂದಲೂ ನೀವು ಈ ಆಪತ್ತುಗಳಿಗೆ ಗುರಿಯಾಗದೆ ಸುಖದಿಂದ ಪಾರುಗಾಣುವಿರಿ. ದೈವಾನುಗ್ರಹವು ತಕ್ಕಮಟ್ಟಿಗಿ

ರುವುದರಿಂದ ಉದ್ಯೋಗದಲ್ಲಿ ಸಾಕಷ್ಟು ಫಲಪ್ರಾಪ್ತಿಯೂ ನಿತ್ಯ ಖರ್ಚಿಗೆ ಬೇಕಾದ ಒಡವೆ ವಸ್ತುಗಳೂ ಹೆಚ್ಚಿನ ಆಯಾಸವಿಲ್ಲದೇನೇ ದೊರೆಯುವವು. ಆದರೂ ಆರೋಗ್ಯ ವಿಚಾರದಲ್ಲಿ ಜಾಗರೂಕರಾಗಿರುವುದು ಒಳ್ಳಿತು. ಮಾತ್ರವಲ್ಲ, ಮಿತಭಾಷಿಗಳಾಗಿರುವುದೂ ಶ್ರೇಯಸ್ಕರ. ತಾ. 12ರಿಂದ ವಾರಾಂತ್ಯದ ವರೆಗಿನ ದಿನಗಳು ಇಷ್ಟಸಾಧಕಗಳಾಗಿವೆ. ಮೇಲಿನ ವಾರವೂ ಮಿಶ್ರಫಲದಾಯಿಯಾಗಿದೆ.

## ಕನ್ಯಾ:—

ಗುರು ಹಿರಿಯರಿಂದಲೂ ಆಪ್ತ ಜನರಿಂದಲೂ ವಿಧಿಯಿಂದಲೂ ಬಹಿರ್ಮುಖರಾಗಿರತಕ್ಕ ನಿಮಗೆ ಈ ವಾರದಲ್ಲಿ ಬಹುಮುಖದಿಂದ ಅನಿಷ್ಟಪರಂಪರೆಗಳು ಪ್ರಾಪ್ತವಾಗುವಂತಿದ್ದರೂ ಸ್ವಸ್ವವರ್ಣೋಚಿತ ಕರ್ಮಾನುಸಾರಿಗಳಾದ ಸಜ್ಜನ ವೃಂದಕ್ಕೆ ಕೆಲವಂಶ ಇಷ್ಟಸಿದ್ಧಿಯಾಗಲಿದೆ. ರಾಜಕೀಯ ರಂಗದಲ್ಲೂ ವ್ಯಾಪಾರ ವ್ಯವಹಾರಗಳಲ್ಲೂ ಪರಿಶ್ರಮವು ಸಾರ್ಥಕವಾದೀತು. ವಿನಾ ಕಾರಣದಿಂದ ಸ್ತ್ರೀಯರೊಡನೆ ಕಲಹವಾಗಲಿದೆ. ನೇತ್ರರೋಗವೂ ಪಿತ್ಥ ವಿಕಾರದಿಂದ ಅನಾರೋಗ್ಯವೂ ಹೆಚ್ಚೀತು. ಸಾಂಸಾರಿಕ ಚಿಂತೆ ಪ್ರವಾಸಗಳು ಹೆಚ್ಚುವುದರಿಂದ ಈಷತ್ತೂ ಮನಸ್ಸಿಗೆ ಶಾಂತಿಯಿರದು. ತಾ. 10ರಿಂದ 13ರ ವರೆಗಿನ ದಿನಗಳು ಬಹಳ ಕಷ್ಟಕಾರಿಗಳಾಗಿವೆ. ಮುಂದಿನ ವಾರವೂ ಇದೇ ರೀತಿ ನಿಲ್ಲಲಿದೆ.

## ತುಲಾ:—

ಮಾತು ಬಲ್ಲವನಿಗೆ ಜಗಳವಿಲ್ಲವೆಂಬ ಲೋಕೋಕ್ತಿಯಿದ್ದರೂ ಸದ್ಯದ ಪರಿಸ್ಥಿತಿಯಿಂದ ನಿಮಗದು ಸುಳ್ಳೆಂದು ತೋರಬಹುದು. ಕಾರಣ ವ್ಯವಹಾರ ಕುಶಲರೂ ವಾಕ್ಚತುರರೂ ಆಗಿರತಕ್ಕ ನಿಮಗೀವಾರದಲ್ಲಿ ಮಿತಭಾಷಿಗಳಾಗಿದ್ದರೂ ಕಲಹಾವಮಾನಗಳು ಅನಿವಾರ್ಯವಾಗಿವೆ. ಆರೋಗ್ಯವು ತೃಪ್ತಿಕರವಿದ್ದರೂ ಅನಿರೀಕ್ಷಿತ ಅನಿಷ್ಟಗಳು ಒದಗಲಿವೆ. ರಾಜಕೀಯ ಸಾಮಾಜಿಕ ಭಾಗಗಳಲ್ಲಿ ಇಷ್ಟದಂತೆ ಫಲಪ್ರಾಪ್ತಿಯಾಗಲಿದೆ. ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾಗಲಿರುವಿರಿ. ಗೃಹ ತಾಪತ್ರಯಗಳು ಬಹುತೇಕ ನಿವೃತ್ತಿಯಾಗಲಿವೆ. ತಾ. **10, 11** ಈ ಎರಡು ದಿನಗಳು ಅನುಕೂಲಗಳಾಗಿವೆ; ಬರುವ ವಾರ ಕೊಂಚ ಅನಾನುಕೂಲತೆಗಳು ಹೆಚ್ಚಲಿವೆ ದುರ್ಜನವೃಂದಕ್ಕೆ.

## ವೃಶ್ಚಿಕ:—

ಪ್ರಕೃತದ ಗ್ರಹಮಾನವು ಹೆಚ್ಚಿನಂಶ ನಿಮಗೆ ಹಿತಾವಹವಾಗಿರುವುದು. ಅತಏವ ಬೇಕೆಂದೇ ನಿಮ್ಮ ಮೇಲೆ ವೈರವನ್ನು ಸಾಧಿಸಿ ಉಪದ್ರವಿಸತಕ್ಕವರನ್ನು ನೀವು ಮರ್ದಿಸಲು ಶಕ್ತರಿರುವಿರಿ. ಸಾಹಸೋದ್ಯಮಿಗಳಾದ ನಿಮಗೆ ಕೈಗೊಂಡ ಕಾರ್ಯಗಳಲ್ಲಿ ಧನಲಾಭವೂ ಕೀರ್ತಿಯೂ ಸಿಗಲಿದೆ. ವೈದ್ಯ ವಿದ್ಯಾಜೀವಿಗಳಿಗೂ ವ್ಯಾಪಾರಿಗಳಿಗೂ ಸೇವಕ ಜನವೃಂದಕ್ಕೂ ದಿನವು ಕ್ಷಣದಂತೆ ಕಳೆದು ಹೋಗಲಿದೆ. ಮಿತ್ರ ವರ್ಗದವರಿಂದ ಮಾನ ಸನ್ಮಾನಗಳು ದೊರೆಯಲಿವೆ. ಇಷ್ಟೆಲ್ಲಾ ಅನುಕೂಲತೆಗಳಿದ್ದರೂ ಮಾನಸಿಕ ಚಿಂತೆಯೊಂದು ನಿಮ್ಮನ್ನು ಸದಾ ಕೊರೆಯುತ್ತಿರುವುದು. ತಾ. **12, 13** ಸರ್ವಾನುಕೂಲ. ಮುಂದಿನ ವಾರವೂ ತೃಪ್ತಿಕರವಿದೆ.

## ಧನು:—

ಸೌಮ್ಯ ಗ್ರಹರ ಕೃಪಾಕಟಾಕ್ಷವು ನಿಮ್ಮ ಮೇಲೆ ಪೂರ್ಣವಾಗಿರುವುದರಿಂದ ಅನಿಷ್ಟಗ್ರಹರಿಂದುಂಟಾಗತಕ್ಕ ಆಪತ್ತುಗಳು ಹೆಚ್ಚಿನಂಶ ಸೂಕ್ಷ್ಮರೂಪಕ್ಕೆ ಬರಲಿವೆ. ಮಾತ್ರವಲ್ಲ ಬರತಕ್ಕ ಆಪತ್ತುಗಳನ್ನೂ ಧೈರ್ಯದಿಂದ


**50 ವರ್ಷಗಳಿಂದ ಜಗತ್ಪ್ರಸಿದ್ಧ ಶಕ್ತಿವರ್ಧಕ:—**

# ಮದನಮಂಜರಿ

ಈ ಮಾತ್ರೆಗಳು ಬಲಹೀನತೆ, ಮಲಬದ್ಧತೆ, ಸ್ವಪ್ನ ಸ್ಖಲನ, ಧಾತುವಿಕಾರ ಮೊದಲಾದುವುಗಳನ್ನು ಕ್ಷಿಪ್ರದಲ್ಲಿಯೇ ಪರಿಹರಿಸಿ, ರಕ್ತ ಮತ್ತು ವೀರ್ಯವನ್ನು ಧಾರಾಳವಾಗಿ ವೃದ್ಧಿಗೊಳಿಸಿ, ದೇಹಕ್ಕೆ ನೂತನ ಶಕ್ತಿ, ಸ್ಫೂರ್ತಿ ಆನಂದ, ಉತ್ಸಾಹಗಳನ್ನು ಉಂಟುಮಾಡುವವು

**ಡಬ್ಬಿ 1ರ ಕ್ರಯ: ರೂ. 1.**

# ರಮಣವಿಲಾಸಿನಿ ವಟಿಕ

ಕಾಮಶಕ್ತಿ ಹೆಚ್ಚಿ ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ನಿಶ್ಚಿತ ಮತ್ತು ನಿರಪಾಯಕರ ಔಷಧಿ.

**ಡಬ್ಬಿ 1ರ ಕ್ರಯ: ರೂ. 1**

**ಮದನಮಂಜರಿ ಫಾರ್ಮಸಿ, 184 ಚೈನಾ ಬಜಾರ್, ಮದ್ರಾಸು.**

**ಬೆಂಗಳೂರು:—ಆರ್ಯನ್ ಮೆಡಿಕಲ್ ಸ್ಟೋರ್ಸ್, 72 ಚಿಕ್ಕಪೇಟೆ**

**ಮೈಸೂರು ಏಜೆಂಟರು: ಟಿ ಸಿ. ನಟರಾಜಾ & ಕೊ.**

ಎದೆಗೊಟ್ಟು ಎದುರಿಸಲೂ ಸಾಕಷ್ಟು ಶಕ್ತರಾಗುವಿರಿ. ಕೈಯ್ಯಲ್ಲಿ ಕಾಸಿಲ್ಲದಿರುವುದರಿಂದಲೂ ಮನೋವ್ಯಥೆಯಿಂದಲೂ ನೀವು ಅರ್ಧಕ್ಕರ್ಧ ಕುಗ್ಗಿರುವಿರಿ. ಆದರೂ ಸದ್ಯ ನಿಮ್ಮ ಮಿತ್ರರೂ ಆಪ್ತರೂ ನಿಮ್ಮನ್ನು ಕೈಬಿಡಲಾರರು. ಗೃಹಕಲಹಗಳು ನಿವೃತ್ತಿಹೊಂದಿ ಪರಸ್ಪರ ಐಕಮತ್ಯವುಂಟಾದೀತು. ಧರ್ಮಕ್ರಿಯಾಸಕ್ತರಾದ ನಿಮಗೆ ತಾ. 10, 11, 14, 15, 16 ಈ ದಿನಗಳಲ್ಲಿ ಧನಜಯ, ಸ್ತ್ರೀಸುಖಗಳು ದೊರೆಯಲಿವೆ. ಮೇಲಿನ ವಾರವಿನ್ನೂ ಉತ್ತಮವಾದೀತು.

## ಮಕರ:—

ಕಳೆದ ಒಂದೆರಡು ವಾರಗಳಲ್ಲಿ ನಿಮ್ಮ ಜೀವನಸಂಗ್ರಾಮದಲ್ಲಿ ಕಿಂಚಿದಾಶಾಂಕುರವು ತಲೆದೋರಿರುವುದಾದರೂ ಅದೀಗ ಮಾಯವಾಗಿ ಗಾಢಾಂಧಕಾರವೇ ಸುತ್ತಲೂ ಆವರಿಸಿಕೊಂಡಂತೆ ಕಾಣಿಸುತ್ತಿದೆ. ನಂಟರಿಷ್ಟರೂ ಬಂಧುಬಳಗವೂ ಹೆಚ್ಚೇಕೆ ನಿಮ್ಮ ಪತ್ನೀಪುತ್ರರೂ ನಿಮ್ಮ ಭಾಗಕ್ಕೆ ಇದ್ದರೂ ಇಲ್ಲದಂತೆಯೇ ಎಂದರೂ ತಪ್ಪಾಗದು. ದೇಹಾಲಸ್ಯವೂ ಶತ್ರುವೃಂದವೂ ನಿರುದ್ಯೋಗವೂ ಆರ್ಥಿಕ ಅಡಚಣೆಯೂ ದಿನೇ ದಿನೇ ವೃದ್ಧಿಯನ್ನೈದುತ್ತಿರುವುದರಿಂದ ಕಾಲಯಾಪನೆಯು ಅತೀ ನಷ್ಟಕರವಾಗಿ ಪರಿಣಮಿಸಲಿದೆ. ತಾ. 12, 13 ಈ ಎರಡು ದಿನಗಳಲ್ಲಿ ಊಟೋಪಚಾರಗಳಿಗೆ ಕಡಿಮೆಯಾಗದು. ಬರುವ ವಾರವೂ ಸದ್ಯದಂತೆಯೇ.

## ಕುಂಭ:—

ಹಿಡಿದ ಕಾರ್ಯಕ್ಕೆ ನಾನಾ ತರದ ತೊಂದರೆಗಳು ಬಂದರೂ ಅವನ್ನು ಲೆಕ್ಕಿಸದೆ ನಿಮ್ಮ ಶಕ್ತಿಮೀರಿ ಸಾಧಿಸುವಿರಿ. ನಿಮ್ಮ ದುಡಿತಕ್ಕೆ ಸರಿಯಾದ ಫಲವು ಸಿಕ್ಕಿಯೇ ಸಿಗಲಿದೆ. ಆದರೂ ಮಾನಸಿಕ ಶ್ರಮಕ್ಕಿಂತಲೂ ದೈಹಿಕ ಶ್ರಮವೇ ಹೆಚ್ಚಾಗಲಿದೆ. ಆರೋಗ್ಯವು ಕೆಡಲಿರುವುದರಿಂದ ಆಹಾರದಲ್ಲಿ ಬಹಳ ಜಾಗರೂಕರಾಗಿರಿ. ಗಂಡಹೆಂಡಿರ ಜಗಳ ನಿತ್ಯವೂ ತಪ್ಪುವಂತಿಲ್ಲ. ಆಕಸ್ಮಿಕ ಪ್ರವಾಸದಿಂದ ವ್ಯರ್ಥ ಧನವ್ಯಯವಾಗಲಿದೆ. ಶ್ರಮಜೀವಿಗಳಿಗೆ ತಾ. 10, 11, 14, 15, 16 ಇವಿಷ್ಟು ತೃಪ್ತಿಕರವಾದ ಫಲವನ್ನು ಕೊಡಲಿವೆ. ಮೇಲಿನ ವಾರ ಇಂದಿಗಿಂತ ಕೀಳಾಗದು.

## ಮೀನ.—

ವಿದ್ಯಾಭಿಲಾಷಿಗಳಿಗೂ ಸೇವಾವೃತ್ತಿಯವರಿಗೂ ಈ ವಾರವು ಹಿತಕರವಾಗಿಲ್ಲವು. ದೈಹಿಕ ಆಲಸ್ಯ ಮತ್ತು ವ್ಯರ್ಥ ಕಲಹಗಳಿಂದ ಮನಸ್ಸಿಗೆ ನೆಮ್ಮದಿಯಿರದಾದರೂ ಬಂಧುಮಿತ್ರರ ಸಹಕಾರವೂ ಜನತೆಯ ಬೆಂಬಲವೂ ತುಂಬಾ ಇರುವುದರಿಂದ ಯಾವ ಉದ್ಯಮದಲ್ಲೂ ಕೂಡ ನೀವು ಹತಾಶರಾಗಲಾರಿರಿ. ಶತ್ರುಜನರೂ ಮಿತ್ರರಾಗಿ ಪರಿಣಮಿಸುವ ಈ ಕಾಲದಲ್ಲಿ ಆರ್ಥಿಕ ಭಾಗವು ಸುಧಾರಣೆ ಹೊಂದಲಿದೆ. ರಾಜಕೀಯ ಸಾಮಾಜಿಕ ಕಾರ್ಯಗಳಲ್ಲಿ ಸಾಹಸಪ್ರಿಯರಿಗೆ ಇಷ್ಟದಂತೆ ಫಲಪ್ರಾಪ್ತಿಯಾಗಲಿದೆ. ತಾ. 10ರಿಂದ 13ರ ವರೆಗಿನ ದಿನಗಳಲ್ಲಿ ಸುಖದಿಂದ ಕಾಲಯಾಪನೆ ಮಾಡುವಿರಿ. ಬರುವ ವಾರ ಕೊಂಚ ಅನಾನುಕೂಲತೆಗಳು ಹೆಚ್ಚಲಿವೆ.

## ತುಸು ವಿನೋದ

ಹುಡುಗ:—ತಿನ್ನಲು ಸ್ವಲ್ಪ ಒತ್ತರಡು ಬೇಕಾಗಿದೆ.

ತಾಯಿ:—ಅದೇಕೆ?

ಹುಡುಗ:-ವಾಸಿ ನುಂಗಿರುತ್ತೇನೆ.

೦ ೦ ೦

ಶಿಕ್ಷಕ:—ಈ ಕಿಟಕಿಯ ಕಾಜನ್ನು ಇಂದು ಮುಂಜಾನೆ ಒಡೆದಿರುವಿಯೆಂದು ಗೊತ್ತಾಗಿದೆ. ಅಹುದೇನು?

ವಿದ್ಯಾರ್ಥಿ:—ಅದು ನಿಜವಲ್ಲ.

ಶಿಕ್ಷಕ:—ಆಣೆಮಾಡಿ ಹೇಳುವಿಯಾ?

ವಿದ್ಯಾರ್ಥಿ:-ಮುಂಜಾನೆ ಒಡೆದಿಲ್ಲ. ನಿನ್ನೆ ಒಡೆದಿರುವೆನು ಎಂದು ಹೇಳಲು ಸಿದ್ಧನಿದ್ದೇನೆ.

೦ ೦ ೦

'ಇದು ಇಂಥವರದೇ ಕಾಲರ ಎಂದು ಅಗಸರು ಪತ್ತೆಹಿಡಿಯುವದು ಹೇಗೆ?

'ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಪ್ರತಿಯೊಬ್ಬರ ಒಂದೊಂದು ಕಾಲರ ಅವರ ಹತ್ತಿರ ದಾಖಲೆಗಾಗಿ ಇದ್ದೇ ಇರುತ್ತದೆ.'


### ಆತಂಕ ನಿಗ್ರಹ ಮಾತ್ರೆಗಳು

**ಗುಣಕಾರಿ:**—ಧಾತು ಸಂಬಂಧ ತೊಂದರೆಗಳಿಗೆ, ನರಗಳ ದುರ್ಬಲತೆ, ಅಜೀರ್ಣ, ಮೆದುಳು ವಿಕಾರ, ನಪುಂಸಕತ್ವ, ಇತ್ಯಾದಿ.

**ವೃದ್ಧಿಕಾರಿ:**—ರಕ್ತಶುದ್ಧಿಗೆ, ಧಾತು ಪುಷ್ಟಿಗೆ, ಜ್ಞಾಪಕಶಕ್ತಿಗೆ, ನರಗಳ ಶಕ್ತಿಗೆ, ಸ್ತಂಭನ ಶಕ್ತಿಗೆ ಇತ್ಯಾದಿ.

ಆತಂಕನಿಗ್ರಹ ಮಾತ್ರೆಗಳು ತೆಗೆದುಕೊಳ್ಳಲು ಬಹು ಸುಲಭ. ಸಂವತ್ಸರದ ಎಲ್ಲಾ ಋತುಗಳಲ್ಲಿಯೂ ತೆಗೆದುಕೊಳ್ಳಬಹುದು. ಪಥ್ಯದ ನಿರ್ಬಂಧವಿಲ್ಲ.

**ಇಷ್ಟಾದರೂ ಸಂಪೂರ್ಣ:**—ಹದಿನಾರು ದಿವಸಗಳ ಔಷಧಿಯ ಬೆಲೆ ಒಂದೇ ಒಂದು ರೂಪಾಯಿ.

**ಆತಂಕ ನಿಗ್ರಹ ಫಾರ್ಮಸಿ,**

ಹೆಡ್ಡಾಫೀಸ್: ಚಾಮನಗರ.

ಬ್ರಾಂಚ್ ಆಫೀಸ್ A 64, ಚಿಕ್ಕಪೇಟೆ, ಬೆಂಗಳೂರು ಸಿಟಿ.

# ರೇಡಿಯಂಟ್ ಕಾಂಪಿಟೇಷನ್ ನಂ. ೫೦.


## (GOLDEN JUBILEE NUMBER.)

ನಮ್ಮ ಸ್ಪರ್ಧೆಯ ಸುವರ್ಣ ಮಹೋತ್ಸವ ಸಲುವಾಗಿಯೂ ಮತ್ತು ಶ್ರೀಮಾನ್ ಜಯಚಾಮ ರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವ ಪ್ರಯುಕ್ತವೂ ಹೆಚ್ಚಿಗೆ ಬಹುಮಾನಗಳು.

**ಪ್ರಥಮ ಬಹುಮಾನ ರೂ. 350 ]** **[ ಇತರ ಬಹುಮಾನ ರೂ. 150**

**ಒಟ್ಟು ರೂಪಾಯಿ 500/-**

**ನಿಭಂಧನೆಗಳು:**—ಪ್ರತಿ ಕೂಪನ್ನಿಗೂ 8 ಆಣೆಗಳು ಮಾತ್ರ; ಒಬ್ಬರೇ ಒಟ್ಟಿಗೆ ಎರಡು ಕೂಪನ್ನು ಕಳುಹಿಸುವವರು ಮತ್ತು ಎರಡು ಕೂಪನ್ನುಗಳನ್ನು ಪ್ರತ್ಯೇಕ ಕಳುಹಿಸಬಹುದು ಆದರೆ ಪ್ರತಿಯೊಂದು 4 ಕೂಪನ್ನುಗಳ ಒಂದು ಸೆಟ್ಟಿಗೆ ರೂ. 1—0—0. ಹೀಗೆ ಎಷ್ಟು ಸೆಟ್ಟುಗಳನ್ನಾದರೂ ಕಳುಹಿಸಬಹುದು. ೨. ಮನಿಯಾರ್ಡರು ಯಾ ಪೋಸ್ಟಲ್ ಆರ್ಡರ್ ನಂಬರುಗಳನ್ನು ಕೂಪನ್ನಿನ ಮೇಲೆ ಬರೆಯಬೇಕು. ೩. ಸ್ಫುಟವಾಗಿ ಚಿತ್ತಿಲ್ಲದೆ ಶಾಯಿಯಲ್ಲಿ ಭರ್ತಿಮಾಡಬೇಕು. ಉತ್ತರಗಳನ್ನು ಬೇರೆ ಕಾಗದದ ಮೇಲೆ ಈ ಕೂಪನನ್ನು ಕಾಪಿಮಾಡಿ ಕಳುಹಿಸಲೂ ಬಹುದು. ಕವರಿಗೆ ನಿರ್ದಿಷ್ಟವಾದ ಅಂಚೆ ಚೀಟಿಯನ್ನು ಹಚ್ಚದೇ ಬಂದರೆ ನಿಗಾಕೊಡುವುದಿಲ್ಲ. ನಿಮ್ಮ ಎಂಟ್ರಿ ಕವರಿನ ಹಿಂಭಾಗದಲ್ಲಿ ಹೆಸರು, ವಿಳಾಸ, ಒಟ್ಟು ಕೂಪನ್ನು ನಂಬರು ಇವುಗಳನ್ನೆಲ್ಲಾ ಬರೆಯಬೇಕು. ಈ ಸಮಸ್ಯೆಯ ಸರಿಯಾದ ಉತ್ತರವು ಮೊಹರು ಮಾಡಿಟ್ಟಿದೆ. ಈ ಉತ್ತರಕ್ಕೆ ಪ್ರತಿ ಅಕ್ಷರಶಃ ಸರಿ ಹೋಲುವ ಉತ್ತರಕ್ಕೆ ಮೊದಲನೆ ಬಹುಮಾನ ೪. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಹೆಚ್ಚಾಗಿದ್ದಲ್ಲಿ ಬಹುಮಾನವು ಕಂಪೆನಿಯವರ ತೀರ್ಪಿನಂತೆ ಹಂಚಲ್ಪಡುವುದು. ೫. ತೊಡಕಿನಲ್ಲಿ (ಗಂಟಿನಲ್ಲಿ) ಒಂದಕ್ಷರವು ಎರಡು ಮತ್ತು ಅನೇಕ ಪದಗಳನ್ನು ತಪ್ಪು ಮಾಡಿದರೆ ಅಷ್ಟೂ ತಪ್ಪೆಂದು ಗಣಿಸಲ್ಪಡುವುದು. ೬. ಸಮಸ್ಯೆಯ ವಿಷಯದಲ್ಲಿ ಕಂ. ಯವರ ತೀರ್ಪೇ ಕಡೆಯದು ಮತ್ತೆ ಪತ್ರವ್ಯವಹಾರಕ್ಕೆ ಅವಕಾಶವೇ ಇಲ್ಲ. ೭. ಒಂದು ಸಮಸ್ಯೆಗೆ ಕಳುಹಿಸಿದ ಮೊಬಲಗನ್ನು ಬೇರೆ ಸಮಸ್ಯೆಗೆ ಬದಲಾಯಿಸಲಾಗದು ಅಥವಾ ಮೊಬಲಗನ್ನು ವಾಪಾಸುಮಾಡಲಾಗದು. ೮. ಪೂರ್ತಿಯಾಗಿ ಮಾಡದೇ ಬಂದ ಉತ್ತರಗಳನ್ನು ನಿರಾಕರಿಸಲ್ಪಡುತ್ತೆ. ಈ ಸಮಸ್ಯೆಗಳಲ್ಲಿ ಭಾಗವಹಿಸುವವರು ಮೇಲಿನ ನಿಯಮಗಳಿಗೆ ಒಳಪಟ್ಟಿರುವವರು ಮಾತ್ರ ಉತ್ತರಗಳನ್ನು ಕಳುಹಿಸಬಹುದು. ೯. ಉತ್ತರಗಳು ತಲಪಬೇಕಾದ ಕಡೇ ದಿನ 18ನೇ ಸೆಪ್ಟಂಬರ್ 1940. ಸರಿಯಾದ ಉತ್ತರ ತಾಯಿನಾಡುವಿನಲ್ಲಿ ಪ್ರಕಟಿಸುವ ದಿನ 20ನೇ ಸೆಪ್ಟಂಬರ್ 1940.




50

ಹೆಸರು..............................

ವಿಳಾಸ..............................

..............................

ಕೂಪನ್ .............. ಪೋ. ನಂ. ____________

### ಕುರುಹುಗಳು

**ಎಡರಿಂದ ಬಲಕ್ಕೆ**—1. ನಮ್ಮ ಸ್ಪರ್ಧೆಯ ಈ ಮಹೋತ್ಸವವನ್ನು ಸ್ಪರ್ಧಾಭಿಮಾನಿಗಳಿಗೆ ಹೆಚ್ಚಿನ ಬಹುಮಾನ ರೂಪದಲ್ಲಿ ನೆರವೇರಿಸುವೆವು. 3. ಮೈಸೂರಿನ ಪ್ರತಿಯೊಬ್ಬ ವ್ಯಕ್ತಿಯೂ ಈ ಮಹೋತ್ಸವದಿಂದ ಆನಂದಪರವಶರಾಗುವರು. 6. ಲಾರಿಯವನು ಇದನ್ನು ನೋಡಿ ಬಾಡಿಗೆ ಕೇಳುವನು. 8. ಸೇರು, ಹೊರಡು. 10. ಆಯುರ್ವೇದದ ಇದರಿಂದ ನವವೀರ್ಯವನ್ನು ಹೊಂದಬಹುದು. 14 ಕವನ ಮಾಡುವವ. 16. ಹೀಗಿರುವ ಬಟ್ಟೆಯನ್ನು ಬಹಳ ಜನರು ಉಪಯೋಗಿಸುವರು. 18. ತೋರ್ಪಡಿಸುವಿಕೆ. 22. ಈಶ್ವರ. 25. ಹಿಂದು ಮುಂದಾದ ಶತ್ರು. 26. ಅಪರಿಚಿತರ ಇದು ಪವಕುರಾಜನನ್ನು ಅಡ್ಡ ದಾರಿಗೆ ತರಬಲ್ಲದು. 27. ಕಳ್ಳನಿಗೆ ಇದು ಹಾಕಲಿಕ್ಕೆ ಗೊತ್ತಿಲ್ಲವೇ?

**ಮೇಲಿನಿಂದ ಕೆಳಕ್ಕೆ**—1. ತಾಯಿಯು ಇಂತಹವನನ್ನು ಹೆರಲಿಕ್ಕೆ ಹವಣಿಸುವುದು ಸಹಜ. 2. ಸುಂದರ ಇದು ಮನುಷ್ಯನ ಆಕರ್ಷಣೆಗೆ ಕಾರಣ. 3. ಇತರರ 4. ಒಡಕು, ವ್ಯತ್ಯಾಸ 5. ಮನುಷ್ಯನಿಗೆ ಇದು ಇಲ್ಲದ ಮೇಲೆ ನಿಜವಾಗಿಯೂ ಅವನು ಮನುಜನಲ್ಲ. 7. ಪ್ರಪಂಚವು ಭಗವಂತನ ಇದೆಂದು ಹೇಳುವರು. 9. ಷೋಕಿದಾರ. 11. ಮಿಶ್ರಿತ "ಸಾಗುವಳಿ" 12. ಹೆಂಗಸಿನ ಇದು ಕವಿಯ ವರ್ಣನೆಗೆ ಪಾತ್ರ. 13. ಇತ್ತೀಚೆಗೆ ಕನ್ನಡ ವೃತ್ತ ಪತ್ರಿಕೆಗಳ ಇದು ಜಾಸ್ತಿ. 15. ಸುಖ ದುಃಖಗಳಿಗೆ ಇದು ಕಾರಣ. 17. ಇದು ಕೈ ಆಗದೆ ಮೊಸರು ಬರಲಿಕ್ಕಿಲ್ಲ. 18 ನಾಟಕಕ್ಕೆ ಇದು ಅವಶ್ಯಕ. 19. ಪಟೂಟ್ಟು ಕಾರಣ. 20. ಬೆಲೆಬಾಳುವ ಪದಾರ್ಥಗಳನ್ನು ಕಾಪಾಡಲಿಕ್ಕೆ ಇದನ್ನು ಉಪಯೋಗಿಸುವರು. 21. ಸರಿಯಾದ ಇದು ಇಲ್ಲದೆ ತರುಣರು ತಮ್ಮ ಜೀವವನ್ನೇ ನಾಶಗೊಳಿಸುವರು. 23. ಅಧಿಕಾರಿಯು ಇದನ್ನು ಅರಿತು ನೌಕರರು ಕೆಲಸಮಾಡುವುದುತ್ತಮ. 24. ರತ್ನ.

ಉತ್ತರಗಳು ತಲಪಬೇಕಾದ ವಿಳಾಸ—**ರೇಡಿಯಂಟ್ ಕಾಂಪಿಟೇಷನ್ ನಂ. ೫೦ ಕೆಂಪ್‌ರಾಂಜಿ ಅಂಡ್ ಕೋ., ನಂ ೧೫೪, ಕಬ್ಬನ್ ಪೇಟೆ ಮೇನ್ ರೋಡ್ ಬೆಂಗಳೂರು ಸಿಟಿ.**

ಮೈಸೂರಿನವರು: ನಂ. 426, ನೂರಡಿ ರಸ್ತೆ (ಹೆಚ್ ವೆಂಕಟರಾಮಯ್ಯ ಅಂಡ್ ಸನ್ಸ್ ಪಕ್ಕ) ರವರಲ್ಲಿ ಕೂಪನ ಗಳನ್ನು ಕೊಟ್ಟು ರಶೀದಿ ಪಡೆಯಬಹುದು.

# ಧರ್ಮದ ಹೆಸರಲ್ಲಿ ಕೊಲೆ! ★

# ★ ಪ್ರಾಣಕ್ಕಿಲ್ಲ ಬೆಲೆ!

> "ನಿನ್ನ ಪಾದದ ಬಳಿ ಸ್ವರ್ಗವಿದೆ; ಬೇಕಾದರೆ ಸ್ವೀಕರಿಸು. ಇಲ್ಲವಾದರೆ ತಿರಸ್ಕರಿಸು"
> "ಹೌದು, ಅಜ್ಜ ಇದ್ದಾನೆ"
> "ಅವನೂ ಅವನ ಪರಿವಾರ . ."
> "ಅವರು ಕಾಫರರಲ್ಲವೇ ?"
> "ಆದ್ರೇನಂತೆ"
> "ಅವರನ್ನು ಈ ಲೋಕದ ವ್ಯಾಪಾರದಿಂದ ಮುಕ್ತರನ್ನಾಗಿ ಮಾಡು".

ಮನೆಯ ಒಂದು ಭಾಗದಲ್ಲಿ ಒಬ್ಬ ದನಕಾಯುವವನಿದ್ದಾನೆ. ಎಲ್ಲರೂ ಅವನನ್ನು ಅಜ್ಜ ಎಂದು ಕರೆಯುತ್ತಾರೆ. ಅದೇ ಮನೆಯ ಮತ್ತೊಂದು ಭಾಗದಲ್ಲಿ ಒಬ್ಬ ಮುಸಲ್ಮಾನ್ ಯುವಕನಿದ್ದಾನೆ. ಅವನ ವಯಸ್ಸು ಸುಮಾರು 25 ವರ್ಷವಿರಬಹುದು. ಅವನ ಹೆಸರು ರಹೀಂ ಇವೆರಡು ಮನೆಗಳ ಮಧ್ಯದಲ್ಲಿ ಒಳಗೆ ಒಂದು ಬಾಗಿಲಿದ್ದು, ಎರಡು ಮನೆಯವರೂ ಅದರ ಮೂಲಕ ಹೋಗಿಬರುವಂತಿದೆ. ಎರಡು ಮನೆಯವರೂ ಸಪರಿವಾರರು. ಮಧ್ಯಾಹ್ನದ ವೇಳೆ ಅಜ್ಜನು ರಹೀಂನ ಮನೆಗೆ ಬಂದು ನಿದ್ರಿಸುವನು-ಅಲ್ಲಿ ರಹೀಂ ಇರಲಿ, ಇಲ್ಲದಿರಲಿ, ಏಕೆಂದರಲ್ಲಿ ಅಲ್ಲಿ ಗಾಳಿಯು ತಣ್ಣಗಿರುತ್ತದೆ. ಒಂದು ದಿನ ಆ ರೀತಿ ಮಲಗಿರುವಾಗ ರಹೀಮನು ಬಾಗಿಲಿನಿಂದ ಒಳಗೆ ಬಂದು ಈ ರೀತಿ ಹೇಳಿದನು.

**ರಹೀಂ— ಅಜ್ಜ! ಅಜ್ಜ!**

**ಅಜ್ಜ— ಏನಮ್ಮಾ!**

**ರಹೀಂ— ತಿಳಿದಿರುವೆಯಾ?**

ಅಜ್ಜ— ಏನದು?

ರಹೀಂ— ಊರಲ್ಲೆಲ್ಲಾ ಹೊಡೆದಾಟ!

ಅಜ್ಜ— ಹೊಡೆದಾಟ! ಯಾತಕ್ಕಾಗಿ?

ರಹೀಂ— ಅದೇನೋ ದೇವರಿಗೇ ಗೊತ್ತು. ಹಿಂದುಗಳು ಮುಸಲ್ಮಾನರನ್ನೂ, ಮುಸಲ್ಮಾನರು ಹಿಂದುಗಳನ್ನೂ ಹೊಡೆಯುತ್ತಿದ್ದಾರೆ.

ಅಜ್ಜ— ಹಾಗಾದರೆ ಇನ್ನೇನು?

ರಹೀಂ— ಏನಂದಜ್ಜ?

ಅಜ್ಜ— ಏನೂ ಇಲ್ಲ. ಆಗಲೇ ಬೇಕಾಗಿತ್ತಂದೆ

ರಹೀಂ— ಈ ಸಾರ್ವತ್ರಿಕ ಕೊಲೆಯೇ?

ಅಜ್ಜ— ಹೌದು, ಏಕಾಗಬಾರದು?

ರ— ನನಗೇನೂ ತಿಳಿಯುವುದೇ ಇಲ್ಲವಲ್ಲ

ಅಜ್ಜ— ಒಳ್ಳೇದೇ ಆಯಿತು. ಹೋಗು ಮಲಗು. ನನಗೂ ನಿನಗೂ ಅದರಿಂದಾಗಬೇಕಾದುದಾದರೂ ಏನು?

ರಹೀಂ— ಒಳ್ಳೇದೆ ಹೇಳ್ದೆ. ನಿನ್ನ ಕಣ್ಣಿಂದ ನೋಡಬೇಕಾಗಿತ್ತು. ಆಗ ತಿಳೀತಿತ್ತು ಮಲಗಿಕೊಳ್ಳುವುದು. ಓ! ಅಜ್ಜ! ಎಳೆಮಕ್ಕಳು, ಸ್ತ್ರೀಯರು, ಮುದುಕರು...

ಅಜ್ಜ— ಅಂದ್ರೆ ನನ್ನೇನ್ಮಾಡೂತೀಯಾ? ತಲೆ ಜಜ್ಜಿಕೊಳ್ಳಲೇ?

ರಹೀಂ— ಅಲ್ಲಜ್ಜ! ತಿಳಿಕೋ ಅಂದೆ

ಅಜ್ಜ— ಹೋಗು, ಅವರನ್ನೇ ಕೇಳಿಬಾ ಏಕೆ ಹಾಗೆ ಮಾಡ್ತಾರೇ ಅಂತ!

ರಹೀಂ— ಒಂದು ಕಡೆ ಆ ಧಾರ್ಮಿಕ ಆವೇಶವೆಲ್ಲಿ? ಇನ್ನೊಂದು ಕಡೆ ಒಂದೇ ಸಾರಿ ಆ ಹೆಂಗಸಿನ ಮೇಲೆ 10 ಲಾಠಿಗಳಲ್ಲಿ?

ಅ— ನಿನಗೂ ಆ ಧಾರ್ಮಿಕ ಆವೇಶವುಂಟಾಗಿತ್ತೋ

ರ— ಓಹೋ! ಅವರ ಆ "ಅಲ್ಲಾಹು ಅಕ್ಬರ್" ಎಂಬ ಕೂಗನ್ನು ಕೇಳಿ ಆವೇಶದಿಂದಿರದಿರಲು ಸಾಧ್ಯವೇ?

ಅ— ಹಾಗಾದರೆ ನೀನು ಆ ಸ್ತ್ರೀಗೆ ಒಂದೆರಡು ಏಟು ಹಾಕಿ, ಪುಣ್ಯವನ್ನೇಕೆ ಸಂಪಾದಿಸಲಿಲ್ಲ?

ರ— ಸಾಕು, ಅದನ್ನೇ ಹೇಳಬೇಡ, ನನ್ನ ಮೈನಡುಗುತ್ತಿದೆಯಜ್ಜ!

ಅ— ಇದು ನಿನ್ನ ದೌರ್ಬಲ್ಯ ಅಂತ ಕಾಣುತ್ತೆ ('ರಹೀಂ ರಹೀಂ' ಎಂದು ಹೊರಗಡೆ ಶಬ್ದ)

ರ— ಯಾರದು, ಅಹಮದ್, ಒಳಗೆ ಬಾರಣ್ಣ

ಅ— ಒಳ್ಳೇದು ನಾನು ಹೋಗಿ ಮಲಗುವೆನು (ಹೋಗುವರು)

ರ— ಏನು ಅಹಮದ್ ಭಾಯಿ, ಏನು ಸಮಾಚಾರ?

ಅಹಮದ್— ಏನ್ನಮಾಚಾರವೇ ಹಿಂದುಗಳು ತಮ್ಮ ಬೀದಿಯ ಮುಸ್ಲಿಮರನ್ನು ನಿರ್ನಾಮಮಾಡುತ್ತಿದ್ದಾರೆ.

ರ— ಮುಸಲ್ಮಾನರ ಬೀದಿಯಲ್ಲಿ ಸಹ ಅದೇ ರೀತಿ ಇರಬಹುದು.

ಅಹ— ಅಲ್ಲಾನ ದಯದಿಂದ ನಾವಂತೂ ಕಾಫರರನ್ನು ಹಿಡಿದು, ಹಿಡಿದು ಹೊಡೆದೆವಪ್ಪ!

ರ— ಆದರೆ

ಅಹ— ನಾನೊಬ್ಬನೇ ಸಾಕು 4-5 ನೂರು ಜನರಿಗೆ ಇವತ್ತಿನ ಹೋರಾಟದಲ್ಲಿ ನನ್ನ ಜೀವನಪರ್ಯಂತ ನನಗೆ ಸಂಪಾದನೆಯಾಗುವಷ್ಟು ಭಯ ಹುಟ್ಟಿಸಿ ಬಂದಿದ್ದೇನಯ್ಯ

ರ— ಆದರೆ......ಅಲ್ಲಾ.......

ಏನೂ ತಿಳಿಯೋದೇ ಇಲ್ಲವಲ್ಲ

ಅಹ— ಏನದು, ದೇವರು......

ರಹೀಂ— ಹೌದು ಅಲ್ಲಾನಿಗೆ ಇದರಿಂದ ಸಂತೋಷವೇ....?

ಅಹ— ಏನು, ಕಾಫರರ ನಾಶದಿಂದ ಅಲ್ಲಾನಿಗೆ ಸಂತೋಷವಲ್ಲವೇ? ಲಾಹಾ ಲವಲಖೂ ವೃತ!

ರಹೀಂ— ನನಗೇನೂ ತಿಳಿಯದೇ ನಿನ್ನನ್ನು ಕೇಳಿದ್ದು ಆದರೆ

ಅಹ— ಏನಾದರೆ?

ರಹೀಂ — ಕ್ಷಮಿಸು, ನನಗೆ ಇಸ್ಲಾಮಿನಲ್ಲಿ ಪೂರ್ತಿ ವಿಶ್ವಾಸವಿದೆ. ಆದರೆ ಹೃದಯವು ಹೆದರುತ್ತಿದೆ.

ಅಹ—ನಿನ್ನ ಹೃದಯದ ದೌರ್ಬಲ್ಯ. ನೋಡುವನಾದರೂ ಮಾಡಲು ಇದಕ್ಕಿಂತ ಬೇರೆ ಸಮಯ ದೊರೆಯಲಾರದು.

ರಹೀಂ —ಏನು?

ಅಹ - ನಾನು ಹೇಳಿದಂತೆ ಮಾಡುವಿಯಾ?

ರಹೀಂ—ಸ್ವಲ್ಪ ಹೇಳು ನೋಡೋಣ.

ಅಹ—ನಿನ್ನ ಪಾದದ ಬಳಿ ಸ್ವರ್ಗವಿದೆ. ಬೇಕಾದರೆ ಸ್ವೀಕರಿಸು. ಇಲ್ಲವಾದರೆ ತಿರಸ್ಕರಿಸು.

ರಹೀಂ—ಹೌದು, ಹೇಳು.

ಅಹ—ನಿನ್ನ ಪಕ್ಕದಲ್ಲೇ......

ರಹೀಂ—ಹೌದು ಅಜ್ಜ ಇದ್ದಾನೆ.

ಅಹ - ಅವನೂ ಅವನ ಪರಿವಾರ

ರಹೀಂ—ಅಂದರೆ.

ಅ—ಏನಂದ್ರೆ ಮತ್ತೇನ? ಅವರು ಕಾಫರರಲ್ಲವೆ?

ರ—ಆದ್ರೇನಂತೆ?

ಅಹ—ಅಯ್ಯೋ ಬೆಪ್ಪೆ? ಇನ್ನೂ ತಿಳಿಯಲಿಲ್ಲವೇ

ರಹೀಂ—ಏನದು?

ಅಹ—ಅವರನ್ನೂ ಈ ಲೋಕದ ವ್ಯಾಪಾರದಿಂದ ಮುಕ್ತರನ್ನಾಗಿ ಮಾಡಿ........ಇನ್ನೂ ತಿಳಿಯಲಿಲ್ಲವೇ?

ರಹೀಂ—ಏನು? ಅವರ ಪ್ರಾಣ ತೆಗೆದು?

ಅಹ—ಯಾಕೆ, ಹೆದರುವಿಯೇಕೆ ಅವರು ಕಾಫರರು.

ರಹೀಂ—ಆದರೇನಂತೆ?

ಅಹ—ಎಲ್ಲರನ್ನೂ........

ರಹೀಂ—ಆ ಹುಡುಗಿ, ತಂಗಿ ರತ್ನಾ, ತಮ್ಮ ರಾಮು?

ಅಹ—ಆ ಹುಡುಗಿ ಬೇಡ-ಆಹಾ ಅದೆಷ್ಟು ಚೆನ್ನಾಗಿದೆ.

ರಹೀಂ—ಅದು ನನ್ನನ್ನೂ ಬಿಡುವುದಿಲ್ಲ. ಅಜ್ಜನನ್ನು ಬಿಟ್ಟಿರಲಾರಳು.

ಅಹ—ಅಲ್ಲ, ಇದೇ ಊರಿನಲ್ಲೇ ಇರಲಿ.

ರಹೀಂ—ಏನನ್ನುವೆ? ಓಹೋ ನನಗೆ ತಿಳಿತಿರುಗುತ್ತಿದೆ.

ಅಹ—ಇನ್ನೇನೂ ಮಾಡಬೇಕ ನೀನು. ನನ್ನ ಕಡೆಯುವರಿಗೆ ನಿನ್ನ ಮನೆಯ ಮೂಲಕ ಹೋಗಲು ಅವಕಾಶ ಕೊಡು ಅಷ್ಟೆ.

ರಹೀಂ—ದಾರಿ, ಅಜ್ಜನನ್ನೂ ಕೊಲ್ಲುವ ದಾರಿ?

ಅಹ—ನಿನ್ನ ಕೈಲಾಗದಿದ್ದರೆ, ಕಣ್ಣು ಮುಚ್ಚಿಕೊಂಡಿರು.

ರಹೀಂ—ಅಯ್ಯೋ, ಅಜ್ಜನನ್ನೂ ಕೊಲ್ಲುವೆಯಾ?

ಅಹ—ಎಲ್ಲಿ ಅಜ್ಜ ತೆಗೆ, ಧರ್ಮಕ್ಕಿಂತ ಹೆಚ್ಚೇ ಅವರು.

ರಹೀಂ—ಆಗಲಾರದು, ಕ್ಷಮಿಸು ಅಹಮದ್.

ಅಹ—ಹಾಗಾದರೆ ನೀನು ಮುಸಲ್ಮಾನನೇ ಅಲ್ಲ. ಕಾಫರರು ಮೊರೆಹೋಗಲವಕಾಶಕೊಡುವಿಯಾ?

ರಹೀಂ —ಕಾಫರನು ನಮ್ಮಜ್ಜ.

ಅಹ—ಹಾಗಾದರೆ ನೀನೂ ಸಿದ್ಧನಾಗು-ನಾನು ಸಿಳ್ಳು ಹಾಕುವೆನು.

(15 ಜನರು ಒಳಗೆ ಬರುವರು ರಹೀಮನು ಅಜ್ಜನ ಮನೆಗೆ ಹೋಗುವ ಬಾಗಿಲ ಬಳಿ ನಿಲ್ಲುವನು. ಅಜ್ಜನು ಎದ್ದು ರಹೀಮನ ಹಿಂದೆ ನಿಲ್ಲುವನು.)


**S. S. Rubber Stamp mf g. Co., Chikmagalur**



ತಮಗೆ ಅಗತ್ಯ ಬೇಕಾಗುತ್ತಿರುವ ಉತ್ತಮ ತರತರದ ರಬ್ಬರ್ ಮೊಹರುಗಳು, ಅರಗಿನ ಶೀಲುಗಳು, ಬ್ಲಾಕುಗಳೇ ಮುಂತಾದ ಸಾಮಾನುಗಳು ಬೇಕಾದಲ್ಲಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಶ್ರೀ ಸುಬ್ರಹ್ಮಣ್ಯ ರಬ್ಬರ್ ಸ್ಟಾಂಪ್ ಕಂಪೆನಿ, ಚಿಕ್ಕಮಗಳೂರು.**

ಅಜ್ಜ —ಓಹೋ ಏನಪ್ಪ ಸಮಾಚಾರ.

ಅಹ—ಏನೂ ಇಲ್ಲ ಕೆಲವು ಕಾಫರರು ಬೇಕಾಗಿದೆ.

ಅಜ್ಜ—ಆಗಲಿ, ಯಾರು ಬೇಡ ಎನ್ನುವರು?

ಅಹ—ಇಸ್ಲಾಮಿನ ಆಶ್ರಯದಲ್ಲಿ ಒಬ್ಬ ಕಾಫರನೇ?

ಅಜ್ಜ—ರಹೀಂ ನೀನು ತಪ್ಪುದಾರಿ ಹಿಡಿದಿರುವೆ. ಸಂಗಡಿಗರ ದ್ವೇಷಕಟ್ಟಿಕೊಂಡು ಎಲ್ಲಿರುವೆ?

ರಹೀಂ—ಅಜ್ಜನೆಲ್ಲಿರುವನೋ...

ಅಹ—ಒಳ್ಳೇದು-ಇವನೊಡನೆಯೇ ಹೋಗು, ಇಗೋ ಹಿಡಿ

"ಅಲ್ಲಾ ಹು ಅಕ್ಬರ್" ಘೋಷಿಸುವರು.

ಅಜ್ಜ— ಸ್ವಲ್ಪ ತಡೆ ಅಹಮದ್, ಅನ್ಯಾಯವಾಗಿ ಒಬ್ಬ ಮುಸಲ್ಮಾನನನ್ನು ಏಕೆ ಕಳೆದುಕೊಳ್ಳುವಿ? ನಾನು ಶಾಂತಿಯಿಂದ ನಿಮ್ಮಪ್ಪನ ಬಳಿಹೋಗುವೆನು. ಸಾಯುವಾಗ ಅವನು ನಿನ್ನನ್ನು ನನಗೊಪ್ಪಿಸಿಹೋಗಿದ್ದನು. ಮಗೂ, ದಾರಿ ಬಿಡು, ಅವರು ಮನಬಂದಂತೆ ಮಾಡಿಕೊಳ್ಳಲಿ....

'ಓಹೋ! ಬಂದೇ ಬಿಟ್ಟ. ಆ ದುರ್ಜನಸಿಂಹ ಬಂದೇ ಬಿಟ್ಟನಲ್ಲ! ಓಹೋ! ಎಷ್ಟೊಂದು ಮಂದಿ ಇದ್ದಾರಪ್ಪ!

(ಒಬ್ಬನು ಕೂಗುತ್ತ ಒಳಗೆ ಬರುವನು. ಅಹಮದನೂ, ಅವನ ಸಂಗಡಿಗರೂ ಅಲ್ಲ ಇಲ್ಲಿ ಅವಿತುಕೊಳ್ಳುವರು. ದುರ್ಜನಸಿಂಹನು ಒಳಗೆ ಬರುವನು)

ಅಜ್ಜ— ಏನಪ್ಪ, ದುರ್ಜನಸಿಂಹ! ಏನು ಬಂದೆ?

ದುರ್ಜ— ನಿನ್ನಿಂದ ಬರಬೇಕಾಯಿತು.

ಅಜ್ಜ— ಅದು ಹೇಗೆ? ನಾನೇನ್ಮಾಡಿದ್ದು.

ದುರ್ಜ— ಎಷ್ಟು ಸಾರಿ ಹೇಳಿದರೂ ನೀನು ಈ ಮುಸಲ್ಮಾನರ ಗಲ್ಲಿಯನ್ನು ಬಿಡಲೇ ಇಲ್ಲ. ಏನು? ಏನಾದರೂ ನಿನಗೆ ತೊಂದರೆಗಿಂದರೆ ಮಾಡಿರುವರೋ ಹೇಗೆ?

ಅಜ್ಜ— ಇಲ್ಲಪ್ಪ ಯಾರು ಏನೂ ಮಾಡಿಲ್ಲ. ಎಲ್ಲಿದ್ದಾರಲ್ಲೇ ನಮ್ಮ ಬಳಗ.

ದು— ಸುಳ್ಳು! ಬೆಂಕಿ, ನೀರು ಒಂದಾಗುವುದೇ ಅಜ್ಜ

ಅ— ಹಾಗೋ, ನೀನೆಲ್ಲಿರುವಿ?

ದು— ನಾವೇನೂ ಮಲಗಿಲ್ಲ. ನಮ್ಮ ಗಲ್ಲಿಯಲ್ಲಿ ಸಹ ಸರಿಯಾಗೇ ಮಾಡಿದ್ದೇವೆ.

ಅ— ಏನನ್ನು?

ದು— ಅಲ್ಲಿ ಈಗ ಒಬ್ಬ ಮುಸಲ್ಮಾನನೂ ಉಳಿದಿಲ್ಲ

ಅ— ಒಬ್ಬನೂ ಇಲ್ಲವೇ? ಶಾಬಾಸ್

ದು— ಒಬ್ಬನೂ ಉಳಿದಿಲ್ಲವಜ್ಜ.

ಅ— ದುರ್ಜನಸಿಂಹ, ರಹಮಾನಖಾನ್ ಎಂತಹ ಒಳ್ಳೆ ಮನುಷ್ಯನಿದ್ದ. ಯಾರೇ ಆಗಲಿ ಅವನ ಮೇಲೆ ಕೈಮಾಡಿದರೆಂದರೆ ನಂಬಲಾರೆನಪ್ಪ ನಾನು!

ದು— ಹೌದು ಆದರೆ?

ಅ— ಏನಾದರೆ?

ದು— ಅವನು ಮುಸಲ್ಮಾನನಾದ್ದರಿಂದಲೇ ಅವನನ್ನೂ....

ಅ— ಕೊಂದೇ ಬಿಟ್ಟೆಯಾ? ಅಯ್ಯಯ್ಯೋ! ಅಂದ್ರೆ ಯಾರನ್ನೂ ಬಿಡಲಿಲ್ಲ ಅನ್ನು! ಬಕ್ಷೀರನೂ ಹೋದನೇ-ಎಂತಹ ಒಳ್ಳೆ ಪ್ರಾಣಿ-ನನಗೂ ಕಾಬಾವನ್ನು ತೋರಿಸುತ್ತೇನೆಂದು ಆಗಾಗ ಹೇಳುತ್ತಲೇ ಇದ್ದನು.

ದು— ಇರಲಿ. ಬೇಗ ಏಳಜ್ಜ, ಮಾತಿಗೆ ಸಮಯವಿಲ್ಲ.

ಅ— ಎಲ್ಲಿಗಪ್ಪ

ದು— ನಿಮ್ಮಲ್ಲಿಗೆ ಬರಲು ದಾರಿಯಲ್ಲಿ ಎಷ್ಟು ಮಂದಿಯನ್ನು ಕೊಲ್ಲಬೇಕಾಯಿತು ಗೊತ್ತೇ.

ಅ— ನಾನು ಇಲ್ಲೇ ಇರುವೆನು.

ದು— ಇಲ್ಲಿ ನಿನ್ನ ಪ್ರಾಣಕ್ಕೆ ಸಂಚಕಾರವಿದೆ ಹೊರಡು.

ಅ— ಆಗಲಿ ಹೊರಡು ನೀನು.

ದು— ಹೊರಡು ಎಲ್ಲಿಗೆ? ನಿನಗೆ ಮನಸ್ಸಿಲ್ಲದಿದ್ದರೂ ಮಕ್ಕಳು ಮಂಗಳ ಚಿಂತೆಯಾದರೂ ಬೇಡವೇ?

ಅ— ಪ್ರಾಣಕ್ಕೆ ಬೆಲೆಯುಂಟೇ— ಅದು ನಿನಗೆ ಗೊತ್ತೇ ಇದೆ....ಅಹಹಾ!

ದು— ಇಲ್ಲಿಗೆ ಬರಬೇಕಾಗಿದ್ದ ಅಗತ್ಯವೇನಿತ್ತು ನನಗೆ.

ಅ— ಹೋಗಪ್ಪ ನೀನು ನಾನಿಲ್ಲೇ ಇರುವೆನು

ದು— ಏನಜ್ಜ ಯಾಕಿಷ್ಟು ಸಿಟ್ಟು ನನ್ನ ಮೇಲೆ.

ಅಜ್ಜ—ರಾಮ ರಾಮ, ಸಿಟ್ಟೇ, ಪಾಪ, ನೀನು ಹಿಂದೂ ಧರ್ಮವನ್ನೂ ರಕ್ಷಿಸಿದ್ದೀಯೆ? ಹೋಗು ಮಾಡ್ಹೋಗಪ್ಪ. ಯಾವ ಮುಸಲ್ಮಾನನೂ ಉಳಿಯಲೇ ಇಲ್ಲವೇ. ನೋಡು ಯಾರಾದರೂ ಮಲಗಿರುವರೋ ಹೇಗೆಂದು.

ದು—ನನಗೆ ನೀನು ಹೇಳುವುದು ತಿಳಿಯಿತು. ಹಿಂದುಗಳು ಉಳಿಯಬೇಕೋ ಬೇಡವೋ.

ಅ—ಹಿಂದುಗಳ ಅಸ್ತಿತ್ವ, ಹೌದು ಮುಸಲ್ಮಾನರದೂ ಅಸ್ತಿತ್ವವಿದೆ. ಇಬ್ಬರಿಗೂ ಅವರವರ ಅಸ್ತಿತ್ವದ ರಕ್ಷಣೆ ಬೇಕಾಗಿದೆ. ನೋಡು, ಎಷ್ಟರ ಮಟ್ಟಿನ ರಕ್ಷಣೆಯಾಗುತ್ತಿದೆ? ಶಾಬಾಸ್ ಅಸ್ತಿತ್ವದ ರಕ್ಷಣೆ!

ದು—ಧರ್ಮವನ್ನಂತೂ ಕಾಪಾಡಲೇ ಬೇಕಲ್ಲವೆ?

ಅಜ್ಜ—ಧರ್ಮ! ಧರ್ಮ! ಎಂತಹ ಶಬ್ದಗಳು! ಆ ಎಳೆಗೂಸುಗಳ ಚೀತ್ಕಾರ! ಆಹಾ ಕೇಳಲಾರೆ.

ದುರ್ಜ—ಏನಿದು ಅಜ್ಜ.

ಅಜ್ಜ—ಹಂತಕನು ಕೊರಳು ಕತ್ತರಿಸುತ್ತಿದ್ದಾನೆ. ಆದರೂ ತಾನು ಪಾಪ

ಮಾಡುತ್ತಿರುವೆನೆಂದು ಹೆದರುತ್ತಿದ್ದಾನೆ! ಮತ್ತೂ ನಮ್ಮ ಧರ್ಮದ ಪೂಜಾರಿ! ಆ ಹತ್ಯೆಯಲ್ಲಿ ಶ್ರದ್ಧೆ ಇದೆ. ಏನು ಬೇಕಾದರೂ ಮಾಡಬಹುದು!

ದುರ್ಜ—ಅಜ್ಜ! ಅಜ್ಜ!

ಅ—ಏನು?

ದು—ನಾನು ಕೊಂದೆನೆ?

ಅಜ್ಜ—ಇಲ್ಲ. ಏಕೆಂದರೆ ಶ್ರದ್ಧೆಯಿಂದ ಮಾಡಿದ್ದೆಲ್ಲವೂ ಧರ್ಮ ತಾನೇ! ಇನ್ನೊಂದು ಮಾತು ಹೇಳಿಬಿಡುತ್ತೇನೆ ಕೇಳು. ನೀನು ಮಾಡಿದುದೆಲ್ಲವನ್ನೂ ನೆನೆದು ನನ್ನ ಶರೀರವು ನಡುಗಹತ್ತಿದೆ.

ದು- ಸಾಕು ಅಷ್ಟು ಭಯಂಕರ....

ಅಜ್ಜ- ಅಲ್ಲ, ನಿನಗೆ ಅದು ಭಯಂಕರವಲ್ಲ ಇಂದು ಯಾವ ಮನೆಗಳಲ್ಲಿ ದೀಪಕ್ಕೆ ಬದಲಾಗಿ, ಕತ್ತಲೆಯು ಇದೆಯೋ ಅದು ನಿನ್ನ ಧರ್ಮದ ಫಲ ತಾನೇ? ಅಲ್ಲೇನೋ ಧರ್ಮವಿರುವುದು? ಅಥವಾ ಬೇರೆ ಇನ್ನೆಲ್ಲಿಯಾದರೂ ಇದೆಯೋ?

ದುರ್ಜ- ಅಜ್ಜ, ಏನಿದು?

ಅ- ಇಲ್ಲ ದುರ್ಜನಸಿಂಹ, ನನಗೇ ಏನೂ ತೋರದಂತಾಗಿದೆ. ಆ ಮನೆಗಳಿಗೆ ಹೋಗಿ ನೋಡಿರುವೆಯಾ?

ದು—ಓಹೋ! ಅಲ್ಲಿಗೊ? ತಲೆತಿರುಗುವುದಜ್ಜ!

ಅಜ್ಜ—ಏಕೆ? ಅಲ್ಲಿ ಧರ್ಮವಿದೆಯಲ್ಲ! ಧರ್ಮ ಮಾಡುತ್ತ ಮಾಡುತ್ತ ಸಮಸ್ತ ವಿಶ್ವದಲ್ಲಿ ಅಂಧಕಾರವು ಹರಡಿದಾಗ ಎಲ್ಲೆಲ್ಲೂ ಧರ್ಮವೇ ಧರ್ಮವಾಗುವದಲ್ಲ!

ದು—ನಾನು ಹೊರಡಲೆ? ನೀನು ಬರುವುದಿಲ್ಲ ತಾನೇ

ಅ—ಎಲ್ಲಿಗೆ-ಇಷ್ಟು ಕೊಲೆಮಾಡಿ-

ದು—ಅಜ್ಜ ಕ್ಷಮಿಸು, ರಾಮ ರಾಮ, ಕತ್ತಲೆಯಲ್ಲಿ ಯಾರೂ ಕಾರಣದಂತೆ ಅವಿತುಕೊಳ್ಳುವೆನು.

ಅಜ್ಜ—ರಾಮ, ರಾಮ, ಅಹಮದ್ ಭಾಯಿ ಆ ಪ್ರೋ, ಈಗ ನಿನ್ನ ಮನಸ್ಸಿಗೆ ಬಂದಂತೆ ಮಾಡಿಕೊ. ಇದೇಕೆ? ಹೇಳಣ್ಣ.

ಅಹ— ಹಾಂ!

ಅಜ್ಜ—ಬಾ, ಮತ್ತೆ

ಅಹ—ಅಜ್ಜ! ಅಜ್ಜ!

ಅಜ್ಜ—ಹೌದಪ್ಪ!

ಅಹಮದ್—ಹೋಗಲಿ ಬಿಡಜ್ಜ, ನೀನು ನನಗೂ ಅಜ್ಜನೇ ಆಗಿರು.

(ಸುಬ್ರಹ್ಮಣ್ಯಂ)

## ವಿನೋದದಲ್ಲಿ

ಸರ್ಕಸ್ಸಿಗೆ ಓರ್ವನು ತಡವಾಗಿ ಬಂದು ಜನರನ್ನು ಎಡವುತ್ತ ತನ್ನ ಸ್ಥಳಕ್ಕೆ ಹೊರಟಿದ್ದನು.

ಆಗ ಒಬ್ಬನು ಅವನಿಗೆ ನೋಡಿಕೊಂಡು ನಡೆಯಲು ಎಚ್ಚರಿಕೆ ಕೊಟ್ಟನು.

'ನೋಡಲಿಲ್ಲ ಕ್ಷಮಿಸಬೇಕು' ಎಂದು ಅವನು ವಿಷಾದ ವ್ಯಕ್ತಮಾಡಿದನು.

'ಆನೆಗಳೆಲ್ಲ ಸರ್ಕಸದ' ವರ್ತುಲದಲ್ಲಿವೆ. ಇದೆಲ್ಲಿಯದು ಬಂತೆಂದು ನಾನು ನೋಡಿದೆ. ಆನೆಯಲ್ಲ, ನೀವು ಎಂದು ತಿಳಿಯಿತು ಎಂದು ಅವನು ಉತ್ತರ ಕೊಟ್ಟನು.

## ಅಂತರಂಗದ ವಾಚಕರಲ್ಲಿ ವಿನಂತಿ

ಅಂತರಂಗದ ಹೊಸ ವ್ಯವಸ್ಥೆಯ ಬಗ್ಗೆ ಒಂದು ವಾರ ರಜೆ ತೆಗೆದುಕೊಳ್ಳಬೇಕಾಗಿರುವುದರಿಂದ ತಾ. 18—9—'40ರ ಸಂಚಿಕೆಯು ಹೊರಡುವುದಿಲ್ಲ. ತಾ. 25—9—'40ರಿಂದ ಅದಷ್ಟು ಸುಂದರವಾಗಿ ಸಂಚಿಕೆಗಳು ಯಥಾಪ್ರಕಾರ ಪ್ರಕಟಿಸಲ್ಪಡುವವು. ಅಂತರಂಗದ ಈ ವರೆಗಿನ ಏಜೆಂಟರು, ಜಾಹೀರಾತುದಾರರೇ ಮೊದಲಾದವರು ಇನ್ನುಮುಂದೆ ಹೊಸ ಚಾಲಕರೊಡನೆ ಎಗ್ರಿಮೆಂಟ್ ಮಾಡಿಕೊಳ್ಳತಕ್ಕದ್ದು. ಚಂದಾದಾರರು ಕೂಡಾ ಇನ್ನು ಮುಂದೆ ಚಂದಾಹಣವನ್ನು ಈ ಕೆಳಗಣ ವಿಳಾಸಕ್ಕೇನೇ ಕಳುಹಿಸತಕ್ಕದ್ದು. ಮುಂಗಡ ಹಣಕೊಡದೆ ಯಾವ ಏಜಂಟರಿಗೂ ಸಂಚಿಕೆ ಕಳುಹಿಸಲಾಗುವುದಿಲ್ಲ. ಏಜಂಟರು ತಮಗೆ ಬೇಕಾದ ಪ್ರತಿಗಳನ್ನು ಮುಂದಾಗಿ ತಿಳಿಸಿ ಹಣ ಕಳಿಸತಕ್ಕದ್ದು. ಅಂತರಂಗವನ್ನು ಅಖಿಲ ಕರ್ನಾಟಕ ವಿನೋದಪರ ವಾರಪತ್ರಿಕೆಯನ್ನಾಗಿ ಇನ್ನುಮುಂದೆ ಪ್ರಕಟಿಸಲಾಗುವುದು. ವಿನೋದಪರ ಲೇಖನ, ಕತೆ, ಕವನ, ವ್ಯಂಗ್ಯ ಲೇಖನಾದಿಗಳಿಗೆ ಮೊದಲಿನ ಸ್ಥಾನ ಕೊಡಲಾಗುವುದು. ಕನ್ನಡಿಗರೆಲ್ಲರೂ ಯಥಾಪ್ರಕಾರ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೇನೇಜರ್
ಅಂತರಂಗ
ನವಯುಗ ಆಫೀಸು
ಉಡುಪಿ.

"ಗೆಳೆಯರ ತಂಡ" ಸ್ಥಾಪನೆ: ೧೯೩೮

ವಾರ ೯೮ ಸದಸ್ಯರು ೨೭೧

ಅಖಿಲ ಕರ್ನಾಟಕದಲ್ಲಿ ಹಬ್ಬಿರುವ ಏಕೈಮಾತ್ರ ಮಿತ್ರಮಂಡಲಿ.

**ಪ್ರಿಯ ಗೆಳೆಯರೇ,**

ಕನ್ನಡನಾಡಿನ ಕೀರ್ತಿ ಕಿರೀಟವು ಇಂದೀಗ ನಮ್ಮೆಲ್ಲರ ಗೆಳೆಯ ಸಮಾನರಾದ ಶ್ರೀ ಜಯಚಾಮರಾಜ ಒಡೆಯರ ತರುಣ ಶಿರವನ್ನಲಂಕರಿಸಿರುವುದೆಂಬುದು ನಮಗೆಲ್ಲರಿಗೂ ಅದೆಷ್ಟು ಆನಂದ! ದಿವಂಗತ ಶ್ರೀಕೃಷ್ಣರಾಜೇಂದ್ರ ಒಡೆಯರು ನಮಗೆಲ್ಲರಿಗೂ ಹಿರಿಯರಾಗಿ ಪೂಜನೀಯರಾಗಿದ್ದಾರೆ, ಅವರ ಸ್ಥಾನವನ್ನೀಗ ಅಲಂಕರಿಸಿರುವ ಶ್ರೀ ಜಯಚಾಮರಾಜೇಂದ್ರರು ನಮ್ಮ ಬಂಧುವಾಗಿ ಪ್ರಿಯರಾಗಿದ್ದಾರೆ. ಅವರು ಮೈಸೂರಿನ ಪಟ್ಟಕ್ಕೇರಿರುವುದೆಂದರೆ ಕನ್ನಡಿಗರಾದ ನಮ್ಮೆಲ್ಲರ ತಾರುಣ್ಯ ಶಕ್ತಿಯು ಪಟ್ಟಕ್ಕೇರಿದಂತೆಯೇ ಸರಿ. ಈ ಸಂದರ್ಭದಲ್ಲಿ ಅವರನ್ನು ನಾವು ಅಭಿನಂದಿಸುವುದೆಂದರೆ ನಮ್ಮನ್ನೇ ನಾವು ಅಭಿನಂದಿಸಿಕೊಂಡಂತೆ. ನಮ್ಮೆಲ್ಲರ ಆಶಾಜ್ಯೋತಿಯಾಗಿರುವ ಶ್ರೀ ಜಯಚಾಮರಾಜೇಂದ್ರರ ಆಳ್ವಿಕೆಯಲ್ಲಿ ಸರ್ವತೋಮುಖವಾದ ಪ್ರಗತಿಯಲ್ಲಿ ಮುನ್ನಡೆಯುತ್ತಿರುವ ಮೈಸೂರು ಮಾದರಿ ಮೈಸೂರೆಂಬ ಹೆಸರು ಇನ್ನಷ್ಟು ಸಾರ್ಥಕವಾಗುವಂತೆ ಅಭಿವೃದ್ಧಿ ಹೊಂದಿ, ವಿಶಾಲ ಕರ್ನಾಟಕದ ಉನ್ನತಿಗೆ ಹೆದ್ದಾರಿಯಾಗಲೆಂದೂ, ಕನ್ನಡಿಗರ ಆಕಾಂಕ್ಷೆಗಳು ಕೈಗೂಡುವಂತಾಗಿ ಅಖಿಲ ಕರ್ನಾಟವು ಹಿಂದಿಗಿಂತಲೂ ಹೆಚ್ಚಿನ ವೈಭವ ಮತ್ತು ಕೀರ್ತಿಪಡೆದು ಬೆಳಗುವಂತಾಗಲೆಂದೂ ಆಶಿಸದ ಗೆಳೆಯನಾದರೂ ಯಾರು? ನಾವೆಲ್ಲರೂ ಹಿಗ್ಗಿನ ಸುಗ್ಗಿಯಲ್ಲಿ ಸುಗ್ಗಿ ನಲಿವ ಸಂದರ್ಭವಲ್ಲವೇ ಇದು.

ಚಿಕ್ಕಂದಿನಿಂದಲೇ ಸರಿಯಾದ ವಿದ್ಯೆ ಬುದ್ಧಿ ಪಡೆದು ಒಳ್ಳೇ ತರಬೇತಿ ಹೊಂದಿದ್ದಾರೆ. ಬಾಲ್ಯದಲ್ಲಿ ಸ್ಕೌಟ್ ದಳಕ್ಕೆ ಸೇರಿ ಮೈಸೂರಿನ ಚೀಫ್‌ಕಬ್ ಆಗಿ ಕೆಲಸಮಾಡಿದ್ದಾರೆ. ಮೈಸೂರು ಕೋಲೇಜಿನಲ್ಲಿ ಇತರ ವಿದ್ಯಾರ್ಥಿಗಳೊಂದಿಗೇನೇ ಹೊಕ್ಕು ಬೆಳೆದು ಪ್ರೌಢ ವಿದ್ಯೆ ಕಲಿತು ಉತ್ತಮ ವರ್ಗದಲ್ಲಿ ಉತ್ತೀರ್ಣರಾಗಿದ್ದಾರೆ. ರಾಜಋಷಿಯಂತಿದ್ದ ದೊಡ್ಡಪ್ಪನ ಪ್ರೀತಿಗೆ ಪಾತ್ರರಾಗಿ ಅವರ ಕೈಕೆಳಗೆ ಆಡಳಿತಾನುಭವ ಪಡೆದಿರುತ್ತಾರೆ. ರಾಜಪುತ್ರರೆಂದು ಅರಮನೆಯ ವೈಭವದ ಕೃತಕ ವಾತಾವರಣದಲ್ಲೇ ಬೆಳೆದವರಲ್ಲ. ಪ್ರಜಾವರ್ಗದ ನಿತ್ಯಜೀವನವನ್ನು ಕಣ್ಣಾರೆ ಕಂಡು ತಿಳಿದವರಿರುತ್ತಾರೆ. ವಿನಯಪರರೂ, ವಿಚಾರಶಾಲಿಯೂ, ಸೂಕ್ಷ್ಮವಿಚಾರಿಯೂ, ಆಡಂಬರರಹಿತರೂ, ಸುಸಂಸ್ಕೃತರೂ, ಆಗಿ ಇಷ್ಟರಲ್ಲೇ ಜನಪ್ರೀತರಾಗಿದ್ದಾರೆ. ಮೈಸೂರ ಪ್ರಜೆಗಳೆಲ್ಲರೂ ಏಕಕಂಠರಾಗಿ, ಅತ್ಯಾನಂದದಿಂದ ತರುಣ ಮಹಾರಾಜರನ್ನು ಸ್ವಾಗತಿಸಿರುತ್ತಾರೆ.

ಹಳೆಯ ಸಾಮಾಜಿಕ, ರಾಜಕೀಯ ಮತ್ತು ಸಾಂಪತ್ತಿಕ ಪದ್ಧತಿಗಳ ತಳಗಟ್ಟು ಕುಸಿಯಹತ್ತಿ ಹೊಸ ರಚನೆಯಾಗುತ್ತಿರುವ ಕಾಲವಿದು. ತಾರುಣ್ಯದುತ್ಸಾಹದ ನವಶಕ್ತಿಯು ನವನಿರ್ಮಾಣಕ್ಕಾಗಿ ಸೊಂಟಕಟ್ಟಿ ಮುಂದೊತ್ತುತ್ತಿದೆ. ಮೈಸೂರಲ್ಲಿಯೂ ಈ ನವರಚನೆಯ ಮುಂಬೆಳಕು ಹರಿದಿದೆ. ಜನಜೀವನದಲ್ಲಿ ನವಚೈತನ್ಯವುಂಟಾಗಿದೆ. ಈ ಸಂದರ್ಭಕ್ಕೆ ಸರಿಯಾಗಿ ನವತರುಣ ಮಹಾರಾಜರು ಮೈಸೂರಿನ ಅದೃಷ್ಟ ಚಾಲಕರಾಗಿ ಸಿಂಹಾಸನಾರೂಢರಾಗಿದ್ದಾರೆ. ಮೈಸೂರಿನ ರಾಜಕೀಯ ಕೈದಿಗಳೆಲ್ಲಾ ಬಿಡುಗಡೆಹೊಂದಿರುತ್ತಾರೆ. ಶ್ರೀ ಜಯಚಾಮರಾಜೇಂದ್ರರು ಮೈಸೂರಲ್ಲಿ ನವಮನ್ವಂತರವೊಂದನ್ನಾರಂಭಿಸಿ ಪ್ರಜೆಗಳ ಆಕಾಂಕ್ಷೆಗಳನ್ನು ತೃಪ್ತಿಪಡಿಸುವರೆಂದು ಹಾರೈಸಬಹುದೆ?

ಇತಿ ತಮ್ಮ

**ಪ್ರೀತಿಯ ಗೆಳೆಯ.**

# ಪಾಕಿಸ್ಥಾನದ ಯೋಜನೆ

## ಅದರ ಸಾಧ್ಯತೆ ಮತ್ತು ಅಸಾಧ್ಯತೆಯ ವಿಮರ್ಶೆ

ಲೇಖಕರು:
ಶ್ರೀ. ಕೆ. ಕೃಷ್ಣರಾವ್, ಬಿ. ಎ.

### ಮುಸ್ಲಿಂ ಲೀಗಿನ ಬೇಡಿಕೆಗೆ ತಿರಸ್ಕಾರ

ಅಖಿಲಭಾರತ ಮುಸ್ಲಿಂ ಲೀಗಿನ ಏಕಮಾತ್ರ ಧುರೀಣರಾದ (ಲೀಗಿನಲ್ಲಿ ನಿಜವಾಗಿ ಯೋಚನೆಮಾಡಿ ನ್ಯಾಯಾನ್ಯಾಯಗಳನ್ನು ನಿರ್ಧರಿಸಬಲ್ಲವರು ಬೇರೆಯಾರೂ ಇಲ್ಲ) ಮಿ| ಮಹಮ್ಮದಾಲಿ ಜಿನ್ನರು, ರಾಷ್ಟ್ರಮಹಾಸಭೆಯವರು ಅಧಿಕಾರಕ್ಕೆ ಬಂದಾಗ ಹಲಕೆಲವು ಸೂಚನೆಗಳನ್ನು ದೇಶದ ಮುಂದಿರಿಸಿ, ತಮ್ಮ ಸೂಚನೆಗಳಿಗೆ ಮಾನ್ಯತೆ ದೊರೆಯಬೇಕೆಂದು ಕೇಳಿಕೊಂಡರು. ರಾಷ್ಟ್ರಸಭೆಯವರು ಮುಸ್ಲಿಮರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಲು ಸದಾ ಸಿದ್ಧರಾಗಿದ್ದವರು ಮಿ| ಜಿನ್ನರ ಈ ಕೇಳಿಕೆಗಳಿಗೆ ಮಾನ್ಯತೆಯನ್ನು ಕೊಡಲಿಲ್ಲ. ಏಕೆಂದರೆ ಇವುಗಳಿಗೆ ಮಾನ್ಯತೆ ಕೊಡುತ್ತಿದ್ದರೆ ಭಾರತ ರಾಷ್ಟ್ರಸಭೆಯು "ರಾಷ್ಟ್ರಸಭೆ" ಎಂಬ ಹೆಸರನ್ನೇ ಕಳೆದುಕೊಳ್ಳುತ್ತಿದ್ದಿತಲ್ಲದೆ ರಾಷ್ಟ್ರಸಭೆಯು ಕಳೆದ ಅರ್ಧ ಶತಮಾನಕ್ಕಿಂತಲೂ ಅಧಿಕವಾಗಿ ಯಾವ ಧ್ಯೇಯ ಸಾಧನೆಗೆ ಹೋರಾಡುತ್ತಿದ್ದಿತೋ ಆ ಧ್ಯೇಯವನ್ನು ಓರ್ವ ವ್ಯಕ್ತಿಯ, ಅಥವಾ ಒಂದು ಪಂಗಡದ ಹಿತಕ್ಕಾಗಿ ಬಲಿಕೊಟ್ಟಂತಾಗುತ್ತಿದ್ದಿತು. ಅದಕ್ಕಾಗಿ ಮಿ| ಜಿನ್ನರ ಬೇಡಿಕೆಯನ್ನು ರಾಷ್ಟ್ರಸಭೆಯವರು ಮನ್ನಿಸಲಿಲ್ಲ.

ಮುಸ್ಲಿಂ ಲೀಗಿನ ಧುರೀಣರಾದ ಮಿ| ಜಿನ್ನರು ಕೇಳಿದುದಾದರೂ ಏನನ್ನು? ಅವರು ಕೇಳಿದುದು, ರಾಷ್ಟ್ರಸಭೆಯವರಿಂದ ಪಾಲಿಸಲ್ಪಡಲು ಅನರ್ಹವಾಗಿದ್ದಿತೆ? ಎಂಬ ಪ್ರಶ್ನೆಗಳು ತಮ್ಮಂತೆಯೇ ಮುಂದೆ ಬರುವುವು. ಸಂಕ್ಷೇಪವಾಗಿ ಉತ್ತರಕೊಡುವುದಾದರೆ ನಾವು "ಹೌದು" ಎಂದು ಹೇಳಬೇಕಾಗುವದು. ಮಿ| ಜಿನ್ನರು ಅಖಿಲ ಹಿಂದುಸ್ಥಾನದ ಮುಸಲ್ಮಾನರ ಪ್ರತಿನಿಧಿ ಸಭೆಯೆಂದರೆ ಮುಸ್ಲಿಂ ಲೀಗು ಒಂದೇ ಎಂಬುದನ್ನು ಬ್ರಿಟಿಷ್ ಸರಕಾರದವರೂ, ಭಾರತ ರಾಷ್ಟ್ರಸಭೆಯವರೂ ಒಪ್ಪಿಕೊಳ್ಳಬೇಕೆಂದರು. ಇದವರ ಮೊದಲನೆಯ ಕೇಳಿಕೆ. ಬ್ರಿಟಿಷ್ ಸರಕಾರದವರು ಮನಃಪೂರ್ವಕವಾಗಿ ಈ ಕೇಳಿಕೆಗೆ ಮಾನ್ಯತೆಕೊಡುವ ಉದ್ದಿಶ್ಯದಿಂದಿರಲಿಲ್ಲವಾದರೂ, ಹಿಂದೀ ಜನರಲ್ಲಿ ಇಭ್ಭಾಗವನ್ನು ಕಲ್ಪಿಸಿ, ತನ್ಮೂಲಕ ಜನತೆಯ ಸಂಘಶಕ್ತಿಯನ್ನು ಕುಂದಿಸಿ, ತಮ್ಮ ಉದ್ದೇಶ ಸಾಧನೆಯನ್ನು ಮಾಡಿಕೊಳ್ಳುವ ಆಲೋಚನೆಯಿಂದ ಲೀಗನ್ನು ಮುಸ್ಲಿಮರ ಸಂಸ್ಥೆಯೆಂದು ಗಣಿಸುವಂತೆ ನಟಿಸಿದರು. ಸರಕಾರದವರ ವರ್ತನೆಯನ್ನು ನೋಡಿ ಹರ್ಷಿತರಾದ ಮಿ| ಜಿನ್ನರು ಸರಕಾರದವರು ಅಂಗೀಕಾರ ಕೊಟ್ಟಂತೆಯೇ ರಾಷ್ಟ್ರಸಭೆಯವರೂ ಲೀಗಿಗೆ ಏಕೆ ಮೇಲಿನ ರೀತಿಯ ಅಂಗೀಕಾರ ಕೊಡಕೂಡದು? ಎಂದು ವಾದಿಸತೊಡಗಿದರು.

ರಾಷ್ಟ್ರ ಸಭೆಯವರು ಮೇಲಿನ ರೀತಿಯ ಅಂಗೀಕಾರ ಲೀಗಿಗೆ ಕೊಡಲು ಈ ಕಾರಣಗಳಿಂದ ಸಾಧ್ಯವಾಗಲಿಲ್ಲ. ಮೊದಲನೆಯದಾಗಿ, ಲೀಗಿನ ಅನುಯಾಯಿಗಳಾಗಿರುವ ಮುಸ್ಲಿಮರ ಸಂಖ್ಯೆಗಿಂತ ರಾಷ್ಟ್ರ ಸಭೆಯ ಅನುಯಾಯಿಗಳಾಗಿರುವ ಮುಸ್ಲಿಮರ ಸಂಖ್ಯೆಯು ಅನೇಕ ಪಾಲು ಹೆಚ್ಚಾಗಿದೆ. ಆದ್ದರಿಂದ ಮುಸ್ಲಿಂ ಲೀಗು ಹಿಂದೀ ಮುಸಲ್ಮಾನರ ಏಕಮಾತ್ರ ಪ್ರತಿನಿಧಿ ಸಂಸ್ಥೆಯೆಂದು ಹೇಳುವುದಕ್ಕೆ ಅನುಕೂಲವೇ ಇಲ್ಲದೆ ಹೋಯಿತು. ರಾಷ್ಟ್ರಸಭೆಯ ಅನುಯಾಯಿಗಳಾಗಿ ಯಾವಜ್ಜೀವವೂ ದುಡಿದು ರಾಷ್ಟ್ರಸಭೆಯನ್ನೇ ತಮ್ಮ ಪ್ರತಿನಿಧಿಸಂಸ್ಥೆಯೆಂದು ನಂಬಿ ಅದರ ಗೌರವಕ್ಕಾಗಿ ಅನೇಕ ರೀತಿಯ ಕಷ್ಟನಷ್ಟಗಳನ್ನೂ ಜೈಲುವಾಸವನ್ನೂ ಹಲವು ಬಾರಿ ಅನುಭವಿಸಿದ್ದ ಮುಸಲ್ಮಾನ ದೇಶಾಭಿಮಾನಿಗಳನ್ನು ಬರೇ ಒಂದು ಜಾತೀಯ ಸಂಸ್ಥೆಯ ಅನುಯಾಯಿಗಳೆಂದು ಹೆಸರಿಟ್ಟು ರಾಷ್ಟ್ರ ಸಭೆಯಿಂದ ಅವರನ್ನು ಹೊರಹಾಕುವುದು ಯಾವ ರಾಷ್ಟ್ರೀಯ ಸಂಸ್ಥೆಯೂ ಮಾಡಲೊಪ್ಪದ ಕಾರ್ಯ. ಹಾಗೆಯೇ ಭಾರತ ರಾಷ್ಟ್ರ ಸಭೆಯೂ ಮಿ. ಜಿನ್ನರ ಅಪ್ಪಣೆಯ ಮೇರೆಗೆ ರಾಷ್ಟ್ರೀಯ ಮುಸಲ್ಮಾನರನ್ನು ಲೀಗಿನ ಅನುಯಾಯಿಗಳಾಗಬೇಕೆಂದು ಒತ್ತಾಯಿಸಲು ನಿರಾಕರಿಸಿತು ಮಾತ್ರವಲ್ಲ, ಮಿ. ಜಿನ್ನರ ಬೇಡಿಕೆಯು ನ್ಯಾಯ ನೀತಿಗೂ, ವಾಸ್ತವವಾದ ಸಂಗತಿಗೂ ವಿರೋಧವಾಗಿತ್ತಾದರಿಂದ ಅದನ್ನು ತಿರಸ್ಕರಿಸಿತು. ಎರಡ

ನೆಯದಾಗಿ ಮಿ| ಜಿನ್ನರು ಪ್ರತಿಯೊಂದು ಪ್ರಾಂತದಲ್ಲಿಯೂ ಮಂತ್ರಿ ಮಂಡಲಗಳನ್ನು ಸ್ಥಾಪಿಸುವಾಗ ಲೀಗಿನ ಕಡೆಯ ಮಂತ್ರಿಗಳನ್ನೂ ಸೇರಿಸಿಕೊಳ್ಳಬೇಕೆಂದರು. ಇದು ಕೂಡ ಅಸಾಧ್ಯವಾದ ಸಂಗತಿ. ರಾಷ್ಟ್ರ ಸಭೆಯು ಕೆಲವು ಉಚ್ಚ ತತ್ವಗಳನ್ನು ದೇಶದ ಮುಂದಿಟ್ಟು ಆ ತತ್ವ ಪಾಲನೆಗೆ ಬೇಕಾಗಿ ಅಧಿಕಾರ ಸ್ವೀಕರಿಸಿತು. ಅಂತಹ ಸಂದರ್ಭದಲ್ಲಿ ಒಂದು ಜಾತೀಯ ಸಂಗಡದ ಮತ್ತು ರಾಷ್ಟ್ರೀಯ ತತ್ವಕ್ಕೆ ವಿರುದ್ಧವಾದ ತತ್ವವನ್ನಿಟ್ಟುಕೊಂಡ ಪಕ್ಷದವರನ್ನು ರಾಷ್ಟ್ರೀಯ ಪಕ್ಷದ ಮಂತ್ರಿಗಳೊಡನೆ ಕೆಲಸ ಮಾಡಲು ಸೇರಿಸಿಕೊಳ್ಳುವುದೆಂದರೆ ತತ್ವಕ್ಕೆ ತಿಲಾಂಜಲಿ ಕೊಟ್ಟಂತೆಯೇ ಆಗುತ್ತಿತ್ತು. ಅಲ್ಲದೆ ಮಂತ್ರಿ ಮಂಡಲದಲ್ಲಿ ಏಕಾಭಿಪ್ರಾಯವಿರಬೇಕಾಗಿದ್ದಲ್ಲಿ ಭಿನ್ನಧ್ಯೇಯದ ಭಿನ್ನಾಭಿಪ್ರಾಯಗಳನ್ನು ಹೊಂದಿದ ಸದಸ್ಯರನ್ನು ಮಂತ್ರಿಗಳಾಗಿ ನೇಮಿಸಿದಲ್ಲಿ ಖಂಡಿತವಾಗಿಯೂ ಆ ಮಂತ್ರಿಮಂಡಲದಲ್ಲಿ ಏಕಾಭಿಪ್ರಾಯವು ಇರಲಾರದು. ಮಂತ್ರಿಮಂಡಲದಲ್ಲಿರಬೇಕಾದ ಒಗ್ಗಟ್ಟಿನ ಬದಲಾಗಿ ಸದಾ ಬಿಕ್ಕಟ್ಟೇ ಪ್ರಾಪ್ತವಾಗುವ ಸಂಭವವು ಬರುತ್ತಿತ್ತು. ಈ ಕಾರಣದಿಂದಾಗಿ ರಾಷ್ಟ್ರ ಸಭೆಯವರು ಲೀಗಿನವರೊಡನೆ ಸಂಯುಕ್ತ ಮಂತ್ರಿಮಂಡಲ ಸ್ಥಾಪಿಸಲು ಒಪ್ಪಲಿಲ್ಲ. ಇದು ಮಿ| ಜಿನ್ನರ ಅಸಮಾಧಾನಕ್ಕೆ ಎರಡನೆಯ ಕಾರಣ. ಲೀಗಿನವರನ್ನು ಕೇಳಿ ಅವರು ಸೂಚಿಸುವವರನ್ನು ಕಾಂಗ್ರೆಸಿನವರು ಮಂತ್ರಿಗಳನ್ನಾಗಿ ನೇಮಿಸಬೇಕೆಂಬುದು ಮೂರನೆಯ ಬೇಡಿಕೆ. ರಾಷ್ಟ್ರಸಭೆಯು ಒಂದು ಪಕ್ಷವಾಗಿ ಚುನಾವಣೆಗೆ ನಿಂತಾಗ, ರಾಷ್ಟ್ರ ಪಕ್ಷದ ಮುಸಲ್ಮಾನರೇ ಬಹುಮತ ಪಡೆದು ಚುನಾಯಿತರಾಗಿದ್ದಾಗ, ಮಂತ್ರಿಗಳಾಗಲು ಅರ್ಹತೆಯುಳ್ಳವರು ಕಾಂಗ್ರೆಸ್ ಪಕ್ಷದಲ್ಲಿಯೇ ಇದ್ದಾಗ ಲೀಗಿನವರನ್ನು ಕೇಳಿಕೊಂಡು, ಅವರಿಂದ ಶಿಫಾರಸು ಮಾಡಲ್ಪಟ್ಟವರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುವ ಆಗತ್ಯವೇ ರಾಷ್ಟ್ರ ಸಭೆಯವರಿಗೆ ಇದ್ದಿಲ್ಲವಾದ್ದರಿಂದ ಈ ಸಂಗತಿಯಲ್ಲಿಯೂ ಅವರು ಲೀಗಿನ ಅಪ್ಪಣೆಯನ್ನು ತಿರಸ್ಕರಿಸಿದರು. ಇಷ್ಟರಲ್ಲಿ ಪಂಡಿತ ಜವಹರಲಾಲರು ರಾಷ್ಟ್ರ ಸಭೆಯು ಮುಸ್ಲಿಂ ಜನತೆಯೊಡನೆ ಹೆಚ್ಚಿನ ಸಮೀಪ ಬಾಂಧವ್ಯವನ್ನು ಬೆಳೆಸಬೇಕೆಂದು ಹೇಳಿದ್ದರಿಂದ ತಮ್ಮ ಅನುಯಾಯಿಗಳೆಲ್ಲರೂ ತಮ್ಮನ್ನು ತ್ಯಜಿಸಿ ರಾಷ್ಟ್ರೀಯ ಸಭೆಯನ್ನು ಸೇರಿಕೊಳ್ಳಬಹುದೆಂದು ಭೀತರಾದ ಮಿ| ಜಿನ್ನರು ರಾಷ್ಟ್ರೀಯ ಸಭೆಯನ್ನೇ ಹಳಿಯತೊಡಗಿದರು.

## ಮಿ| ಜಿನ್ನರ ಪ್ರಯತ್ನ ಸಫಲವಾಗಲಿಲ್ಲ

ರಾಷ್ಟ್ರಸಭೆಯನ್ನು ಹಳಿದರೂ, ಮುಸಲ್ಮಾನರು ಅದನ್ನು ಗೌರವಿಸುತ್ತಲೆ ಇದ್ದರು. ನೋಡಿ ಮಿ| ಜಿನ್ನರಿಗೆ ಬಹಳ ಅಸಮಾಧಾನವಾಯಿತು. ಮುಸಲ್ಮಾನ ಜನತೆಯ ದೃಷ್ಟಿಯಲ್ಲಿ ರಾಷ್ಟ್ರಸಭೆಯನ್ನು ಒಂದು ಕ್ಷುದ್ರ ಸಂಸ್ಥೆಯೆಂದು ತೋರಿಸುವುದಕ್ಕಾಗಿ ಅಪಪ್ರಚಾರ ನಡೆಸಲಾರಂಭಿಸಿದರು. ಇದರಿಂದಲೂ ಹೆಚ್ಚು ಫಲ ಸಿಗಲಿಲ್ಲ.

## ರಾಷ್ಟ್ರಸಭೆಯ ಮೇಲೆ ದೋಷಾರೋಪಣೆ

ಮುಸ್ಲಿಂ ಜನರಲ್ಲಿ ಹೆಚ್ಚು ತಿಳಿದವರು ಮಿ| ಜಿನ್ನರ ಅಪಪ್ರಚಾರಕ್ಕೆ ಕಿವಿ ಕೊಡದಿದ್ದುದನ್ನು ನೋಡಿ ತಮ್ಮ ಪ್ರಚಾರವು ಅಲ್ಪಜ್ಞರಲ್ಲಿ ಹೆಚ್ಚು ಪರಿಣಾಮಕಾರಿಯಾದೀತೆಂದು ಗಣಿಸಿ ಅವರು ಮುಸ್ಲಿಂ ಜಾತಿಯು ನಾಶವಾಗುತ್ತದೆ, ಜಾಗ್ರತರಾಗಿ ಎಂಬ ಹೊಸ ಕೂಗನ್ನು ಎಬ್ಬಿಸಿದರು. ವಂದೇ ಮಾತರಂ ಪದ್ಯ ಹಾಡುವುದು ಮುಸ್ಲಿಂ ಧರ್ಮಕ್ಕೆ ವಿರೋಧ! ಗಾಂಧಿಜಿಯವರ ಪಟವನ್ನು ಶಾಲೆಗಳಲ್ಲಿ ಇಡುವುದು ಮುಸ್ಲಿಮ ಧರ್ಮಕ್ಕೆ ವಿರೋಧ! ತ್ರಿವರ್ಣ ಧ್ವಜವನ್ನು ಏರಿಸುವುದು ಮುಸ್ಲಿಂ ಧರ್ಮಕ್ಕೆ ವಿರೋಧ! ಎಂಬಿತ್ಯಾದಿಯಾಗಿ ಕೂಗೆಬ್ಬಿಸಿ ಅಲ್ಪಜ್ಞರಲ್ಲಿ ಜಾತೀಯತೆಯ ಹುರುಪನ್ನು ಹುಟ್ಟಿಸಿದರು.

## ಪೀರ್‌ಪುರದ ರಾಜರ ವರದಿ

ಮೇಲಿನ ಉದ್ದೇಶದಿಂದ ರಾಷ್ಟ್ರೀಯ ಮಂತ್ರಿಮಂಡಲಗಳ ಮೇಲೆ ಅಲ್ಲದ ಸಲ್ಲದ ದೋಷಾರೋಪಣೆಗಳನ್ನು ಮಾಡುವ ಉದ್ದೇಶದಿಂದಲೇ ಎಂಬಂತೆ ಪೀರ್ ಪುರದ ರಾಜರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನೇರ್ಪಡಿಸಿದರು. ಪೀರ್‌ಪುರದ ರಾಜರು ಕೆಲವು ಪ್ರಾಂತಗಳಿಗೆ ಹೋಗಿ ಲೀಗಿನ ಕಡೆಯವರ ಹೇಳಿಕೆಗಳನ್ನು ಕೇಳಿಕೊಂಡು ಏಕಪಕ್ಷವಾದ ಕೆಲವು ತೀರ್ಮಾನಗಳನ್ನು ಮಾಡಿ ಅವು ಸತ್ಯ ಸಂಗತಿಗಳೆಂದು ಸಾರಿದರು. ಆವರೆ ಈ ಆಕ್ಷೇಪಣೆಗಳು ನಿರಾಧಾರವಾದವುಗಳು; ಸುಳ್ಳು ಸುದ್ದಿಯ ಕಂತೆಗಳು; ಏಕಪಕ್ಷದವರ ಹೇಳಿಕೆಗಳು ಎಂಬುದಾಗಿ ಗವರ್ನರರುಗಳೂ, ಭಾರತ ಮಂತ್ರಿಗಳೂ, ಐ. ಸಿ. ಯಸ್. ಅಧಿಕಾರಿಗಳೂ ಅಭಿಪ್ರಾಯ ಪಟ್ಟಿದ್ದಾರೆ. ಕಾಂಗ್ರೆಸಿನವರು ಆರೋಪಣೆಗಳನ್ನು ರುಜುಪಡಿಸಬೇಕೆಂದೂ, ಅನ್ಯಾಯ ನಡೆದ ಸ್ಥಳಗಳಿಗೆ ಹೋಗಿ ಅಲ್ಲಿ ಸತ್ಯ ಸಂಗತಿಯ ಬಗ್ಗೆ ವಿಚಾರಣೆ ಮಾಡಬೇಕೆಂದೂ ತಾವು ಅಂತಹ ವಿಚಾರಣೆಗಳಿಗೆ ಸಿದ್ಧರೆಂದೂ ಹೇಳಿದರೂ ಲೀಗಿನವರು ತಾವು ಸಂಪೂರ್ಣ ಬೆಳಕಿಗೆ ಬೆಳಕಿಗೆ ಬೀಳುವುದಾಗಿ ಹೆದರಿ ಅಂತಹ ವಿಚಾರಣೆಗಳಿಗೆ ಒಪ್ಪದೆಹೋದರು!

## ಪಾಕಿಸ್ಥಾನದ ಯೋಜನೆ

ಪೀರ್‌ಪುರ ವರದಿಯಿಂದಲೂ ತಮ್ಮ ಉದ್ದೇಶ ಸಾಧಿಸದಿರುವುದನ್ನು ನೋಡಿ ಮಿ. ಜಿನ್ನರು, ಮುಸಲ್ಮಾನರು ಒಂದು ಪ್ರತ್ಯೇಕ ಜನಾಂಗಕ್ಕೆ ಸೇರಿದವರು (ಹಿಂದೀ ರಾಷ್ಟ್ರಕ್ಕೆ ಸೇರಿದದರಲ್ಲ) ತಮಗೂ ಇತರ ಹಿಂದೀಯರಿಗೂ ಯಾವ ತರದ ಸಂಬಂಧವೂ ಇಲ್ಲ. ಮುಸಲ್ಮಾನ ಧರ್ಮವು ಶಾಶ್ವತವಾಗಿರಬೇಕಾದರೆ ಹಿಂದುಸ್ಥಾನವನ್ನು ವಿಭಾಗಿಸಿ ಮುಸ್ಲಿಮರು ಅಧಿಕ ಇರುವ ಕಡೆಗಳನ್ನು (ಪ್ರಾಂತಗಳನ್ನು) ಮುಸ್ಲಿಮರ ಅಧಿಕಾರಕ್ಕೆ ಬಿಡಬೇಕು, ಎಂದು ವಾದಿಸಿದರು. ಮಿ| ಜಿನ್ನರ ಅನುಯಾಯಿಗಳು ಈ ಹೇಳಿಕೆಯನ್ನು ಕೊಂಡಾಡಿ ಈಗ ಪಾಕಿಸ್ಥಾನದ ಕೂಗನ್ನೆಬ್ಬಿಸಿದ್ದಾರೆ.

ಮೇಲಿನ ಯೋಜನೆಯು ಸಾಧ್ಯವೇ? ಸಾಧ್ಯವಾದರೆ ಹೇಗೆ ಸಾಧ್ಯ? ಎಂಬುದನ್ನು ಮಿ| ಜಿನ್ನರು ಸೂಚಿಸಿಲ್ಲ. ಅವರ ಅನುಯಾಯಿಗಳೂ ಸೂಚಿಸಿಲ್ಲ. ಅವರು ಅದನ್ನು ಸೂಚಿಸುವಂತೆಯೂ ಇಲ್ಲ. ಕಾರಣವಿಷ್ಟೆ: ಕೆಲವು ಪ್ರಾಂತಗಳಲ್ಲಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿದ್ದಾರೆ. ಅಲ್ಲಿ ಇತರ ಪ್ರಬಲ ಅಲ್ಪ ಸಂಖ್ಯಾಕರು ಇದ್ದಾರೆ. ಪಂಜಾಬಿನಲ್ಲಿ ಮುಸ್ಲಿಮರು ಹೆಚ್ಚು ಸಂಖ್ಯೆಯಲ್ಲಿ ಇದ್ದಾರೆ. ಆದರೆ ಸಿಕ್ಕರೂ ಹಿಂದೂಗಳೂ ಪ್ರಬಲವಾದ ಅಲ್ಪ ಸಂಖ್ಯಾಕರೂ ಅಲ್ಲಿದ್ದಾರೆ. ಸಿಕ್ಕರು ಹಿಂದೆ ಪಂಜಾಬಿನಲ್ಲಿ ಪ್ರಭುತ್ವವನ್ನು ಸ್ಥಾಪಿಸಿದವರು. ಅವರು ಮುಸ್ಲಿಮರ ದೌಲತ್ತನ್ನು ಒಪ್ಪುವಂತಿಲ್ಲ. ಬಂಗಾಳದ ಅವಸ್ಥೆಯೂ ಹೀಗೆಯೇ. ಸಂಖ್ಯೆಯಲ್ಲಿ ಮುಸ್ಲಿಮರು ಹೆಚ್ಚಿದ್ದರೂ ವಿದ್ಯೆ, ಬುದ್ಧಿ, ಸ್ಥಾನಮಾನ, ಐಶ್ವರ್ಯ ಇವುಗಳಲ್ಲಿ ಹಿಂದುಗಳಿನ್ನೂ ಅಲ್ಲಿ ಪ್ರಬಲರಾಗಿದ್ದಾರೆ. ಆದುದರಿಂದ ಸಂಪೂರ್ಣ ಮುಸ್ಲಿಂ ಸರಕಾರವು ಅಲ್ಲಿ ಸಾಧ್ಯವಿಲ್ಲ. ಇನ್ನು ಗಡಿನಾಡು: ಅಲ್ಲಿಯವರು ರಾಷ್ಟ್ರೀಯ ಸಭೆಯ ಭಕ್ತರು. ಗಡಿನಾಡಿನಲ್ಲಿ ಮಂತ್ರಿಮಂಡಲ ಸ್ಥಾಪಿಸಿದವರು ರಾಷ್ಟ್ರ ಸಭೆಯವರೇ. ಅಲ್ಲಿಯವರು ಪಾಕಿಸ್ಥಾನದ ಯೋಜನೆಗೆ ಬೆಂಬಲವೇ ಕೊಡುವಂತಿಲ್ಲ. ಪಾಕಿಸ್ಥಾನದ ಆರಾಧಕರು ಸಿಂಧಿನಲ್ಲಿ ಕೆಲವರು ಇರಬಹುದು. ಈ ಪ್ರಾಂತವನ್ನು ಬಂಗಾಳಕ್ಕೆ ಸೇರಿಸಬೇಕಾದರೆ ಅದು ಸಾಧ್ಯವಿಲ್ಲ ಮಧ್ಯದಲ್ಲಿ ಹಿಂದುಗಳು ಅಧಿಕವಿರುವ ಪ್ರಾಂತಗಳು ಬರುತ್ತವೆ. ಹೀಗಾಗಿ ಒಂದು ಪಾಕಿಸ್ಥಾನದ ಬದಲಾಗಿ "ಮರಿ ಪಾಕಿಸ್ಥಾನ"ಗಳು ಹಿಂದುಸ್ಥಾನದ ಎಲ್ಲೆಡೆಗಳಲ್ಲಿಯೂ ಸ್ಥಾಪಿಸಲ್ಪಡಬೇಕಾದೀತು. ಅದುಕೂಡ ಪ್ರಯಾಸದ ಕೆಲಸ ಏಕೆಂದರೆ ರಾಷ್ಟ್ರೀಯ ಪಕ್ಷದ ಮುಸಲ್ಮಾನರು ಪಾಕಿಸ್ಥಾನದ ಅಭಿಪ್ರಾಯಕ್ಕೆ ವಿರೋಧವನ್ನು ತೋರಿಸುವುದರಿಂದ ಅವರು ಪಾಕಿಸ್ಥಾನವನ್ನು ಅಲಕ್ಷ್ಯದಿಂದ ತಿರಸ್ಕರಿಸುವರೆಂಬುದರಲ್ಲಿ ಸಂಶಯವಿಲ್ಲ. ಇನ್ನು ಆರ್ಥಿಕ ದೃಷ್ಟಿಯಿಂದ ಪಾಕಿಸ್ಥಾನವು ಸಾಧ್ಯವೇ ಎಂಬುದನ್ನು ನಾವು ವಿಚಾರಿಸಿ ನೋಡಿದರೆ ಅದು ಕೂಡ ಅಸಾಧ್ಯವೆಂದೇ ಹೇಳಬೇಕಾಗುತ್ತದೆ. ಸಿಂಧ್ ಪ್ರಾಂತದ ಆಡಳಿತೆ ನಡೆಸಲು ಕೇಂದ್ರ ಸರಕಾರದಿಂದ ಹಣಬರಬೇಕು. ಬಡಪ್ರಾಂತವಾದ ಸಿಂಧೂದೇಶವು ಪಾಕಿಸ್ಥಾನದ ಕೇಂದ್ರವಾಗಿರಲು ಸಾಧ್ಯವಿಲ್ಲ.

## ಮಿಲಿಟರಿ ದೃಷ್ಟಿಯಿಂದ ಸಾಧ್ಯವೆ?

ಮಿಲಿಟರಿ ದೃಷ್ಟಿಯಿಂದ, ಅಥವಾ ಪಾಕಿಸ್ಥಾನದ ರಕ್ಷಣೆಯ ದೃಷ್ಟಿಯಿಂದ ಈ ಯೋಜನೆಯು ಶಕ್ಯವೇ ಎಂದು ನಾವೀಗ ವಿಚಾರಿಸಬೇಕು. ಪಂಜಾಬಿನಲ್ಲಿ ಸಿಕ್ಖರೂ, ಹಿಂದೂಗಳೂ ವೀರರಾಗಿರುವರು. ಅವರನ್ನು ಅವರ ಇಷ್ಟವಿಲ್ಲದೆ ಅಂಕೆಯಲ್ಲಿಟ್ಟುಕೊಳ್ಳುವುದು ಅಸಾಧ್ಯ. ಬಂಗಾಳದ ಮುಸ್ಲಿಮರು ಯೋಧರಲ್ಲ. ಅವರನ್ನು ರಕ್ಷಿಸಲು ಇತರ ಕಡೆಗಳಿಂದ ಮುಸ್ಲಿಮರು ಬರಬೇಕು. ಪಶ್ಚಿಮ ಪ್ರಾಂತ್ಯಗಳ ಮುಸ್ಲಿಂ ರಾಷ್ಟ್ರಗಳು ಹಿಂದುಸ್ಥಾನದ ಹೊರಗಿನ ರಾಷ್ಟ್ರಗಳ (ಮುಸ್ಲಿಂ) ಸಹಾಯವನ್ನು ಹಿಂದುಸ್ಥಾನದ ಮುಸ್ಲಿಂ ರಾಜ್ಯಗಳು ತಡೆಯಬೇಕು. ಇದರಿಂದ ಹಿಂದೂಗಳ ಪ್ರಾಂತ್ಯಗಳಿಗೆ ಪಾಕಿಸ್ಥಾನ ಮತ್ತು ಅವುಗಳ ಮಿತ್ರರಾಷ್ಟ್ರಗಳಿಗೂ ಹೋರಾಟ ತಪ್ಪದು. ಆದ್ದರಿಂದ ಪಾಕಿಸ್ಥಾನದ ಯೋಜನೆಯಿಂದ ಮುಸ್ಲಿಮರಿಗೆ ನೆಮ್ಮದಿ ಇರುವಂತಿಲ್ಲ. ಯಾರ ಉದ್ದೇಶದಿಂದ ಪಾಕಿಸ್ಥಾನ ಬೇಕೆನ್ನುವರೋ ಅದರ ವಿರುದ್ಧವಾದ ಫಲವು ದೊರೆತೀತು. ಈ ವಿಷಯಗಳನ್ನೆಲ್ಲಾ ಖಾ. ಬ. ಅಲಾಬಕ್ಷರು ಅಜಾದ್ ಮುಸ್ಲಿಂ ಪರಿಷತ್ತಿನಲ್ಲಿ ಸೂಚಿಸಿದ್ದಾರೆ.

## ತಾತ್ಪರ್ಯ

ಮೇಲಿನ ಸಂಗತಿಗಳಿಂದ ಪಾಕಿಸ್ಥಾನ ಯೋಜನೆಯು ಸಫಲವಾಗುವಂತಿಲ್ಲ. ಮತ್ತು ಹಿಂದುಸ್ಥಾನವು ಒಂದು ಅಭೇದ್ಯ ದೇಶ. ಇದರ ಭೂಗೌಲಿಕ ಆಕೃತಿಯೇ ಅದು ಒಂದು ಅಭೇದ್ಯ ದೇಶವೆಂಬುದನ್ನು ಸೂಚಿಸುತ್ತದೆ. ಹಿಂದೂಗಳೂ, ಸಿಕ್ಖರೂ, ಹಿಂದೀ ಕ್ರಿಸ್ತರೂ, ಬೌದ್ಧರೂ, ಜೈನರೂ ಮತ್ತು ರಾಷ್ಟ್ರೀಯ ಮುಸ್ಲಿಮರೂ ಈ ಯೋಜನೆಯನ್ನು ಬಲವಾಗಿ ವಿರೋಧಿಸಿದ್ದಾರೆ. ಅವರುಗಳ ವಿರೋಧವು ಎಂದೂ ಕಡೆಮೆಯಾಗಲಾರದು. ಬ್ರಿಟಿಷ್ ಸರಕಾರದವರೂ ಕೂಡ ಹಿಂದುಸ್ಥಾನದ ವಿಭಜನೆಗೆ ತಮ್ಮ ಅಸಮ್ಮತಿಯನ್ನು ತಿಳಿಸಿದ್ದಾರೆ. ಹಾಗಾಗಿ ಈ ಯೋಜನೆಯು ತನ್ನಂತೆಯೇ ಅವಿಯಾಗಿ ಹೋಗುವುದು ಖಂಡಿತ. ಆದ್ದರಿಂದ ಮಿ| ಜಿನ್ನರು ಈ ಅಸಾಧ್ಯಯೋಜನೆಯಿಂದ ತಮ್ಮ ಅಲ್ಪಜ್ಞರಾದ ಅನುಯಾಯಿಗಳನ್ನು ವಂಚಿಸಬಹುದಲ್ಲದೆ.

(೧೫ನೆ ಪುಟ ನೋಡಿರಿ).

Printed & Published by P. A. K. Upadhyaya at Thulunad Press Udipi.

# ನಮ್ಮಲ್ಲಿ

## — ಕನ್ನಡ ಪುಸ್ತಕಗಳು —

| | | | |
|---|---|---|---|
| ಶಾಂತಿ ಪುರಾಣ .... .... | 3 | 0 | 0 |
| ಚಂದ್ರಗುಪ್ತ ಚಕ್ರವರ್ತಿ .... | 1 | 0 | 0 |
| ಸರಸ್ವತಿ .... .... (ಸಾಮಾಜಿಕ ನಾಟಕ) | 0 | 8 | 0 |
| ಒಂದೇ ತಿಂಗಳಲ್ಲಿ ಇಂಗ್ಲಿಷ್ .... (ಇಂಗ್ಲಿಷ್ ಸ್ವಯಂಬೋಧಿನಿ) | 0 | 8 | 0 |
| ಸಾಮುದ್ರಿಕ ಶಾಸ್ತ್ರ .... | 0 | 8 | 0 |
| ಹೊಂದೊವಲ ಹಂಬಲು .... | 0 | 6 | 0 |
| ವೀರಭೂಮಿ (ಕತೆ) .... | 0 | 1 | 6 |
| ಗೀತೆಯ ಕೈಗನ್ನಡಿ .... | 0 | 4 | 0 |
| ಗೀತೆಯ ಮೂಲ .... (ಈಶಾವಾಸ್ಯೋಪನಿಷತ್ತಿನ ಭಾಷಾಂತರ) | 0 | 1 | 0 |
| ಸ್ತ್ರೀಪದ್ಯರತ್ನಾಕರ ಭಾಗ I | 0 | 1 | 0 |
| ,, II | 0 | 1 | 0 |
| ,, III | 0 | 1 | 0 |
| ,, IV | 0 | 1 | 0 |
| ಪುರಂದರ ದಾಸರ ಪದ ಭಾಗ I | 0 | 4 | 0 |
| ,, II | 0 | 4 | 0 |
| ,, III | 0 | 4 | 0 |
| ,, IV | 0 | 4 | 0 |
| ಮಧುವನ .... .... | 1 | 8 | 0 |
| ಧರ್ಮಸಂಕಟ (ಸಾಮಾಜಿಕ ನಾಟಕ) | 0 | 4 | 0 |
| Gouthama the Buddha | 0 | 8 | 0 |
| ಭಗವದ್ಗೀತೆ .... .... | 0 | 2 | 0 |
| ಕುಕ್ಕುಟ ಪಂಚಾಂಗ ... | 0 | 1 | 0 |
| ಮಗ್ಗಿ .... .... | 0 | 0 | 6 |
| ತುಳುನಾಡ್ ತಿಲಕ ಪಂಚಾಂಗ | 0 | 1 | 0 |
| ವೈಜಯಂತಿ ಪಂಚಾಂಗ .... | 0 | 2 | 6 |
| ಜಯಪಾಂಡ್ಯ ವಿಜಯ .... | 0 | 2 | 0 |

## — ತುಳು ಪುಸ್ತಕಗಳು —

| | | | |
|---|---|---|---|
| ಕೃಷ್ಣ ಸಂಧಾನ (ಪ್ರಸಂಗ) ... (ಕನ್ನಡ ಕೃಷ್ಣ ಸಂಧಾನವನ್ನೊಳಗೊಂಡಿದೆ.) | 0 | 8 | 0 |
| ಬಲೀಂದ್ರ (ಕತೆ) .... | 0 | 2 | 0 |
| ಅಳಿಯ ಸಂತಾನ ಕಟ್ಟ್‌ದ ಗುಟ್ಟು (ವಿಮರ್ಶಾತ್ಮಕ ಲೇಖನ) | 0 | 4 | 0 |
| ಕಾನಿಗೆ (ಪದ್ಯ) .... | 0 | 4 | 0 |
| ತುಳುವ್ಯಾಕರಣ .... | 0 | 8 | 0 |
| ಜನಮುರ್ಲ್ (ನಾಟಕ) .... | 0 | 6 | 0 |
| ಮದ್‌ಮಾಳತ್ ಮದ್‌ಮಾಯೆ (ಕತೆ) | 0 | 2 | 0 |
| ಬಂಗಾರ್‌ದಂಗಿದ ಕತೆ ... | 0 | 1 | 0 |
| ಪದ್ಯಮಾಲಿಕೆ .... | 0 | 1 | 0 |
| ಸತ್ಯನಾರಾಯಣ ಕತೆ .... | 0 | 8 | 0 |
| ಸತೀ ಕಮಲೆ .... | 0 | 6 | 0 |
| ಕನ್ಯೋಪದೇಶ .... | 0 | 2 | 0 |
| ಕನ್ನಡಕೊ .... | 0 | 0 | 6 |
| ವಾಲಿಸುಗ್ರೀವರ ಕಾಳಗ .... | 0 | 3 | 0 |
| ಬೊಬ್ಬರ್ಯ (ಪಾಡ್ದನ) .... | 0 | 2 | 0 |
| ತೊಡಕಿನಾರ್ ,, .... | 0 | 2 | 0 |
| ಮುಂಡತ್ತಾಯ ,, ... | 0 | 2 | 0 |
| ವಿಶ್ವರೂಪ ದರ್ಶನ .... (ಗೀತೆಯ IIನೇ ಅಧ್ಯಾಯದ ಪದ್ಯಾತ್ಮಕ ಭಾಷಾಂತರ) | 0 | 1 | 0 |
| ಭಗವದ್ಗೀತೆ .... .... | 0 | 5 | 6 |

## ತುಳುನಾಡ್ ಪ್ರೆಸ್, ಉಡುಪಿ

# *War Declared On Worry!*

MANY PEOPLE HAVE DECLARED WAR ON WORRIES OF THEIR PRINTING PROBLEM AND HAVE SUCCEEDED WITH THE COMMENDABLE HELF OF THEIR GREATEST ALLY – THE GENERAL SUPPLIES LIMITED UDIPI.,

TBERE IS NO REASON WHY YOU SHOULD FACE THE WORST ENEMY OF HUMANITY – THE WORRY.

SIGN A TREATY WITH THE POPULAR PRINTING FIRM.

**GENERAL SUPPLIES, LIMITED.**

UDIPI —— S. INDIA.